www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಕೆಲವೊಮ್ಮೆ ಸಹಜವೆನಿಸಿದರೂ, ನಮಗೆ ಗೊತ್ತಿಲ್ಲದೆಯೇ ಗೀಳು ಗಂಭೀರ ಸ್ವರೂಪಕ್ಕೆ ತಿರುಗಿರುತ್ತದೆ. ಎಚ್ಚರಗೊಳ್ಳಬೇಕಿರುವುದು ಯಾವಾಗ?

ಆಳ-ಅಗಲ ಭಾರತೀಯ ಹವಾಮಾನ ಇಲಾಖೆಗೆ 150

‘ಹೆಗಡೆ ಕ್ಷೇತ್ರದಲ್ಲಿ ಏನಾದರೂ ಕೆಲಸ ಮಾಡಿದ್ದಾರೆಯೇ?’ 4B

ಬಡತನ ನಿರ್ಮೂಲನೆಗೆ 2 ಶತಮಾನ ಬೇಕು 8

ಸೆನ್ಸೆಕ್ಸ್	ನಿಫ್ಟಿ	₹/$
73,327	22,097	82.86

ಮೋದಿ ಸರ್ಕಾರದ ಗ್ಯಾರಂಟಿ

ರಾಷ್ಟ್ರದ ಅಭಿವೃದ್ಧಿಯಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ

ನಾರಿ ಶಕ್ತಿ ವಂದನಾ ಅಧಿನಿಯಮವು ಮಹಿಳೆಯರಿಗೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಶೇ. 33 ಮೀಸಲಾತಿಯ ಹಕ್ಕನ್ನು ನೀಡುತ್ತದೆ.

cbc 22201/13/0157/2324

ಪ್ರಯಾಣಿಕರ ನೆರವಿಗೆ ಧಾವಿಸಿದ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ

ವಿಳಂಬ ಯಾನ: ಎಸ್‌ಒಪಿ ಜಾರಿ

ಪ್ರಜಾವಾಣಿ ವಾರ್ತೆ/ರಾಯಿಟರ್ಸ್

ನವದೆಹಲಿ: ದೇಶದ ಉತ್ತರದ ಬಹುತೇಕ ಭಾಗಗಳಲ್ಲಿ ದಟ್ಟ ಮಂಜು ಕವಿದು, ಶೀತ ಮಾರುತ ಮುಂದುವರಿದ ಕಾರಣ ಎರಡನೇ ದಿನವಾದ ಸೋಮವಾರ ಕೂಡ ದೆಹಲಿಯಲ್ಲಿ ವಿಮಾನಗಳ ಸಂಚಾರದಲ್ಲಿ ಭಾರಿ ವ್ಯತ್ಯಯ ಉಂಟಾಯಿತು.

ವಿಮಾನಗಳ ರದ್ದತಿ ಅಥವಾ ವಿಳಂಬ ಹಾರಾಟದಿಂದ ರೋಸಿಹೋದ ಪ್ರಯಾಣಿಕರು ಆಕ್ರೋಶ ಹೊರಹಾಕಿದ ಘಟನೆಗಳೂ ನಡೆದವು. ವಿಮಾನಯಾನ ಸಂಸ್ಥೆಗಳ ಸಿಬ್ಬಂದಿ ಜೊತೆ ಪ್ರಯಾಣಿಕರು ವಾಗ್ವಾದ ನಡೆಸುತ್ತಿದ್ದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.

4Aನೇ ಪುಟ ನೋಡಿ

ಸಹಪೈಲಟ್ ಮೇಲೆ ಹಲ್ಲೆ: ಪ್ರಯಾಣಿಕನ ಬಂಧನ

ವಿಮಾನ ಟೇಕಾಫ್ ಆಗುವುದು ವಿಳಂಬವಾಗುವ ಕುರಿತು ಘೋಷಣೆ ಮಾಡುತ್ತಿದ್ದ ಸಹಪೈಲಟ್ ಮೇಲೆ ಪ್ರಯಾಣಿಕ ಸಾಹಿಲ್ ಕಟಾರಿಯಾ ಹಲ್ಲೆ ನಡೆಸಿದ ದೃಶ್ಯ —ಪಿಟಿಐ ಚಿತ್ರ

ನವದೆಹಲಿ(ಪಿಟಿಐ): ನಗರದ ವಿಮಾನ ನಿಲ್ದಾಣದಿಂದ ವಿಮಾನ ಟೇಕಾಫ್ ಆಗುವುದು ವಿಳಂಬ ವಾಗಲಿದೆ ಎಂಬ ಬಗ್ಗೆ ಘೋಷಣೆ ಮಾಡುತ್ತಿದ್ದ ವೇಳೆ, ಇಂಡಿಗೊ ವಿಮಾನದ ಸಹ ಪೈಲಟ್ ಮೇಲೆ ಹಲ್ಲೆ ಮಾಡಿದ ಪ್ರಯಾಣಿಕನನ್ನು ಬಂಧಿಸಿ, ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ಸಾಹಿಲ್ ಕಟಾರಿಯಾ ಬಂಧಿತ. ಸಹ ಪೈಲಟ್ ಅನೂಪ್‌ಕುಮಾರ್ ಹಲ್ಲೆಗೆ ಒಳಗಾದವರು.

ಭಾನುವಾರ ನಡೆದಿದೆ ಎನ್ನಲಾದ ಘಟನೆಯನ್ನು ತೋರಿಸುವ ವಿಡಿಯೊ, ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಸಾಹಿಲ್ ಕಟಾರಿಯಾ ಎಂಬ ಪ್ರಯಾಣಿಕ ವಿಮಾನದೊಳಗೆ ಘೋಷಣೆ ಮಾಡುತ್ತಿದ್ದ ಸಹ ಪೈಲಟ್ ಮೇಲೆ ಹಲ್ಲೆ ನಡೆಸಿರುವುದು ವಿಡಿಯೊದಲ್ಲಿದೆ. ಈ ವಿಮಾನವು ಗೋವಾಕ್ಕೆ ಹೊರಟಿತ್ತು.

ದೆಹಲಿಯ ವಿಮಾನ ನಿಲ್ದಾಣದಲ್ಲಿ ದಟ್ಟ ಮಂಜು ಕವಿದಿದ್ದ ಕಾರಣ ಕೆಲ ವಿಮಾನಗಳ ಹಾರಾಟ ವಿಳಂಬವಾಗಿದ್ದರೆ, ಇನ್ನೂ ಕೆಲವು ವಿಮಾನಗಳನ್ನು ರದ್ದುಪಡಿಸಲಾಗಿತ್ತು ಇಲ್ಲವೇ ಮಾರ್ಗ ಬದಲಿಸಲಾಗಿತ್ತು.

ಗೋವಾಕ್ಕೆ ತೆರಳಬೇಕಿದ್ದ ಈ ವಿಮಾನವು, 10 ಗಂಟೆಗೂ ಹೆಚ್ಚು ಕಾಲ ತಡವಾಗಿ, ಸಂಜೆ 6ಕ್ಕೆ ಟೇಕಾಫ್ ಆಗಿತ್ತು ಎಂಬ ಮಾಹಿತಿ ‘ಫ್ಲೈಟ್‌ರೇಡಾರ್24’ ಜಾಲತಾಣದಲ್ಲಿದೆ.

20 ವಿಮಾನಗಳ ಹಾರಾಟ ವಿಳಂಬ

ಬೆಂಗಳೂರು: ತಲುಪಬೇಕಿದ್ದ ನಗರಗಳಲ್ಲಿನ ಪ್ರತಿಕೂಲ ಹವಾಮಾನದ ಕಾರಣದಿಂದ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ಸೋಮವಾರ 20 ವಿಮಾನಗಳು ನಿಗದಿತ ಸಮಯಕ್ಕಿಂತ ತಡವಾಗಿ ಹಾರಾಟ ಆರಂಭಿಸಿದವು.

‘ಬೆಂಗಳೂರಿನಲ್ಲಿ ಹವಾಮಾನದಲ್ಲಿ ಯಾವುದೇ ತೊಂದರೆ ಇರಲಿಲ್ಲ.

4Aನೇ ಪುಟ ನೋಡಿ

ಎಸ್‌ಒಪಿ ಹೀಗಿದೆ

- ತಮ್ಮ ವಿಮಾನಗಳು ವಿಳಂಬವಾಗಿ ಹಾರಾಟ ನಡೆಸುತ್ತಿದ್ದಲ್ಲಿ, ನಿಖರ ಹಾಗೂ ವಾಸ್ತವ ಸಮಯ (ರಿಯಲ್ ಟೈಮ್) ಕುರಿತ ಮಾಹಿತಿಯನ್ನು ವಿಮಾನಯಾನ ಸಂಸ್ಥೆಗಳು ಪ್ರಕಟಿಸಬೇಕು
- ವಾಸ್ತವ ಸಮಯದ ಮಾಹಿತಿಯನ್ನು ಸಂಬಂಧಪಟ್ಟ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು
- ಪ್ರಯಾಣಿಕರಿಗೆ ಎಸ್‌ಎಂಎಸ್/ವಾಟ್ಸ್‌ಆ್ಯಪ್ ಹಾಗೂ ಇ–ಮೇಲ್ ಮೂಲಕವೂ ಮಾಹಿತಿ ನೀಡಬೇಕು
- ವಿಮಾನನಿಲ್ದಾಣಗಳಲ್ಲಿ ಕಾಯುತ್ತಿರುವ ಪ್ರಯಾಣಿಕರಿಗೆ ವಿಮಾನಗಳ ಹಾರಾಟದಲ್ಲಿನ ವಿಳಂಬ ಕುರಿತು ಕರಾರುವಾಕ್ಕಾದ ಮಾಹಿತಿಯನ್ನು ಒದಗಿಸುವ ವ್ಯವಸ್ಥೆ ರೂಪಿಸಬೇಕು
- ವಿಮಾನನಿಲ್ದಾಣಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ, ಪ್ರಯಾಣಿಕರೊಂದಿಗೆ ಸಂವಹನ ನಡೆಸುವಾಗ ಸಂವೇದನಾಶೀಲರಾಗಿರುವಂತೆ ಸಂಸ್ಥೆಗಳು ನೋಡಿಕೊಳ್ಳಬೇಕು
- ವಿಳಂಬ ಕುರಿತು ಪ್ರಯಾಣಿಕರಿಗೆ ಸಂಸ್ಥೆಗಳ ಸಿಬ್ಬಂದಿ ನಿರಂತರವಾಗಿ ಮಾಹಿತಿ ಒದಗಿಸಬೇಕು ಹಾಗೂ ಮಾರ್ಗದರ್ಶನ ನೀಡಬೇಕು

ಪುಣ್ಯಸ್ನಾನ ಮಕರ ಸಂಕ್ರಾಂತಿ ಪ್ರಯುಕ್ತ ಬಾಗಲಕೋಟೆ ಜಿಲ್ಲೆಯ ಬಾದಾಮಿ ಮಹಾಕೂಟೇಶ್ವರ ದೇವಾಲಯದ ಪುಷ್ಕರಣಿಯಲ್ಲಿ ಸೋಮವಾರ ಭಕ್ತರು ಪುಣ್ಯಸ್ನಾನ ಮಾಡಿದರು –ಪ್ರಜಾವಾಣಿ ಚಿತ್ರ

ರಾಜ್ಯಕ್ಕೆ ₹348 ಕೋಟಿ ವಿಪತ್ತು ನಿಧಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಕರ್ನಾಟಕ ರಾಜ್ಯಕ್ಕೆ ಪ್ರಸಕ್ತ ಸಾಲಿನ (2023–24) ಕೇಂದ್ರದ ಪಾಲಿನ ರಾಜ್ಯ ವಿಪತ್ತು ಸ್ಪಂದನೆ ನಿಧಿಯ (ಎಸ್‌ಡಿಆರ್‌ಎಫ್) ಎರಡನೇ ಕಂತು ₹348.80 ಕೋಟಿಯನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಮಧ್ಯಪ್ರದೇಶ, ಕರ್ನಾಟಕ, ಪಂಜಾಬ್ ಮತ್ತು ಉತ್ತರಾಖಂಡ ಈ ನಾಲ್ಕು ರಾಜ್ಯಗಳಿಗೆ ಎರಡನೇ ಕಂತಿನ ಒಟ್ಟು ಮೊತ್ತ ₹ 1,783.20 ಕೋಟಿ ಬಿಡುಗಡೆ ಮಾಡುವಂತೆ ಕೇಂದ್ರ ಹಣಕಾಸು ಸಚಿವಾಲಯದ ವೆಚ್ಚಗಳ ಇಲಾಖೆಯ ಉಪ ಕಾರ್ಯದರ್ಶಿ ತಮ್ಮದೇ ಇಲಾಖೆಯ ಹಿರಿಯ ಲೆಕ್ಕಾಧಿಕಾರಿಗೆ (ರಾಜ್ಯ– ಸಾಲ) 12ರಂದು ಸೂಚನೆ ನೀಡಿದ್ದಾರೆ.

‘ಕೇಂದ್ರ ಗೃಹ ಸಚಿವಾಲಯದಿಂದ ಸ್ವೀಕರಿಸಿದ ಶಿಫಾರಸಿನ ಆಧಾರದಲ್ಲಿ ರಾಜ್ಯ ಸರ್ಕಾರಗಳಿಗೆ ಈ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಹಣವನ್ನು ಸಂಬಂಧಿಸಿದ ರಾಜ್ಯ ಸರ್ಕಾರಗಳ ಖಾತೆಗಳಿಗೆ ತಕ್ಷಣ ಜಮೆ ಮಾಡುವಂತೆಯೂ ಆರ್‌ಬಿಐಗೆ ಮನವಿ ಮಾಡಬೇಕು’ ಎಂದೂ ಸಲಹೆ ನೀಡಿದ್ದಾರೆ.

4Aನೇ ಪುಟ ನೋಡಿ

ಅಯ್ಯಪ್ಪನ ದರ್ಶನ ಪಡೆದ ಭಕ್ತರು

ಪತ್ತನಂತಿಟ್ಟ (ಪಿಟಿಐ): ಮಕರವಿಳಕ್ಕು ಆಚರಣೆಯ ದಿನದಂದು ಸೋಮವಾರ ಇಲ್ಲಿನ ಅಯ್ಯಪ್ಪನ ಬೆಟ್ಟದ ದೇಗುಲದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಹಲವಾರು ತಾಸು ಸರತಿ ಸಾಲಿನಲ್ಲಿ ನಿಂತು ಅಯ್ಯಪ್ಪ ಸ್ವಾಮಿಯ ದರ್ಶನ ಪಡೆದರು. 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕೆವೈಸಿ ಅಪೂರ್ಣ ಫಾಸ್ಟ್ಯಾಗ್ ನಿಷ್ಕ್ರಿಯ

ನವದೆಹಲಿ (ಪಿಟಿಐ): ಖಾತೆಯಲ್ಲಿ ಹಣ ಹೊಂದಿದ್ದಾಗ್ಯೂ ಕೆವೈಸಿ ಪೂರ್ಣಗೊಳಿಸದ ಫಾಸ್ಟ್ಯಾಗ್‌ಗಳನ್ನು ಬ್ಯಾಂಕ್‌ಗಳು ಜನವರಿ 31ರ ನಂತರ ನಿಷ್ಕ್ರಿಯಗೊಳಿಸಲಿವೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಸೋಮವಾರ ಹೇಳಿದೆ.

ಎಲೆಕ್ಟ್ರಾನಿಕ್ ಟೋಲ್ ಸಂಗ್ರಹಣಾ ವ್ಯವಸ್ಥೆಯ ದಕ್ಷತೆ ಹೆಚ್ಚಿಸಲು ಮತ್ತು ಟೋಲ್ ಪ್ಲಾಜಾಗಳಲ್ಲಿ ತಡೆರಹಿತ ಚಾಲನೆಗಾಗಿ ಎನ್‌ಎಚ್‌ಎಐ ‘ಒಂದು ವಾಹನ, ಒಂದು ಫಾಸ್ಟ್ಯಾಗ್’ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಇದು ಬಹು ವಾಹನಗಳಿಗೆ ಒಂದೇ ಫಾಸ್ಟ್ಯಾಗ್ ಬಳಕೆ ಮಾಡುವುದನ್ನು ತಡೆಯುವುದು ಅಥವಾ ನಿರ್ದಿಷ್ಟ ವಾಹನಕ್ಕೆ ಬಹು ಫಾಸ್ಟ್ಯಾಗ್ ಬಳಕೆ ಮಾಡುವುದನ್ನು ತಪ್ಪಿಸುವ ಗುರಿ ಹೊಂದಿದೆ ಎಂದು ಅದು ತಿಳಿಸಿದೆ.

ಆರ್‌ಬಿಐ ಆದೇಶ ಉಲ್ಲಂಘಿಸಿ, ನಿರ್ದಿಷ್ಟ ವಾಹನಕ್ಕೆ ಬಹು ಫಾಸ್ಟ್ಯಾಗ್‌ಗಳನ್ನು ಬಳಸಲಾಗುತ್ತಿದೆ. ಕೆವೈಸಿ (ಗ್ರಾಹಕ ಗುರುತಿನ ದಾಖಲೆ) ಇಲ್ಲದೆ ಫಾಸ್ಟ್ಯಾಗ್ ನೀಡಲಾಗುತ್ತಿದೆ ಎಂಬ ಇತ್ತೀಚಿನ ವರದಿಗಳ ನಂತರ ಎನ್‌ಎಚ್‌ಎಐ ಈ ಕ್ರಮ ಕೈಗೊಂಡಿದೆ ಎಂದು ತಿಳಿಸಿದೆ.

> ‘ಒಂದು ವಾಹನ, ಒಂದು ಫಾಸ್ಟ್ಯಾಗ್’ ಉಪಕ್ರಮವು ಟೋಲ್ ಕಾರ್ಯಾಚರಣೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿಸಲಿದೆ
> **ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ**

ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ, ಕೆವೈಸಿ ನವೀಕರಿಸಿಕೊಳ್ಳಬೇಕು. ಫಾಸ್ಟ್ಯಾಗ್ ಬಳಕೆದಾರರು ತಮ್ಮ ಬ್ಯಾಂಕ್‌ಗಳ ಮೂಲಕ ಈ ಹಿಂದೆ ಪಡೆದಿದ್ದ ಎಲ್ಲ ಫಾಸ್ಟ್ಯಾಗ್‌ಗಳನ್ನು ಬಿಟ್ಟು, ‘ಒಂದು ವಾಹನ, ಒಂದು ಫಾಸ್ಟ್ಯಾಗ್’ ಉಪಕ್ರಮವನ್ನು ಅನುಸರಿಸಬೇಕು ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಒಂದು ವಾಹನಕ್ಕೆ ಇತ್ತೀಚೆಗೆ ನೀಡಲಾಗಿರುವ ಒಂದು ಫಾಸ್ಟ್ಯಾಗ್ ಮಾತ್ರ ಸಕ್ರಿಯವಾಗಿರಲಿದೆ. ಅದೇ ವಾಹನಕ್ಕೆ ಅದಕ್ಕೂ ಹಿಂದೆ ನೀಡಿದ್ದ ಎಲ್ಲ ಫಾಸ್ಟ್ಯಾಗ್‌ಗಳು ಜನವರಿ 31ರ ಬಳಿಕ ನಿಷ್ಕ್ರಿಯವಾಗಲಿವೆ.

8ನೇ ಪುಟ ನೋಡಿ

ಪ್ರಖರ್ 404: ರಾಜ್ಯಕ್ಕೆ ಟ್ರೋಫಿ

ಪ್ರಜಾವಾಣಿ ವಾರ್ತೆ



ಪ್ರಖರ್ ಚತುರ್ವೇದಿ

ಶಿವಮೊಗ್ಗ: ಪ್ರಖರ್ ಚತುರ್ವೇದಿ ದಾಖಲಿಸಿದ ಅಜೇಯ 404 ರನ್‌ಗಳ ಬಲದಿಂದ ಕರ್ನಾಟಕ ತಂಡವು ಇದೇ ಮೊದಲ ಸಲ ಕೂಚ್ ಬಿಹಾರ್ ಟ್ರೋಫಿ (19 ವರ್ಷದೊಳಗಿನವರು) ಜಯಿಸಿತು.

ಇಲ್ಲಿಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ಮುಕ್ತಾಯವಾದ ಮುಂಬೈ ತಂಡದ ಎದುರಿನ ಫೈನಲ್ ಡ್ರಾ ಆಯಿತು. ಮೊದಲ ಇನಿಂಗ್ಸ್‌ನಲ್ಲಿ ಮುಂಬೈ 380 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಕರ್ನಾಟಕವು 223 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 890 ರನ್ ಗಳಿಸಿತು. ಒಟ್ಟು 510 ರನ್‌ಗಳ ಮುನ್ನಡೆಯಿಂದಾಗಿ ಕರ್ನಾಟಕ ಚಾಂಪಿಯನ್ ಆಯಿತು.

ಟೂರ್ನಿಯು ಆರಂಭವಾಗಿ 79 ವರ್ಷಗಳ ನಂತರ ಈ ಸಾಧನೆ ಮಾಡಿತು. ಪ್ರಖರ್ ಅವರು ದಿಗ್ಗಜ ಕ್ರಿಕೆಟಿಗ ಯುವರಾಜ್ ಸಿಂಗ್ (358 ರನ್) 25 ವರ್ಷಗಳ ಹಿಂದೆ ನಿರ್ಮಿಸಿದ್ದ ದಾಖಲೆಯನ್ನು ಮುರಿದರು.

ನಿಮ್ಮ ನೆಚ್ಚಿನ ಚಹಾ ಕಪ್‌ನೊಂದಿಗೆ ಗರಿಗರಿಯಾದ, ಕುರುಕುಲಾದ ರಸ್ಕಿಟ್ ಮುದ ನೀಡುತ್ತದೆ

ರಸ್ಕಿಟ್ ಲಭ್ಯ: ಬಟರ್ ರಸ್ಕಿಟ್ । ಮಿಲ್ಕ್ ರಸ್ಕಿಟ್ । ರಸ್ಕಿಟ್ ಗೋಲ್ಡ್ । ರಸ್ಕಿಟ್ ಶುಗರ್ ಫ್ರೀ

ಅಯೋಧ್ಯೆ ಮಂದಿರಕ್ಕೆ ಅರುಣ್ ಯೋಗಿರಾಜ್ ಕೆತ್ತಿರುವ ವಿಗ್ರಹ ಆಯ್ಕೆ

ಮೈಸೂರಿನ ‘ಬಾಲರಾಮ’ನಿಗೇ ‘ಪಟ್ಟ’

ಅಯೋಧ್ಯೆ (ಪಿಟಿಐ): ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವ ಬಾಲರಾಮನ ವಿಗ್ರಹವು ಅಯೋಧ್ಯೆಯ ರಾಮ ಮಂದಿರದ ಗರ್ಭಗುಡಿಯಲ್ಲಿ ವಿರಾಜಮಾನ ಆಗಲಿದೆ. ಈ ವಿಚಾರವನ್ನು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಕಾರ್ಯದರ್ಶಿ ಚಂಪತ್ ರಾಯ್ ಸೋಮವಾರ ಪ್ರಕಟಿಸಿದರು. ಜನವರಿ 22ರಂದು ರಾಮ ಮಂದಿರದಲ್ಲಿ ಮಧ್ಯಾಹ್ನ 12.20ಕ್ಕೆ ಪ್ರಾಣ ಪ್ರತಿಷ್ಠಾ ಮಹೋತ್ಸವ ನಡೆಯಲಿದೆ.

ಮೂವರು ಶಿಲ್ಪಿಗಳು ಸಿದ್ಧಪಡಿಸಿರುವ ವಿಗ್ರಹಗಳ ಪೈಕಿ ಅರುಣ್ ಕೆತ್ತಿರುವ ವಿಗ್ರಹವೇ ಆಯ್ಕೆಯಾಗಿದೆ ಎಂಬ ಸುದ್ದಿ ಈ ಹಿಂದೆಯೇ ಹರಡಿತ್ತು. ಬಿಜೆಪಿಯ ಕೆಲವು ಪ್ರಮುಖರು ಈ ವಿಚಾರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿದ್ದರು. ಆದರೆ ಟ್ರಸ್ಟ್ ಕಡೆಯಿಂದ ಇದುವರೆಗೂ ಅಧಿಕೃತ ಘೋಷಣೆ ಆಗಿರಲಿಲ್ಲ.

‘ಕಳೆದ 70 ವರ್ಷಗಳಿಂದ ಪೂಜಿಸಲಾಗುತ್ತಿರುವ ರಾಮಲಲ್ಲಾನ ವಿಗ್ರಹ ವನ್ನು ಕೂಡ ನೂತನ ದೇವಾಲಯದ ಗರ್ಭಗುಡಿಯಲ್ಲಿ ಇರಿಸಲಾಗುವುದು’ ಎಂದು ರಾಯ್ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಅರುಣ್ ಕೆತ್ತಿರುವ ವಿಗ್ರಹದ ಬಗ್ಗೆ ಮಾಹಿತಿ ನೀಡಿದ ರಾಯ್ ಅವರು, ‘ಪ್ರಾಣ ಪ್ರತಿಷ್ಠಾಪನೆಗೆ ಆಯ್ಕೆಯಾಗಿರುವ ವಿಗ್ರಹವನ್ನು ಶಿಲೆಯಿಂದ ಕೆತ್ತಲಾಗಿದ್ದು, 150ರಿಂದ 200 ಕೆ.ಜಿ. ಭಾರ ಇದೆ. ಐದು ವರ್ಷದ ಬಾಲಕನ ಪ್ರತಿರೂಪದಂತೆ ವಿಗ್ರಹ ಕೆತ್ತಲಾಗಿದೆ’ ಎಂದು ವಿವರಿಸಿದರು.

‘ವಿಗ್ರಹವನ್ನು ಜನವರಿ 18ರಂದು ಗರ್ಭಗುಡಿಯಲ್ಲಿ ಇರಿಸಲಾಗುವುದು. ಪ್ರತಿಷ್ಠಾಪನಾ ಸಮಾರಂಭದ ಮುಹೂರ್ತವನ್ನು ವಾರಾಣಸಿಯ ಜ್ಞಾನೇಶ್ವರ ಶಾಸ್ತ್ರಿ ದ್ರಾವಿಡ ಅವರು ನಿಗದಿಪಡಿಸಿದ್ದಾರೆ’ ಎಂದರು.

‘ಪ್ರಾಣ ಪ್ರತಿಷ್ಠಾಪನೆಗೆ ಪೂರ್ವಭಾವಿ ವಿಧಿಗಳು ಮಂಗಳವಾರ (ಜನವರಿ 16) ಆರಂಭವಾಗಲಿದ್ದು, ಜನವರಿ 21 ರವರೆಗೂ ಮುಂದುವರಿಯಲಿವೆ. ಪ್ರತಿಷ್ಠಾಪನೆಗೆ ಅಗತ್ಯವಿರುವ ಕೆಲವು ವಿಧಿಗಳನ್ನಷ್ಟೇ ಜನವರಿ 22ರಂದು ನಡೆಸಲಾಗುವುದು’ ಎಂದು ತಿಳಿಸಿದರು.

> ವಿಗ್ರಹ ಸಿದ್ಧ ಪಡಿಸಲು ಮೂವರು ಶಿಲ್ಪಿಗಳಿಗೆ ಸೂಚಿಸಲಾಗಿತ್ತು. ಅರುಣ್ ಯೋಗಿರಾಜ್ ಕೆತ್ತಿರುವ ವಿಗ್ರಹವನ್ನು ಟ್ರಸ್ಟ್ ಆಯ್ಕೆ ಮಾಡಿದೆ
> **ಚಂಪತ್ ರಾಯ್,** ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಕಾರ್ಯದರ್ಶಿ

‘ರಾಮನನ್ನು ನೋಡಿದಾಗೆಲ್ಲಾ ನನಗೆ ಅಣ್ಣನ ನೆನಪಮ್ಮ...’

• ಮೋಹನ್ ಕುಮಾರ ಸಿ.

ಮೈಸೂರು: ‘ರಾಮನ ವಿಗ್ರಹ ನೋಡಿದಾಗೆಲ್ಲ ಅಣ್ಣನ (ಅಪ್ಪ) ನೆನಪು ಬರುತ್ತದಮ್ಮ. ರಾಮನನ್ನು ಇಡೀ ಪ್ರಪಂಚವೇ ನೋಡುವಾಗ ಅಣ್ಣ ಇಲ್ವಲ್ಲಮ್ಮ ಅಂತ ಅರುಣ ಕಣ್ಣೀರಾಗುತ್ತಾನೆ. ಎಲ್ಲೋ ನೋಡ್ತಾ ಇರ್ತಾರಪ್ಪಾ. ಮನಸ್ಸಿಗೆ ಹಚ್ಚಿಕೊಬೇಡ ಎನ್ನುತ್ತಿರುತ್ತೇನೆ. ಇಂದು ಅವನ ತಂದೆ ಇರಬೇಕಿತ್ತು...’

ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ಬಾಲರಾಮನ ವಿಗ್ರಹ ಕೆತ್ತಿರುವ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರ ತಾಯಿ ಸರಸ್ವತಿ ಭಾವುಕರಾದರು.

ಸಂಕ್ರಾಂತಿ ದಿನವೇ ವಿಗ್ರಹ ಆಯ್ಕೆಯಾಗಿರುವ ಅಧಿಕೃತ ಘೋಷಣೆ ಸೋಮವಾರ ಸಂಜೆ ಹೊರಬರುತ್ತಿದ್ದಂತೆಯೇ, ನಗರದ ಬಸವೇಶ್ವರ ವೃತ್ತದ ಬಳಿಯಿರುವ ಅವರ ಮನೆ ‘ಕಶ್ಯಪ ಕಲಾನಿಕೇತನ’ದಲ್ಲಿ ಹಬ್ಬದ ಸಂಭ್ರಮ ನೂರ್ಮಡಿಯಾಗಿತ್ತು.

9ನೇ ಪುಟ ನೋಡಿ

ಇ.ವಿ ವಾಹನಗಳ ತೆರಿಗೆ ವಿನಾಯಿತಿ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನೋಂದಣಿಯಾಗುವ ₹20 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಎಲೆಕ್ಟ್ರಿಕ್ ವಾಹನಗಳಿಗೆ (ಇ.ವಿ) ಆಜೀವ ತೆರಿಗೆ ವಿನಾಯಿತಿ ಮುಂದುವರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಪರಿಸರಸ್ನೇಹಿ ವಿದ್ಯುತ್ ಚಾಲಿತ ವಾಹನಗಳ ಖರೀದಿ ಉತ್ತೇಜಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ 2016ರಲ್ಲಿ ಎಲ್ಲ ಬಗೆಯ ಎಲೆಕ್ಟ್ರಿಕ್ ವಾಹನಗಳಿಗೆ ಶೂನ್ಯ ರಸ್ತೆ ತೆರಿಗೆ ಘೋಷಿಸಿತ್ತು. ಅದರಂತೆ ರಾಜ್ಯದಲ್ಲೂ ವಿದ್ಯುತ್ ಚಾಲಿತ ವಾಹನಗಳ ಖರೀದಿಗೆ ತೆರಿಗೆ ವಿನಾಯಿತಿ ನೀಡಲಾಗಿತ್ತು.

ಆದರೆ, ತೆರಿಗೆ ವಿನಾಯಿತಿಯಿಂದ ಆದಾಯ ಸಂಗ್ರಹ ಕಡಿಮೆ ಆಗಿರುವ ಕಾರಣ ಎಲ್ಲ ಮಾದರಿಯ ಇ-ವಾಹನಗಳಿಗೆ ತೆರಿಗೆ ವಿಧಿಸಲು ಅನುಮತಿ ಕೋರಿ ರಾಜ್ಯ ರಸ್ತೆ ಪ್ರಾಧಿಕಾರವು ಸರ್ಕಾರಕ್ಕೆ ಈ ಹಿಂದೆಯೇ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಈ ಪ್ರಸ್ತಾವವನ್ನು ಸರ್ಕಾರ ತಿರಸ್ಕರಿಸಿತ್ತು. ನಂತರ ₹20 ಲಕ್ಷಕ್ಕೂ ಹೆಚ್ಚು ಮೌಲ್ಯದ ಇ-ವಾಹನಗಳಿಗಾದರೂ ತೆರಿಗೆ ವಿಧಿಸುವಂತೆ ಕೆಲವು ತಿಂಗಳುಗಳ ಹಿಂದೆ ಪ್ರಸ್ತಾವ ಸಲ್ಲಿಸಿತ್ತು. ಈ ಪ್ರಸ್ತಾವವನ್ನೂ ತಿರಸ್ಕರಿಸಿರುವ ಸರ್ಕಾರ, ತೆರಿಗೆ ವಿನಾಯಿತಿ ಮುಂದುವರಿಸುವಂತೆ ಆದೇಶಿಸಿದೆ.

ಬೆಳಗಾವಿಯಲ್ಲಿ ಇತ್ತೀಚೆಗೆ ನಡೆದ ವಿಧಾನ ಮಂಡಲ ಅಧಿವೇಶನದಲ್ಲಿ 'ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಮಸೂದೆ' ಅನುಮೋದನೆಗೊಂಡಿತ್ತು. ಈ ವೇಳೆ ₹20 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಇ-ವಾಹನಗಳಿಗೆ ತೆರಿಗೆ ವಿನಾಯಿತಿ ಹಿಂಪಡೆಯುವ ಪ್ರಸ್ತಾವಕ್ಕೆ ಪಕ್ಷಾತೀತವಾಗಿ ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಅಲ್ಲದೆ, ತೆರಿಗೆ ವಿನಾಯಿತಿ ಮುಂದುವರಿಕೆಗೆ ಆಗ್ರಹಿಸಿದ್ದರು. ಶಾಸಕರ ಒತ್ತಡಕ್ಕೆ ಮಣಿದಿದ್ದ ಮುಖ್ಯಮಂತ್ರಿ ಮತ್ತು ಸಾರಿಗೆ ಸಚಿವರು ತೆರಿಗೆ ವಿನಾಯಿತಿ ಮುಂದುವರಿಸುವ ಭರವಸೆ ನೀಡಿದ್ದರು.

CONNECT ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

EDUCATIONAL

Special Courses

DIPLOMA IN Student Counselling, 5th Batch, 6 months, ONLINE course, Starts:16-Jan. WhatsApp 9886044221. www.darwinpsychologycentre.com

Training

NURSERY TEACHERS TRAINING Course at JNANABHARATHI,with in Class Training 6 Months/1 year (offline/online),100% Job Assurance. Call:6363032729

JOB OPPORTUNITIES

Teachers/ Professors

ST ALOYSIUS COLLEGE (AUTONOMOUS)
Re-accredited by NAAC with 'A++' Grade, 3.67/4 CGPA
Post Box No. 720, Mangaluru- 3 | www.staloysius.edu.in

invites applications for the Faculty positions in the following UG / PG Departments for 2024-25

English, General Counsellor, Mathematics, Biotechnology, Commerce, B.Voc. (Retail Management), BBA, Computer Science & Applications and Computer Animation, Food Science (PG), Chemistry.

Minimum Qualification:
A Regular Master's Degree in the respective subjects with 55% marks and above. Applications with qualifications through distance mode will not be accepted. NET/KSET, Ph.D. with teaching experience preferred.

Applications should reach us on or before 22nd January 2024 on any of the following platforms.

www.staloysius.edu.in/placements/careers or e-mail to: careers@staloysius.edu.in

REAL ESTATE BUYING

Resedential/ Commercial

5 BHK House for Lease In Kumara Park West Contact: 9008091317

BUSINESS

Business Offers

Finance

WANTED BUSINESS Partners Gold Business 5, 10, 25 Lakhs Investment Monthly Income 1 Lakhs Contact: 8892501007/ 9606701007

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

PUBLIC NOTICE

FORM INC 26

[Pursuant to rule 30 the Companies (Incorporation) Rules, 2014]
Advertisement to be published in the newspaper for change of registered office of the company from one state to another

Before the Regional Director, South East Region, Bangalore
In the matter of sub section (4) of Section 13 of Companies Act, 2013 and clause (a) of sub rule (5) of rule 30 of the Companies (Incorporation) Rules, 2014
&
In the matter of **Euronet Services India Private Limited** having CIN: U51505KA2002PTC030815 having its registered office at 48, 1st Floor, Ashok Plaza, Gandhi Bazaar BBMP Ward No 49, KG Nagar, Basavanagudi Bangalore 560004 IN .....**Petitioner**

Notice is hereby given to the General Public that the company proposes to make application to the Central Government (Regional Director) South East Region, Bangalore under section 13 of the Companies Act, 2013 seeking confirmation of alteration of the Memorandum of Association of the Company in terms of the special resolution passed at the Annual General Meeting held on September 29, 2023 to enable the Company to change its Registered office from "State of Karnataka" to "State of Maharashtra under the Jurisdiction of Registrar of Companies, Mumbai".
Any person whose interest is likely to be affected by the proposed change of the registered office of the company may deliver either on the MCA-21 portal (www.mca.gov.in) by filing investor complaint form or cause to be delivered or send by registered post of his/her objections supported by an affidavit stating the nature of his/her interest and grounds of opposition to the Regional Director South East Region at the address: 3rd Floor, Corporate Bhavan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad-500068, Telangana., within fourteen (14) days from the date of publication of this notice with a copy of the applicant company at its registered office at the address mentioned above along with the nature of interest and grounds of opposition.

Place : Bangalore,
Date : 16 January, 2024

For Euronet Services India Private Limited
Sd/- Piyush Sharma
Director • DIN: 03544111

DH ಪ್ರಜಾವಾಣಿ **Classifieds** More value, more impact **EDUCATION**
The perfect medium for all educational related ads!
Book your ad with us now.
For more details contact:
+91 9886213331
+91 9901641752
+91 9845114560
+91 9900428036
+91 9731810277

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕಾಯಕಯೋಗಿ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಸಲಹೆ

ನಿಮ್ಮ ದೇಗುಲಕ್ಕೆ ನೀವೇ ಅರ್ಚಕರಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಲು ಒಡೆದು, ಗುಡಿ ಕಟ್ಟುವವರು ನೀವು, ವಿಗ್ರಹ ತರುವವರು ನೀವು, ಆದರೆ, ನಿಮಗೆ ಪೂಜೆಗೆ ಅವಕಾಶವಿಲ್ಲ. ಹಾಗಾಗಿ, ನೀವೇ ದೇವಸ್ಥಾನ ಕಟ್ಟಿಕೊಂಡು, ನೀವೇ ಪೂಜಾರಿಗಳಾಗಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ನಗರದಲ್ಲಿ ಸೋಮವಾರ ನಡೆದ ಕಾಯಕಯೋಗಿ ಸಿದ್ಧರಾಮೇಶ್ವರ ಜಯಂತಿ ಮತ್ತು ಸಿದ್ಧರಾಮೇಶ್ವರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಶೂದ್ರರಿಗೆ ದೇವಸ್ಥಾನ ಪ್ರವೇಶಕ್ಕೆ ಅವಕಾಶ ನೀಡದಿದ್ದಾಗ, ನಾರಾಯಣಗುರುಗಳು ಅವುಗಳನ್ನು ತಿರಸ್ಕರಿಸಿ, ದೇವಸ್ಥಾನಗಳನ್ನು ನಿರ್ಮಿಸಿದ್ದಾರೆ. ಅದೇ ಮಾರ್ಗವನ್ನು ನೀವೂ ಅನುಸರಿಸಬೇಕು' ಎಂದು ತಿಳಿಸಿದರು.

'ಸಬ್ ಕಾ ಸಾಥ್-ಸಬ್ ಕಾ ವಿಕಾಸ್ ಎಂದು ಬಾಯಲ್ಲಿ ಹೇಳಿ ಆಚರಣೆಯಲ್ಲಿ ಧರ್ಮ ತಾರತಮ್ಯ ಮಾಡುವುದು ನಡೆಯುತ್ತಿದೆ. ಆದರೆ, ಬಸವಾದಿ ಶರಣರು ಜಾತಿ-ಧರ್ಮ ಆಧಾರದಲ್ಲಿ ಮನುಷ್ಯರನ್ನು ವಿಭಜಿಸಲಿಲ್ಲ. ಎಲ್ಲರೂ ಕಾಯಕ ಅಂದರೆ ಉತ್ಪಾದನೆ ಮಾಡಬೇಕು. ದಾಸೋಹ ಅಂದರೆ ಎಲ್ಲರಿಗೂ ವಿತರಿಸಬೇಕು ಎಂಬುದು ಶರಣರ ಆಶಯ. ನಮ್ಮ ಸರ್ಕಾರದ ಕಾರ್ಯಕ್ರಮಗಳು ಕೂಡ ಇದಕ್ಕೆ ಪೂರಕವಾಗಿವೆ' ಎಂದು ಹೇಳಿದರು.

ಮೌಢ್ಯ, ಕಂದಾಚಾರ, ಕರ್ಮ ಸಿದ್ಧಾಂತವನ್ನು ಒಪ್ಪಬಾರದು. ಅವಕಾಶ ಸಿಕ್ಕವರು ಮುಂದೆ ಬಂದರು. ಅವಕಾಶ ಇಲ್ಲದವರು ಹಿಂದುಳಿದರು. ಹಣೆಬರಹ ಎನ್ನುವುದು ಬೋಗಸ್. ಜಾತಿ-ಧರ್ಮದ ಆಧಾರದಲ್ಲಿ ಮನುಷ್ಯರನ್ನು ಮನುಷ್ಯರು ದ್ವೇಷಿಸುವುದು ಅಮಾನವೀಯ ಎಂದು ವಿಶ್ಲೇಷಿಸಿದರು.

ಅಧ್ಯಯನ ಪೀಠ ಸ್ಥಾಪನೆ ಮಾಡಬೇಕು ಎಂಬುದು ಸೇರಿದಂತೆ ಭೋವಿ ಸಮುದಾಯ ಮುಂದಿಟ್ಟಿರುವ ಎಲ್ಲ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಮಾತನಾಡಿ, 'ತುಳಿತಕ್ಕೊಳಗಾದವರ ಪರ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಯಾರಾದರೂ ಬೈದು ಮಾತನಾಡಿದರೆ ಅಂಥವರ ವಿರುದ್ಧ ಎಸ್ಸಿ-ಎಸ್ಟಿ ಸಮುದಾಯ ಬೀದಿಗಿಳಿದು ಹೋರಾಟ ನಡೆಸಬೇಕು. ಈಗಾಗಲೇ ಏಕವಚನದಲ್ಲಿ ಮಾತನಾಡಿದ ವ್ಯಕ್ತಿಗೆ ಎಚ್ಚರಿಕೆ ನೀಡಿದ್ದೇನೆ. ಮುಖ್ಯಮಂತ್ರಿಗೆ ನಾವೆಲ್ಲರೂ ಕಾವಲು ಆಗಬೇಕು' ಎಂದು ಸಲಹೆ ನೀಡಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಶಾಸಕರಾದ ಎಂ.ಚಂದ್ರಪ್ಪ, ರಾಘವೇಂದ್ರ ಹಿಟ್ನಾಳ್, ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ನಗರದಲ್ಲಿ ಸೋಮವಾರ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಪಿ.ಎಸ್. ಶ್ಯಾಮಣ್ಣ ಅವರಿಗೆ ಕಾಯಕಯೋಗಿ ಸಿದ್ಧರಾಮೇಶ್ವರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್. ಮಂಜುಳಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಮತ್ತು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಕಾಂತರಾಜ ವರದಿ ಸ್ವೀಕರಿಸಿ: ಸ್ವಾಮೀಜಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂತರಾಜ ಆಯೋಗದ ವರದಿಯನ್ನು ಸ್ವೀಕಾರ ಮಾಡಿ, ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಆಸರೆ ಆಗಬೇಕು ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮನವಿ ಮಾಡಿದರು.

ಬಸವತತ್ವದಡಿ ಸರ್ಕಾರ ನಡೆಸುತ್ತಿರುವ ಸಿದ್ದರಾಮಯ್ಯ ಅವರು ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡುವಂತೆ ಆಗ್ರಹಿಸಿದರು.

'ಕಾಂಗ್ರೆಸ್ ಚುನಾವಣಾ ಸಮಿತಿ ಸಭೆ 19ರಂದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದೇ 19ರಂದು ಬೆಂಗಳೂರಿನ ಇಂದಿರಾ ಭವನದಲ್ಲಿ ಪಕ್ಷದ ಲೋಕಸಭೆ ಚುನಾವಣೆ ಸಮಿತಿ ಸಭೆ ನಡೆಯಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, '19ರಂದು ಸಂಜೆ 4.30ಕ್ಕೆ ನಡೆಯಲಿರುವ ಸಭೆಗೆ ದೆಹಲಿಯಿಂದ ವೀಕ್ಷಕರು ಕೂಡ ಬರಲಿದ್ದಾರೆ. ಅಭ್ಯರ್ಥಿ ಆಯ್ಕೆ ವಿಚಾರವಾಗಿ ಜಿಲ್ಲಾ ಉಸ್ತುವಾರಿ ಸಚಿವರು ನೀಡಿರುವ ವರದಿ ಕುರಿತು ಸಭೆಯಲ್ಲಿ ಚರ್ಚೆ ಮಾಡಲಾಗುವುದು. ಆದಷ್ಟು ಬೇಗ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಿದೆ' ಎಂದರು.

ಕೆಪಿಸಿಸಿ ಚುನಾವಣಾ ಸಮಿತಿಯ ಎಲ್ಲ ಸದಸ್ಯರಿಗೆ ಡಿ.ಕೆ. ಶಿವಕುಮಾರ್ ಅವರು ಸೋಮವಾರ ಪತ್ರ ಬರೆದಿದ್ದಾರೆ. ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪರಿಶೀಲನಾ ಸಮಿತಿಯ ಅಧ್ಯಕ್ಷ ಹರೀಶ್ ಚೌಧರಿ ಭಾಗವಹಿಸಲಿದ್ದಾರೆ. ಸಮಿತಿಯ ಎಲ್ಲ ಸದಸ್ಯರು ಈ ಸಭೆಯಲ್ಲಿ ಭಾಗವಹಿಸಬೇಕು ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಮಾನಸಿಕ ಸ್ಥಿರತೆ ಇಲ್ಲ: ಬಿಜೆಪಿ ಸಂಸದ ಅನಂತ ಕುಮಾರ್ ಹೆಗಡೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಬಗ್ಗೆ ನೀಡಿದ್ದ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 'ಮಾನಸಿಕ ಸ್ಥಿಮಿತ ಇರುವವರು ಈ ರೀತಿ ಮಾತನಾಡುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು. 'ಅನಂತ ಕುಮಾರ್ ಹೆಗಡೆ ಆಡಿರುವ ಮಾತು ತಪ್ಪು ಎಂದು ಅವರ ನಾಯಕರುಗಳಿಗೆ ಅರ್ಥವಾಗಿರುವುದು ಉತ್ತಮ ಬೆಳವಣಿಗೆ. ತಮ್ಮ ಆರೋಗ್ಯದ ಬಗ್ಗೆ ಅನಂತ ಕುಮಾರ್ ಹೆಗಡೆ ಕಾಳಜಿ ವಹಿಸಲಿ' ಎಂದೂ ಕುಟುಕಿದರು.

ನಿಗಮ- ಮಂಡಳಿ ನೇಮಕ ಪಟ್ಟಿ ಶೀಘ್ರ

ಡಿ.ಕೆ. ಶಿವಕುಮಾರ್

'ಯಾವುದೇ ಕ್ಷಣದಲ್ಲಿ ನಿಗಮ, ಮಂಡಳಿ ಆಯ್ಕೆ ಪಟ್ಟಿ ಪ್ರಕಟ ಆಗಬಹುದು' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಸಂಕ್ರಾಂತಿ ಉಡುಗೊರೆಯಾಗಿ ನಿಗಮ ಮಂಡಳಿಗಳಿಗೆ ನೇಮಕ ಆಗಬಹುದೇ?' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನೇಮಕ ಪಟ್ಟಿ ಮುಂದೂಡುವ ಸಾಧ್ಯತೆ ಇಲ್ಲ. ಚುನಾವಣೆ ಸಮಯದಲ್ಲಿ ನಾವು ಯಾರಿಗೆ ಮಾತು ಕೊಟ್ಟಿದ್ದೇವೋ ಅವರಿಗೆ ಸ್ಥಾನಮಾನ ನೀಡಲಾಗುತ್ತದೆ' ಎಂದು ಹೇಳಿದರು

ರಾಮಲಿಂಗಾರೆಡ್ಡಿ ಹೆಸರಿನಲ್ಲಿ ನಕಲಿ ಇ–ಮೇಲ್

ಬೆಂಗಳೂರು: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೆಸರಿನಲ್ಲಿ ನಕಲಿ ಇ-ಮೇಲ್ ವಿಳಾಸ ಸೃಷ್ಟಿಸಿ ಬಿಎಂಟಿಸಿ ಕೇಂದ್ರ ಕಚೇರಿಯ ಮುಖ್ಯ ಲೆಕ್ಕಾಧಿಕಾರಿ ಆರ್ಥಿಕ ಸಲಹೆಗಾರರ ಇ-ಮೇಲ್ ವಿಳಾಸಕ್ಕೆ ₹9.70 ಲಕ್ಷ ಪಾವತಿಸುವಂತೆ ಸೈಬರ್ ವಂಚಕರು ಸಂದೇಶ ಕಳುಹಿಸಿದ್ದರು.

'ಬಿಎಂಟಿಸಿ ಮುಖ್ಯಲೆಕ್ಕಾಧಿಕಾರಿ ಅಬ್ದುಲ್ ಖುದ್ದೂಸ್ ಅವರು ಕೇಂದ್ರ ವಿಭಾಗದ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಅಪರಿಚಿತ ವ್ಯಕ್ತಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಅಧಿಕೃತ ಇ-ಮೇಲ್ ವಿಳಾಸ 'caofa@mybmtc.com'ಗೆ ರಾಮಲಿಂಗಾರೆಡ್ಡಿ ಅವರ ಹೆಸರಿನಲ್ಲಿ RAMALINGAREDDY,ceo.care@lifeinsurancecares.in ಎಂಬ ನಕಲಿ ಇ-ಮೇಲ್ ಸೃಷ್ಟಿಸಿ ಹಣವನ್ನು ಕೂಡಲೇ ಆರ್‌ಟಿಜಿಎಸ್ ಮಾಡುವಂತೆ ಸಂದೇಶ ಕಳಹಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಅಬ್ದುಲ್ ಖುದ್ದೂಸ್ ಅವರು ರಾಮಲಿಂಗಾರೆಡ್ಡಿ ಅವರಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ರಾಮಲಿಂಗಾರೆಡ್ಡಿ ಅವರು ಆ ರೀತಿ ಯಾವುದೇ ಹಣದ ಬಗ್ಗೆ ಇ-ಮೇಲ್ ಕಳಿಸಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಆಗ ಬಿಎಂಟಿಸಿ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿ, ಅವರ ಸೂಚನೆ ಮೇರೆಗೆ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಟಿ20 ಕ್ರಿಕೆಟ್: ಮೆಟ್ರೊ ಅವಧಿ ವಿಸ್ತರಣೆ

ಬೆಂಗಳೂರು: ನಗರದ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಜ.17ರಂದು ನಡೆಯಲಿರುವ ಹೊನಲು ಬೆಳಕಿನ ಟಿ20 ಕ್ರಿಕೆಟ್ ಪಂದ್ಯ ವೀಕ್ಷಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಮೆಟ್ರೊ ರೈಲುಗಳ ಸಂಚಾರ ಅವಧಿಯನ್ನು ಬಿಎಂಆರ್‌ಸಿಎಲ್ ವಿಸ್ತರಿಸಿದೆ.

ಹಸಿರು, ನೇರಳೆ ಮಾರ್ಗಗಳಲ್ಲಿ ನಾಲ್ಕು ಟರ್ಮಿನಲ್‌ಗಳಿಂದ ಅಂದು ಕೊನೇ ರೈಲು ರಾತ್ರಿ 11.45ಕ್ಕೆ ಹೊರಡಲಿದೆ. ನೂಕುನುಗ್ಗಲು ತಪ್ಪಿಸಲು ಜ.17ರ ಮಧ್ಯಾಹ್ನ 2ರಿಂದಲೇ ಪೇಪರ್ ಟಿಕೆಟ್ ಮಾರಾಟಕ್ಕೆ ಲಭ್ಯವಿದೆ. ಈ ಟಿಕೆಟ್‌ಗಳನ್ನು ರಾತ್ರಿ 8ರಿಂದ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣ ಮತ್ತು ಎಂ.ಜಿ. ರೋಡ್ ಮೆಟ್ರೊ ನಿಲ್ದಾಣಗಳಿಂದ ಇತರ ಕಡೆ ಸಂಚಾರಕ್ಕೆ ಬಳಸಬಹುದು. ಪೇಪರ್ ಟಿಕೆಟ್ ದರ ₹50. ಕ್ಯೂಆರ್ ಕೋಡ್ ಟಿಕೆಟ್‌ಗಳು ಸಾಮಾನ್ಯ ದರದ ಶೇ 5 ರಿಯಾಯಿತಿಯೊಂದಿಗೆ ಪಂದ್ಯದ ದಿನ ಖರೀದಿಸಿದರೆ ಇಡೀ ದಿನಕ್ಕೆ ಮಾನ್ಯವಾಗಲಿದೆ. ವಾಟ್ಸ್‌ಆ್ಯಪ್, ನಮ್ಮ ಮೆಟ್ರೊ ಆ್ಯಪ್, ಪೇಟಿಎಂ ಆ್ಯಪ್‌ಗಳಲ್ಲಿ ಕ್ಯೂಆರ್ ಟಿಕೆಟ್ ಖರೀದಿಸಬಹುದು. ಸ್ಮಾರ್ಟ್‌ಕಾರ್ಡ್, ಎನ್‌ಸಿಎಂಸಿ ಕಾರ್ಡ್‌ಗಳನ್ನು ಎಂದಿನಂತೆ ಬಳಸಬಹುದು.

ಚಿತ್ರಾವಳಿ

ನಗರದ ಮಾಗಡಿ ಮುಖ್ಯ ರಸ್ತೆಯ ಚಿಕ್ಕಗೊಲ್ಲರಹಟ್ಟಿಯಲ್ಲಿರುವ ಎಂಬೆಸ್ಸಿ ಪಬ್ಲಿಕ್ ಸ್ಕೂಲ್‌ನಲ್ಲಿ ಇತ್ತೀಚೆಗೆ ನಡೆದ 'ಬ್ರಯ್‌ನಿಯಾಕ್ಸ್' ವಿಜ್ಞಾನ ವಸ್ತು ಪ್ರದರ್ಶನ ಮತ್ತು ಶಾಲಾ ವಾರ್ಷಿಕೋತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು

ನಾಗಸಂದ್ರದ ವಿನಾಯಕನಗರ ಮತ್ತು ವಿಕಾಸನಗರದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು

ರಸ್ತೆ ಬದಿ, ರೈಲ್ವೆ ಫ್ಲಾಟ್‌ಫಾರ್ಮ್‌ನಲ್ಲಿ ಮಲಗಿದ ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳು

ಕೆ–ಸೆಟ್‌ಗಾಗಿ ರೈಲಿನ ಟಾಯ್ಲೆಟ್‌ನಲ್ಲಿ ಪ್ರಯಾಣ!

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಅರ್ಹತಾ ಪರೀಕ್ಷೆ (ಕೆ-ಸೆಟ್) ಬರೆಯಲು ಬೆಂಗಳೂರಿಗೆ ತೆರಳಿದ್ದ ಕಲ್ಯಾಣ ಕರ್ನಾಟಕದ ನೂರಾರು ಅಭ್ಯರ್ಥಿಗಳು ರೈಲು, ಬಸ್‌ಗಳ ಸೀಟ್ ಸಿಗದೆ ಪರದಾಡಿದ್ದು, ಕೆಲವರು ರೈಲಿನ ಟಾಯ್ಲೆಟ್‌ನಲ್ಲಿ ಕುಳಿತು ಪ್ರಯಾಣಿಸಿ ಪರೀಕ್ಷೆ ಬರೆದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆಯಲ್ಲಿ ಬ್ಲೂಟೂತ್ ಸಾಧನ ಬಳಸಿದ ಅಕ್ರಮ ಪ್ರಕರಣ ಕೆ-ಸೆಟ್ ಮೇಲೂ ಪರಿಣಾಮ ಬೀರಿತ್ತು. ಹೀಗಾಗಿ, ಪಾರದರ್ಶಕ ಪರೀಕ್ಷೆಯ ದೃಷ್ಟಿಯಿಂದ ಕೆಇಎ ಅಧಿಕಾರಿಗಳು ಏಕಾಏಕಿ ಪರೀಕ್ಷಾ ಕೇಂದ್ರವನ್ನು ಕಲಬುರಗಿಯಿಂದ ಬೆಂಗಳೂರಿಗೆ ಸ್ಥಳಾಂತರಿಸಿದ್ದರು.

ಅಸಮಾಧಾನದ ನಡುವೆಯೂ ಪರೀಕ್ಷೆ ಬರೆಯಲು ಬೆಂಗಳೂರಿಗೆ ತೆರಳಿದ್ದ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಅಭ್ಯರ್ಥಿಗಳು ತಮ್ಮ ನರಕಯಾತನೆಯನ್ನು 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡರು.

'ಪರೀಕ್ಷಾ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರವಾದ ಮರುದಿನದಿಂದ (ಡಿಸೆಂಬರ್ 14) ರೈಲಿನ ಕಾಯ್ದಿರಿಸಿದ ಸೀಟ್‌ಗೆ ಪ್ರಯತ್ನಿಸಿದರೂ ಸಿಗಲಿಲ್ಲ. ಅನಿವಾರ್ಯವಾಗಿ ಜನರಲ್ ಟಿಕೆಟ್ ಪಡೆದು ಬೆಂಗಳೂರಿನವರೆಗೂ ನಿಂತುಕೊಂಡೇ, ಕೆಲವರು ಸೀಟ್‌ಗಳ ಕೆಳಗಡಿ ಮಲಗಿ ಪ್ರಯಾಣಿಸಿದರು. ರೈಲಿನ ಟಾಯ್ಲೆಟ್‌ಗಳಲ್ಲಿ ಕುಳಿತು ಪ್ರಯಾಣಿಸಿದ್ದ ದೃಶ್ಯ ನೋಡಿದರೆ ನಾವು ಮನುಷ್ಯರೋ, ಕುರಿಗಳೋ ಎನಿಸಿತ್ತು. ಗಬ್ಬು ನಾರುತ್ತಿದ್ದ ಟಾಯ್ಲೆಟ್‌ನಲ್ಲಿ ಉಸಿರು ಬಿಗಿ ಹಿಡಿದುಕೊಂಡು ಪ್ರಯಾಣಿಸುವ ಸ್ಥಿತಿ ನಮ್ಮ ಶತ್ರುಗಳಿಗೂ ಬರಬಾರದಿತ್ತು' ಎನ್ನುತ್ತಾರೆ ಕೆ-ಸೆಟ್ ಅಭ್ಯರ್ಥಿ, ಗುಲಬರ್ಗಾ ವಿ.ವಿ.ಯ ಅಣವೀರಗೌಡ ಬಿರಾದಾರ.

'ಪರೀಕ್ಷೆ ಮುಗಿಸಿ ಬಸ್ ನಿಲ್ದಾಣಕ್ಕೆ ಬರುವ ವೇಳೆಗೆ 5 ಗಂಟೆಯಾಗಿದ್ದರಿಂದ ಕಲಬುರಗಿಯ ಬಹುತೇಕ ಬಸ್‌ಗಳು ಹೋಗಿದ್ದವು. ರೈಲು ನಿಲ್ದಾಣಕ್ಕೆ ಬಂದಾಗ, ಜನರಲ್ ಬೋಗಿಗಳು ಅದಾಗಲೇ ಭರ್ತಿಯಾಗಿದ್ದವು. ಅನಿವಾರ್ಯವಾಗಿ ಫ್ಲಾಟ್‌ಫಾರ್ಮ್‌ನಲ್ಲಿ ಮಲಗಿ, ಮರುದಿನ ರೈಲು ಹತ್ತಿ ವಾಪಸ್ ಬಂದೆವು' ಎಂದು ಮತ್ತೊಬ್ಬ ಅಭ್ಯರ್ಥಿ ಮಾಳಪ್ಪ ಹೇಳಿದರೆ, 'ಕೆಇಎ ಅಧಿಕಾರಿಗಳು ಪರೀಕ್ಷಾ ಕೇಂದ್ರವನ್ನು ಏಕಾಏಕಿ ಸ್ಥಳಾಂತರಿಸುವ ಮುನ್ನ ಅಭ್ಯರ್ಥಿಗಳ ಕಷ್ಟ-ನೋವಿಗೂ ಸ್ಪಂದಿಸಬೇಕಿತ್ತು' ಎಂದು ಅಭ್ಯರ್ಥಿ ಅಂಬಿಕಾ ಹೇಳಿದರು.

ಕೆ–ಸೆಟ್ ಪರೀಕ್ಷೆಗೆ ಬೆಂಗಳೂರಿಗೆ ತೆರಳಿದ ಅಭ್ಯರ್ಥಿಗಳು ರೈಲಿನ ಸೀಟ್ ಸಿಗದೆ ಯಶವಂತಪುರ ರೈಲು ನಿಲ್ದಾಣದ ಫ್ಲಾಟ್‌ಫಾರ್ಮ್ ಮೇಲೆ ಮಲಗಿದ್ದರು

ವಿವಿಧ ದೇವಸ್ಥಾನಗಳಲ್ಲಿ ಹಬ್ಬದ ಪ್ರಯುಕ್ತ ವಿಶೇಷ ಅಲಂಕಾರ

ಸುಗ್ಗಿಯ ಸಂಕ್ರಾಂತಿ: ಹಿಗ್ಗಿದ ಸಂಭ್ರಮ

ಸುಧಾಮನಗರದ ಕೆ.ಎಸ್. ಗಾರ್ಡನ್‌ನಲ್ಲಿ ಸೋಮವಾರ ಮಕರ ಸಂಕ್ರಾಂತಿ ಪ್ರಯುಕ್ತ ಯುವತಿಯರು ಪೊಂಗಲ್ ತಯಾರಿ ಮಾಡಿ ಸಂಭ್ರಮದಿಂದ ಕುಣಿದರು. ಪ್ರಜಾವಾಣಿ ಚಿತ್ರ/ ರಂಜು ಪಿ.

ಬೆಂಗಳೂರಿನ ಕನಕಪಾಳ್ಯದಲ್ಲಿ ರಾಸುಗಳನ್ನು ಕಿಚ್ಚು ಹಾಯಿಸಿದರು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಸುಗ್ಗಿಯ ಸಂಕ್ರಾಂತಿ ಹಬ್ಬದ ಸಂಭ್ರಮ ಎಲ್ಲೆಡೆ ಪಸರಿಸಿತ್ತು. ಮಹಿಳೆಯರು ಮನೆಗಳ ಮುಂದೆ ರಂಗೋಲಿ ಬಿಡಿಸಿ, ಎಳ್ಳು-ಬೆಲ್ಲ ಹಂಚಿ ಸಂಭ್ರಮಿಸಿದರು.

ಮಕರ ಸಂಕ್ರಾಂತಿಯ ಪ್ರಯುಕ್ತ ಮನೆಯಲ್ಲಿ ನಾನಾ ರೀತಿಯ ಸಿಹಿ ತಿನಿಸುಗಳನ್ನು ತಯಾರಿಸಿದ್ದರು. ಪರಸ್ಪರ ಎಳ್ಳು-ಬೆಲ್ಲ, ಕಬ್ಬು, ಕಡಲೇಕಾಯಿ ಹಂಚಿ ತಿಂದರು. ಎರಡು ದಿನಗಳಿಂದ ನಗರದ ವಿವಿಧ ಕಡೆಗಳಲ್ಲಿ ಹಬ್ಬಕ್ಕೆ ಬೇಕಾದ ಸಾಮಗ್ರಿ, ಹೊಸಬಟ್ಟೆ ಖರೀದಿ ಜೋರಾಗಿಯೇ ನಡೆದಿತ್ತು.

ವಿವಿಧ ದೇವಸ್ಥಾನಗಳಲ್ಲಿ ಹಬ್ಬದ ಪ್ರಯುಕ್ತ ವಿಶೇಷ ಅಲಂಕಾರ ಮಾಡಲಾಗಿತ್ತು. ವಿವಿಧ ಬಗೆಯ ಹೂವು, ಬಾಳೆದಿಂಡುಗಳಿಂದ ದೇಗುಲ ಸಿಂಗರಿಸಲಾಗಿತ್ತು. ವಿಶೇಷ ಪೂಜೆ, ಭಜನೆ, ಮಹಾಭಿಷೇಕ ಮತ್ತು ವಿವಿಧ ಧಾರ್ಮಿಕ ಕೈಂಕರ್ಯಗಳು ನೆರವೇರಿದವು. ಜನರು ಸೋಮವಾರ ಬೆಳಿಗ್ಗೆಯಿಂದಲೇ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಶನಿವಾರ, ಭಾನುವಾರ ಮತ್ತು ಸೋಮವಾರ ಮೂರು ದಿನ ರಜೆ ಇದ್ದ ಕಾರಣ ಸರ್ಕಾರಿ ಕಚೇರಿ, ಕೈಗಾರಿಕೆಗಳಲ್ಲಿ ಕಳೆದ ಶುಕ್ರವಾರವೇ ವಿಶೇಷ ಪೂಜೆ ಸಲ್ಲಿಸಲಾಗಿತ್ತು. ನಗರದಲ್ಲಿ ಜನಸಂಚಾರ ವಿರಳವಾಗಿತ್ತು.

ಚನ್ನವೀರಯ್ಯಪಾಳ್ಯ ಸೋಂಪುರ ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ಸಂಕ್ರಾಂತಿ ಪ್ರಯುಕ್ತ ಬಸವೇಶ್ವರಸ್ವಾಮಿ ರಥೋತ್ಸವ ಹಾಗೂ ಕಡಲೆಕಾಯಿ ಪರಿಷೆ ನಡೆಯಿತು. ಬನಶಂಕರಿ ಭುವನೇಶ್ವರಿ ನಗರದಲ್ಲಿ ಸಂಕ್ರಾಂತಿ ಸೇವಾ ಸಮಿತಿಯಿಂದ ವಿವಿಧ ಸ್ಪರ್ಧೆಗಳು ನಡೆದವು.

ಸುಧಾಮನಗರದ ಕೆ.ಎಸ್. ಗಾರ್ಡನ್‌ನಲ್ಲಿ ಯುವತಿಯರು ಪೊಂಗಲ್ ತಯಾರಿ ಮಾಡಿ ಸಾಂಪ್ರದಾಯಿಕವಾಗಿ ಹಬ್ಬ ಆಚರಿಸಿದರು. ಪೊಂಗಲ್ ತಯಾರಿ ಮುಗಿದ ಬಳಿಕ ನೃತ್ಯ ಮಾಡಿ ಸಂಭ್ರಮಿಸಿದರು.

ಕನಕಪಾಳ್ಯದಲ್ಲಿ ರಾಸುಗಳನ್ನು ಕಿಚ್ಚು ಹಾಯಿಸುವ ದೃಶ್ಯ ರೋಮಾಂಚನವನ್ನುಂಟು ಮಾಡಿತು. ಮಹಿಳೆಯರು ಎಳ್ಳು ಬೆಲ್ಲ ಬೀರಿದರು. 'ಎಳ್ಳು-ಬೆಲ್ಲ ತಿಂದು ಒಳ್ಳೆ ಮಾತನಾಡಿ' ಎಂದು ಪರಸ್ಪರ ಹಾರೈಸಿದರು.

'ಗಂಗಾಧರ'ನಿಗೆ ಸೂರ್ಯಸ್ಪರ್ಶ ಮುಗಿಲು ಮುಟ್ಟಿದ ಹರ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕರ ಸಂಕ್ರಾಂತಿಯ ದಿನವಾದ ಸೋಮವಾರ ಸೂರ್ಯನ ಕಿರಣಗಳು ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇಗುಲದ ಶಿವಲಿಂಗವನ್ನು ಸ್ಪರ್ಶಿಸುತ್ತಿದ್ದಂತೆ ಭಕ್ತರಲ್ಲಿ ಹರ್ಷದ ಹೊನಲು ಹರಿಯಿತು. ಸೂರ್ಯರಶ್ಮಿ 3 ನಿಮಿಷ ಶಿವಲಿಂಗದ ಮೇಲೆ ಬೆಳಕು ಚೆಲ್ಲಿತು.

ಈ ಕ್ಷಣಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು. ದೇಗುಲದ ಬಲಭಾಗದ ಕಿಂಡಿಯಿಂದ ಸಂಜೆ 5.20ರ ವೇಳೆಗೆ ನೇಸರನ ಕಿರಣ ಪ್ರವೇಶಿಸಿತು. ಮೊದಲು ಗವಿಗಂಗಾಧರೇಶ್ವರ ದೇವರ ಪಾದ ಸ್ಪರ್ಶಿಸಿತು. ಬಳಿಕ ನಂದಿ ವಿಗ್ರಹದ ಮೂಲಕ ಹಾದುಹೋಗಿ ಇಡೀ ಶಿವಲಿಂಗವನ್ನು ಆವರಿಸಿತು. ಈ ಅವಧಿಯಲ್ಲಿ ದೇವರಿಗೆ ನಿರಂತರವಾಗಿ ಅಭಿಷೇಕ ನಡೆಸಲಾಯಿತು.

ಭಾಸ್ಕರನ ಎಳೆಕಿರಣಗಳು ಮರೆಯಾದ ನಂತರ ಮತ್ತೊಮ್ಮೆ ದೇವರಿಗೆ ಅಭಿಷೇಕ ಮಾಡಿ, ಪೂಜೆ ಸಲ್ಲಿಸಲಾಯಿತು. ಸೂರ್ಯರಶ್ಮಿ ಶಿವಲಿಂಗವನ್ನು ಸ್ಪರ್ಶಿಸುವ ಅವಧಿಯಲ್ಲಿ ಭಕ್ತರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ದೇವಾಲಯದ ಹೊರಗಡೆ ವಿಶೇಷ ಎಲ್‌ಇಡಿ ಪರದೆಯಲ್ಲಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು. ಗಂಗಾಜಲವನ್ನು ಪ್ರೋಕ್ಷಣೆ ಮಾಡಿ, ದೇವರಿಗೆ ವಿಶೇಷ ಅಲಂಕಾರ ಮಾಡಲಾಯಿತು. ಬಳಿಕ ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು.

ನಗರದ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಬಂದಿದ್ದರು. ಸೂರ್ಯನ ಕಿರಣಗಳು ಶಿವಲಿಂಗದ ಮೇಲೆ ಬೀಳುವಾಗ ಶಿವನಾಮ ಪಠಿಸಿದರು. ಬಳಿಕ ಸರತಿ ಸಾಲಿನಲ್ಲಿ ನಿಂತು, ದೇವರ ದರ್ಶನ ಪಡೆದರು. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ವಿಧಾನಪರಿಷತ್ ಸದಸ್ಯ ಟಿ.ಎ. ಶರವಣ ಅವರೂ ಭಾಗವಹಿಸಿ ಭಕ್ತಿ ಸಮರ್ಪಿಸಿದರು.



ಬೆಂಗಳೂರಿನ ಗವಿಗಂಗಾಧರೇಶ್ವರ ದೇವಾಲಯದ ಶಿವ ಲಿಂಗದ ಮೇಲೆ ಸೂರ್ಯರಶ್ಮಿ ಸ್ಪರ್ಶಿಸಿದ ದೃಶ್ಯ. ಪ್ರಜಾವಾಣಿ ಚಿತ್ರ

ಸಂಕ್ರಾಂತಿ ಹಬ್ಬದ ಪ್ರಯುಕ್ತ ಸೋಮವಾರ ಮುಂಜಾನೆಯೇ ಗವಿಗಂಗಾಧರೇಶ್ವರ ದೇವಾಲಯದಲ್ಲಿ ಭಕ್ತರ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಬಂದಿತ್ತು. ಜನರು ಸರದಿ ಸಾಲಿನಲ್ಲಿ ನಿಂತು, ಗಂಗಾಧರೇಶ್ವರನ ದರ್ಶನ ಪಡೆದರು. ಮುಂಜಾನೆ 5ರಿಂದ ಮಧ್ಯಾಹ್ನ 12ರವರೆಗೆ ಭಕ್ತರಿಗೆ ಸುಗಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ವಚನ ಸಂಕ್ರಾಂತಿಯಲ್ಲಿ ಸಿದ್ಧರಾಮರ ಸ್ಮರಣೆ

'ವಚನ ಸಂಕ್ರಾಂತಿ'ಯಲ್ಲಿ ಗಮಕಿ ಸುಷ್ಮಾ ಸಂತೋಷ್ ಅವರನ್ನು ಸನ್ಮಾನಿಸಲಾಯಿತು

ಬೆಂಗಳೂರು: 'ನಿಜದ ನೆಲೆಯ ಅರಿತು, ಲೋಕಕ್ಕೆ ಉಪಕಾರಿಯಾದ ಕಾರ್ಯಗಳನ್ನು ಮಾಡಿ, ಅರವತ್ತೆಂಟು ಸಾವಿರ ವಚನಗಳ ಹಾಡಿ ಕನ್ನಡ ನಾಡಿನಾದ್ಯಂತ ಸಂಚರಿಸಿದ ನಿಜಯೋಗಿ ಸಿದ್ದರಾಮರು' ಎಂದು ಸಾಮಾಜಿಕ ಹೋರಾಟಗಾರ್ತಿ ಕೆ.ಆರ್. ಸೌಮ್ಯಾಗೌಡ ಹೇಳಿದರು.

ವಚನಜ್ಯೋತಿ ಬಳಗವು ಜ್ಞಾನಭಾರತಿ ಸೊಣ್ಣೇನಹಳ್ಳಿಯ ರಂಗಹನುಮಯ್ಯ ಬಯಲು ಮಂಟಪದಲ್ಲಿ ಆಯೋಜಿಸಿದ್ದ 'ವಚನ ಸಂಕ್ರಾಂತಿ' ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

'ಬಸವಣ್ಣನವರ ನೇತೃತ್ವದಲ್ಲಿ ನಡೆದ ವಿಚಾರ ಕ್ರಾಂತಿಯಲ್ಲಿ ಸಿದ್ದರಾಮರು ತಮ್ಮ ಕರ್ಮಯೋಗವ ಬಿಟ್ಟು ಕೈಲಾಸವೆಂಬುದು ಹಾಳು ಬೆಟ್ಟ ಎಂದು ಹೇಳಿದವರು. ಉತ್ತರ ಕರ್ನಾಟಕದ ಕುಡು ಒಕ್ಕಲಿಗರು, ಮಧ್ಯ ಕರ್ನಾಟಕದ ನೊಳಂಬ ಲಿಂಗಾಯತರು, ಬಹು ಸಂಖ್ಯಾತರಾದ ಕುರುಬರು ಹಾಗೂ ಭೋವಿ ಸಮುದಾಯದವರು ಸಿದ್ದರಾಮರ ಅಖಂಡ ಅನುಯಾಯಿಗಳು' ಎಂದು ಮಾಹಿತಿ ನೀಡಿದರು.

ಪಂಪನಗೌಡ ಮೇಲ್ಸೀಮೆ ಮಾತನಾಡಿ, 'ಸಂಕ್ರಾಂತಿಯ ನೆಪದಲ್ಲಿ ವಚನಗಳನ್ನು ಆಲಿಸುವುದು, ಸಿದ್ದರಾಮರಂತಹ ಶಿವಯೋಗಿಗಳ ಸ್ಮರಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ' ಎಂದರು.

ವಚನಜ್ಯೋತಿ ಬಳಗದ ಪಿನಾಕಪಾಣಿ ಮಾತನಾಡಿ, 'ಮಕ್ಕಳ ವಚನ ಮೇಳ-2024' ಅನ್ನು ಜೂನ್‌ನಲ್ಲಿ ಮತ್ತಷ್ಟು ವಿಶೇಷತೆಗಳೊಂದಿಗೆ ಆರಂಭಿಸಲಾಗುವುದು ಎಂದು ಹೇಳಿದರು.

ಗಾಯಕರಾದ ಸಿದ್ದರಾಮ ಕೇಸಾಪುರ, ರವೀಂದ್ರ ಸೊರಗಾವಿ, ಪಂಡಿತ ದೇವೇಂದ್ರಕುಮಾರ ಪತ್ತಾರ್, ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ಶರ್ವಾಣಿ, ಗೀತಾ ಭತ್ತದ್, ಪೂರ್ಣಿಕ, ದಿಶಾ, ಶ್ರಾವಣಿ, ಶಾರ್ವಿ, ಸೋನಾಕ್ಷಿ, ಶ್ರೇಷ್ಠ, ಆದಿತ್ಯ ವಚನಗಳನ್ನು ಹಾಡಿದರು.

ಕನ್ನಮಂಗಲ: ಆದಿಶಕ್ತಿ ದೇವಿಗೆ ವಿಶೇಷ ಅಭಿಷೇಕ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಇಲ್ಲಿಗೆ ಸಮೀಪದ ಕನ್ನಮಂಗಲ ಗೇಟ್ ಬಳಿಯ ಅಮ್ಮನಗುಡ್ಡದ ಆದಿಶಕ್ತಿ ದೇವಿಗೆ ಸಂಕ್ರಾಂತಿ ಪ್ರಯುಕ್ತ ವಿಶೇಷವಾಗಿ ನವಧಾನ್ಯಗಳು, ಎಳನೀರು, ಕಬ್ಬಿನ ಹಾಲು ಹಾಗೂ ಪಂಚಾಮೃತ ಅಭಿಷೇಕ ಮಾಡಲಾಯಿತು.

ನೂರಾರು ಭಕ್ತರ ಸಮ್ಮುಖದಲ್ಲಿ ಮೂರು ಗಂಟೆ ನಡೆದ ಅಭಿಷೇಕದ ಅವಧಿಯಲ್ಲಿ ದರ್ಪಣದ(ಕನ್ನಡಿ) ಸಹಾಯದಿಂದ ಸೂರ್ಯ ರಶ್ಮಿಯನ್ನು ಆದಿಶಕ್ತಿ ದೇವಿ ಮೂರ್ತಿಗೆ ಸ್ಪರ್ಶಿಸುವುದನ್ನು ಭಕ್ತರು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಅಭಿಷೇಕದ ಎಳನೀರು, ನವಧಾನ್ಯದ ಪೊಟ್ಟಣಗಳನ್ನು ತೀರ್ಥ ಪ್ರಸಾದವನ್ನಾಗಿ ವಿತರಿಸಲಾಯಿತು. ಸುಮಂಗಲಿಯರಿಗೆ ಬಾಗಿನ ನೀಡಲಾಯಿತು. ಸಾವಿರಾರು ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಪ್ರಧಾನ ಅರ್ಚಕರಾದ ನರಸಿಂಹಮೂರ್ತಿ ದೇವಾಲಯದ ದಿನದರ್ಶಿಕೆಯೊಂದಿಗೆ ಅಭಿಷೇಕದ ನವಧಾನ್ಯಗಳ ಪೊಟ್ಟಣಗಳನ್ನು ವಿತರಿಸಿದರು.

ದೊಡ್ಡಬಳ್ಳಾಪುರದ ಮಾಜಿ ಶಾಸಕ ವೆಂಕಟರಮಣಯ್ಯ, ತಾಲ್ಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಚುಂಚೇಗೌಡ ಭಾಗವಹಿಸಿದ್ದರು.

ಪಟ್ಟಣದ ಅಯ್ಯಪ್ಪಸ್ವಾಮಿ, ಬಿನ್ನಮಂಗಲದ ಮುಕ್ತಿನಾಥೇಶ್ವರ, ಮಹಾಲಿಂಗೇಶ್ವರ, ವೆಂಕಟರಮಣಸ್ವಾಮಿ, ಕಾಶಿ ವಿಶ್ವನಾಥ ದೇವಾಲಯಗಳಲ್ಲಿ ವಿಶೇಷ ಪೂಜೆ ಪ್ರಸಾದ ವಿತರಿಸಲಾಯಿತು. ಸಂಕ್ರಾಂತಿ ಅಂಗವಾಗಿ ಸಂಜೆ ಬೆಳ್ಳಿ ಅಲಂಕೃತ ರಥದಲ್ಲಿ ಅಯ್ಯಪ್ಪಸ್ವಾಮಿ ಮೆರವಣಿಗೆ ನಡೆಯಿತು.

ನೆಲಮಂಗಲ ಸಮೀಪದ ಅಮ್ಮನಗುಡ್ಡದಲ್ಲಿ ಸಂಕ್ರಾಂತಿ ವಿಶೇಷ ಪೂಜೆಯ ಸಂದರ್ಭದಲ್ಲಿ ಆದಿಶಕ್ತಿ ದೇವಿಯನ್ನು ಸೂರ್ಯ ರಶ್ಮಿ ಸ್ಪರ್ಶಿಸಿದ ಕ್ಷಣವನ್ನು ಭಕ್ತರು ಕಣ್ತುಂಬಿಕೊಂಡು ಸಂಭ್ರಮಿಸಿದರು.

ಶಿವಮೊಗ್ಗ: ವಿಮಾನನಿಲ್ದಾಣ ಕಾಮಗಾರಿ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮಧು ಬಂಗಾರಪ್ಪ

ಶಿವಮೊಗ್ಗ: ಇಲ್ಲಿನ ಸೋಗಾನೆಯಲ್ಲಿ ನಿರ್ಮಿಸಲಾಗಿರುವ ವಿಮಾನ ನಿಲ್ದಾಣ ಕಾಮಗಾರಿ ಕುರಿತ ಸಮಗ್ರ ತನಿಖೆಗೆ ಆಗ್ರಹಿಸಿದ್ದು, ಸರ್ಕಾರಕ್ಕೆ ಪತ್ರ ಬರೆದಿದ್ದೇನೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್.ಮಧು ಬಂಗಾರಪ್ಪ ಹೇಳಿದರು.

ಕಲಬುರಗಿಯಲ್ಲಿ ನಿರ್ಮಿಸಲಾದ ವಿಮಾನ ನಿಲ್ದಾಣಕ್ಕೆ ಕೇವಲ ₹200 ಕೋಟಿ ವ್ಯಯಿಸಲಾಗಿದೆ. ಆದರೆ, ಜಿಲ್ಲೆಯ ವಿಮಾನ ನಿಲ್ದಾಣಕ್ಕೆ ₹450 ಕೋಟಿ ಖರ್ಚು– ವೆಚ್ಚ ತೋರಿಸಲಾಗಿದೆ. ಆದ್ದರಿಂದ ಇಲ್ಲಿ, ಭಾರಿ ಅವ್ಯವಹಾರ ನಡೆದಿರುವ ಸಾಧ್ಯತೆ ಇದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ವಿಮಾನ ನಿಲ್ದಾಣ ಅಭಿವೃದ್ಧಿಗೆ ಕೇಂದ್ರದ ಪಾಲಷ್ಟೇ ಇಲ್ಲ. ರಾಜ್ಯದ ಜನರ ತೆರಿಗೆ ಹಣವೂ ಕೂಡಿದೆ. ಇದನ್ನು ಪ್ರಶ್ನೆ ಮಾಡುವ ಹಕ್ಕು ಸರ್ಕಾರ ಹಾಗೂ ಜನಸಾಮಾನ್ಯರಿಗೆ ಇದೆ ಎಂದರು.

ಕೇಂದ್ರ ಸರ್ಕಾರದಿಂದ ಜಿಲ್ಲೆಗೆ ಯೋಜನೆಗಳನ್ನು ತರಲಾಗಿದೆ. ಆದರೆ, ಇಲ್ಲಿನ ಸ್ಮಾರ್ಟ್ ಸಿಟಿ ಸೇರಿದಂತೆ ಹೆದ್ದಾರಿ ಕಾಮಗಾರಿಗಳು ಕಳಪೆ ಮತ್ತು ಅವ್ಯವಹಾರದಿಂದ ಕೂಡಿವೆ ಎಂದು ಸಾಕಷ್ಟು ದೂರುಗಳು ಬಂದಿವೆ. ಇವುಗಳನ್ನೂ ತನಿಖೆಗೆ ಒಳಪಡಿಸುವಂತೆ ಕೋರಲಾಗುವುದು ಎಂದರು.

'ಬಿಜೆಪಿಯವರು ಗ್ಯಾರಂಟಿ ಯೋಜನೆಗಳ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಆದರೆ, ಇದರ ಲಾಭ ಪಡೆಯುತ್ತಿರುವವರು ಶೇ 70ರಷ್ಟು ಜನ ಬಿಜೆಪಿಯವರೇ ಆಗಿದ್ದಾರೆ. ನಾವು ಒಂದು ಕುಟುಂಬಕ್ಕೆ ಕನಿಷ್ಠ ₹ 5,000 ನೀಡುತ್ತಿದ್ದೇವೆ' ಎಂದರು.

ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಸೌಲಭ್ಯ ಅರ್ಹ ವ್ಯಕ್ತಿಗೆ ತಲುಪಿಸಲು ರಾಜ್ಯದಲ್ಲಿ ಅನುಷ್ಠಾನ ಸಮಿತಿ ಜಾರಿಗೊಳಿಸಲಾಗುವುದು. ರಾಜ್ಯದ ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಹಂತದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಕಗೊಳಿಸಿ ಜನ ಸಾಮಾನ್ಯರ ಕುಂದುಕೊರತೆಗಳಿಗೆ ಸರ್ಕಾರ ದನಿ ಆಗಲಿದೆ ಎಂದರು.

ಜಾಮೀನು ಅರ್ಜಿ: ಆರೋಪಿಗೆ 'ಸುಪ್ರೀಂ' ನೋಟಿಸ್

ನವದೆಹಲಿ: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಆರೋಪಿಯೊಬ್ಬರಿಗೆ ಜಾಮೀನು ನೀಡಿ ಕರ್ನಾಟಕ ಹೈಕೋರ್ಟ್ ಹೊರಡಿಸಿರುವ ಆದೇಶ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿ, ಆರೋಪಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ, ಗೌರಿ ತಂಗಿ ಕವಿತಾ ಲಂಕೇಶ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸತೀಶ್ಚಂದ್ರ ಶರ್ಮಾ ಅವರಿದ್ದ ನ್ಯಾಯಪೀಠ, ಆರೋಪಿ ಮೋಹನ್ ನಾಯಕ್ ಅವರಿಗೆ ನೋಟಿಸ್ ಜಾರಿ ಮಾಡಿದೆ.

ಕರ್ನಾಟಕ ಹೈಕೋರ್ಟ್, ಆರೋಪಿಗೆ ಕಳೆದ ಡಿಸೆಂಬರ್ 7ರಂದು ಜಾಮೀನು ನೀಡಿ ಆದೇಶಿಸಿತ್ತು

ಗೌರಿ ಲಂಕೇಶ್

ನಿಧನ ವಾರ್ತೆ

ಕೆ. ರಮೇಶ್



ಬೆಂಗಳೂರು: ಡಿಜಿ ಟ್ರಾಕ್ ಸೈಂಟಿಫಿಕ್ ಇನ್‌ಸ್ಟ್ರುಮೆಂಟ್ಸ್ ಸಂಸ್ಥೆ ಸಂಸ್ಥಾಪಕ, ವಿಜಯನಗರದ ನಿವಾಸಿ ಕೆ. ರಮೇಶ್ (56) ಅವರು ಸೋಮವಾರ ಸಂಜೆ ನಿಧನರಾದರು. ಕೆಲಕಾಲದಿಂದ ಅನಾರೋಗ್ಯ ದಿಂದ ಚಿಕಿತ್ಸೆ ಪಡೆಯುತ್ತಿದ್ದರು. ಮೃತರಿಗೆ ತಾಯಿ, ಪತ್ನಿ, ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳದ ಅಜ್ಜೇನಹಳ್ಳಿಯ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

'ರಾಮಮಂದಿರ: ಬಿಜೆಪಿ ರಾಜಕೀಯ'

ಬೆಂಗಳೂರು: 'ಮುಂಬರುವ ಲೋಕಸಭೆ ಚುನಾವಣೆಗೆ ಪ್ರಚಾರ ಪಡೆಯಲು ಅಯೋಧ್ಯೆಯ ರಾಮಮಂದಿರ ಉದ್ಘಾಟನೆ ಕಾರ್ಯಕ್ರಮವನ್ನು ಬಿಜೆಪಿ ಬಳಸುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಆರೋಪಿಸಿದ್ದಾರೆ.

'ರಾಮ ಮಂದಿರ ಕಾರ್ಯಕ್ರಮದ ಹಿಂದೆ ರಾಜಕೀಯ ಉದ್ದೇಶ ಇಲ್ಲವೆಂದಾದರೆ ಪ್ರಧಾನಿ ಮತ್ತು ಬಿಜೆಪಿ ನಾಯಕರು ತರಾತುರಿಯಲ್ಲಿ ರಾಮಮಂದಿರ ಉದ್ಘಾಟನೆ ಯಾಕೆ ಮಾಡಬೇಕಿತ್ತು' ಎಂದು ಅವರು ಪ್ರಶ್ನಿಸಿದ್ದಾರೆ.

'ರಾಮಮಂದಿರಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ಕಟ್ಟಡ ಪೂರ್ಣಗೊಳ್ಳುವ 10–12 ತಿಂಗಳು ಮೊದಲೇ ರಾಮನ ಮೂರ್ತಿ ಪ್ರತಿಷ್ಠಾಪನೆಯ ಹಿಂದಿರುವ ಬಿಜೆಪಿಯ ರಾಜಕೀಯಕ್ಕೆ ನಮ್ಮ ವಿರೋಧವಿದೆ. ಇದು ಬಿಜೆಪಿ, ಆರೆಸ್ಸೆಸ್ ಕಾರ್ಯಕ್ರಮ ಆಗಿರುವುದರಿಂದ, ಇದೇ 22ರ ಕಾರ್ಯಕ್ರಮ ಬಹಿಷ್ಕರಿಸಲು ಪಕ್ಷ ನಿರ್ಧರಿಸಿದೆ ಎಂದರು.

ಬೆದರಿಕೆ: ಆರೋಪಿ ಬಂಧನ

ಬೆಂಗಳೂರು: ಮಾರಕಾಸ್ತ್ರಗಳನ್ನು ಹಿಡಿದು ಪಕ್ಕದ ಮನೆಯವರಿಗೆ ಬೆದರಿಕೆ ಹಾಕಿದ್ದ ಆರೋಪಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ವರ್ತೂರು ಪೊಲೀಸ್ ಠಾಣೆ ವ್ಯಾಪ್ತಿಯ ಪಣತ್ತೂರು ದಿಣ್ಣೆ ನಿವಾಸಿಯಾದ ಮುತ್ತು ಮುರಳಿ ಅಲಿಯಾಸ ಮುರಳಿ ಸಂಪಗಿ (27) ಬಂಧಿತ ಆರೋಪಿ.

ಮುರಳಿ ಸಂಪಂಗಿ, ನೀರಿನ ಟ್ಯಾಂಕರ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಭಾನುವಾರ ಸಂಜೆ ಆರೋಪಿಯ ತಂದೆಯೊಂದಿಗೆ ಕ್ಷುಲ್ಲಕ ಕಾರಣಕ್ಕಾಗಿ ಪಕ್ಕದ ಮನೆಯ ನಿವಾಸಿ ರಾಜಪ್ಪ ಜಗಳ ತೆಗೆದಿದ್ದರು. ಎರಡು ಕುಟುಂಬಗಳ ನಡುವೆ ಗಲಾಟೆಯಾಗಿದೆ. ಆರೋಪಿ ಮಾರಕಾಸ್ತ್ರ ಹಿಡಿದು ಜೀವ ಬೆದರಿಕೆ ಹಾಕಿ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

'ಈ ಬಗ್ಗೆ ರಾಜಪ್ಪ ವರ್ತೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಪ್ರತ್ಯೇಕ ಅಪಘಾತ: ಮೂವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೂರು ಸ್ಥಳಗಳಲ್ಲಿ ನಡೆದ ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಬೈಕ್ ಸವಾರರು ಹಾಗೂ ಕಾರು ಚಾಲಕ ಸೇರಿದಂತೆ ಮೂವರು ಮೃತಪಟ್ಟಿದ್ದಾರೆ.

ಬೈಕ್ ಸವಾರ ಸಾವು: ಬೇಗೂರು ಎಲೆಕ್ಟ್ರಾನಿಕ್ ಸಿಟಿ ರಸ್ತೆಯಲ್ಲಿರುವ ಸೋಮವಾರ ಬೈಕ್‌ವೊಂದು ನಿಯಂತ್ರಣ ತಪ್ಪಿ ಅಪಘಾತಕ್ಕೀಡಾದ ಪರಿಣಾಮ ಬೈಕ್ ಸವಾರ ಮೃತಪಟ್ಟಿದ್ದಾರೆ. ಅಸ್ಸಾಂನ ಉಮಾಂಗ್ ಬೋರಾ (27) ಮೃತಪಟ್ಟವರು.

'ನಗರದ ಬೆಳ್ಳಂದೂರಿನಲ್ಲಿ ವಾಸವಾಗಿದ್ದ ಉಮಾಂಗ್ ಬೋರಾ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಸ್ನೇಹಿತರೊಂದಿಗೆ ಪಾರ್ಟಿ ಮುಗಿಸಿಕೊಂಡು ಬೆಳಗಿನ ಜಾವ 1.30ಕ್ಕೆ ಮನೆಗೆ ತೆರಳುತ್ತಿದ್ದಾಗ ಬೇಗೂರು ಎಲೆಕ್ಟ್ರಾನಿಕ್ ಸಿಟಿ ರಸ್ತೆಯಲ್ಲಿರುವ ಕ್ಲಾಸಿಕ್ ಅಪಾರ್ಟ್‌ಮೆಂಟ್ ಮುಂಭಾಗದಲ್ಲಿ ಬೈಕ್ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ತೀವ್ರ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಈ ಬಗ್ಗೆ ಹುಳಿಮಾವು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಆಟೊ– ಬೈಕ್ ನಡುವೆ ಅಪಘಾತ: ಪೀಣ್ಯದ ಹೆಗ್ಗನಹಳ್ಳಿಯ ಮುಖ್ಯರಸ್ತೆಯಲ್ಲಿ ಭಾನುವಾರ ಆಟೊ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

'ಹೇರೊಹಳ್ಳಿ ಕ್ರಾಸ್‌ನ ಮಹದೇಶ್ವರನಗರದ ನಿವಾಸಿ ಚಂದ್ರಶೇಖರ್ ಬಿ.ಎಲ್(48) ಮೃತಪಟ್ಟವರು. ಚಂದ್ರಶೇಖರ್ ಅವರು ಭಾನುವಾರ ಮಧ್ಯಾಹ್ನ ತಮ್ಮ ಮಕ್ಕಳಾದ ಗ್ರೀಷ್ಮಾ (9), ಲೋಹಿತ್ (13) ಅವರೊಂದಿಗೆ ಬೈಕ್‌ನಲ್ಲಿ ಪೀಣ್ಯ ಕಡೆಯಿಂದ ಹೆಗ್ಗನಹಳ್ಳಿ ಕ್ರಾಸ್‌ನತ್ತ ತೆರಳುತ್ತಿದ್ದರು. ಫುಡ್ ಲ್ಯಾಂಡ್ ಹೈಪರ್ ಮಾರ್ಕೆಟ್ ಮುಂಭಾಗದ ರಸ್ತೆಯಲ್ಲಿ ಹಿಂದಿನಿಂದ ವೇಗವಾಗಿ ಬಂದ ಆಟೊ, ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಚಂದ್ರಶೇಖರ್ ಅವರು ಕೆಳಗಡೆ ಬಿದ್ದು, ತಲೆಗೆ ಪೆಟ್ಟಾಗಿದೆ. ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿವೆ' ಎಂದು ಪೊಲೀಸರು ತಿಳಿಸಿದರು.

'ಗಾಯಗೊಂಡಿದ್ದ ಚಂದ್ರಶೇಖರ್ ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಈ ಬಗ್ಗೆ ಪೀಣ್ಯ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ನಿಂತಿದ್ದ ಕಾರಿಗೆ ಡಿಕ್ಕಿ ಟೆಕಿ ಸಾವು: ಬಾಣಸವಾಡಿ ಸಂಚಾರ ಪೊಲೀಸ ಠಾಣೆ ವ್ಯಾಪ್ತಿಯ ಸಿಎಂಆರ್ ಮುಖ್ಯರಸ್ತೆಯಲ್ಲಿ ಕಾರೊಂದು ನಿಯಂತ್ರಣ ತಪ್ಪಿ ರಸ್ತೆಯ ಬದಿ ನಿಂತಿದ್ದ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದು, ಟೆಕಿ ಮೃತಪಟ್ಟಿದ್ದಾರೆ.

ಹೊರಮಾವಿನ ಅಗರ ನಿವಾಸಿ ಮೆಲ್ವಿನ್ ಜೋಸ್ವಾ (25) ಮೃತಪಟ್ಟವರು.

'ಮೆಲ್ವಿನ್ ಅವರು ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಭಾನುವಾರ ಸಂಜೆ ನಿಶ್ಚಿತಾರ್ಥ ಕಾರ್ಯಕ್ರಮ ಮುಗಿಸಿಕೊಂಡು ತನ್ನ ಸ್ನೇಹಿತೆ ಹೆಡ್ಲಿ ಶೆರ್ಲಿನ್ ಅವರೊಂದಿಗೆ ಕಾರಿನಲ್ಲಿ ಮನೆಗೆ ತೆರಳುತ್ತಿದ್ದಾಗ ಅಪಘಾತ ನಡೆದಿದೆ' ಎಂದು ಪೊಲೀಸರು ತಿಳಿಸಿದರು.

'ಬೆಳಗಿನ ಜಾವ 2 ಗಂಟೆಗೆ ಮೆಲ್ವಿನ್ ಜೋಸ್ವಾ ಅವರು ಕಾರನ್ನು ಅತೀವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದಾಗ ಸಿಎಂಆರ್ ಮುಖ್ಯರಸ್ತೆಯಲ್ಲಿ ನಿಯಂತ್ರಣ ತಪ್ಪಿದ ಕಾರು, ರಸ್ತೆಯ ಬದಿಯಲ್ಲಿ ನಿಂತಿದ್ದ ಮತ್ತೊಂದು ಕಾರಿಗೆ ಡಿಕ್ಕಿ ಹೊಡೆದು, ನಂತರ ಮರ ಹಾಗೂ ಮನೆಯ ಗೇಟಿಗೆ ಗುದ್ದಿದೆ. ತೀವ್ರವಾಗಿ ಗಾಯಗೊಂಡಿದ್ದ ಮೆಲ್ವಿನ್ ಜೋಸ್ವಾ ಅವರನ್ನು ಸಮೀಪದ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಬೆಳಿಗ್ಗೆ 4 ಗಂಟೆಗೆ ಅವರು ಮೃತಪಟ್ಟಿದ್ದಾರೆ. ಬಾಣಸವಾಡಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಅಮೆರಿಕ: ಇಬ್ಬರು ತೆಲುಗು ಭಾಷಿಕ ವಿದ್ಯಾರ್ಥಿಗಳ ಸಾವು

ಹೈದರಾಬಾದ್: ಅಮೆರಿಕದ ಕನೆಕ್ಟಿಕಟ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಇಬ್ಬರು ತೆಲುಗು ಭಾಷಿಕ ವಿದ್ಯಾರ್ಥಿಗಳು ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಮೃತಪಟ್ಟಿದ್ದು, ಇವರ ಕುಟುಂಬಗಳು ಆಘಾತಕ್ಕೆ ಒಳಗಾಗಿವೆ. ಶವಗಳನ್ನು ಭಾರತಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ.

ತೆಲಂಗಾಣದ ವನಪರ್ತಿಯ ಗಟ್ಟು ದಿನೇಶ್ (22) ಮತ್ತು ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ನಿಕೇಶ್ (21) ಮೃತಪಟ್ಟ ವಿದ್ಯಾರ್ಥಿಗಳು. ಕನೆಕ್ಟಿಕಟ್ ರಾಜ್ಯದ ಹಾರ್ಟ್‌ಫೋರ್ಡ್ ಪಟ್ಟಣದ ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಇವರು ಭಾನುವಾರ ಬೆಳಿಗ್ಗೆ ಶವವಾಗಿ ಪತ್ತೆಯಾಗಿದ್ದರು.

ಈ ಇಬ್ಬರೂ ಕಂಪ್ಯೂಟರ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನಕ್ಕಾಗಿ ಹಾರ್ಟ್‌ಫೋರ್ಡ್‌ನ ಸೇಕ್ರೆಡ್ ಹಾರ್ಟ್ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದು, ಕಳೆದ ಡಿಸೆಂಬರ್ 28ರಂದು ಅಮೆರಿಕಕ್ಕೆ ಹೋಗಿದ್ದರು.

ವನಪರ್ತಿಯಲ್ಲಿರುವ ದಿನೇಶ್ ಅವರ ಕುಟುಂಬ ಸದಸ್ಯರು, 'ಭಾನುವಾರ ಬೆಳಿಗ್ಗೆ ಇಬ್ಬರೂ ವಿದ್ಯಾರ್ಥಿಗಳು ತಮ್ಮ ಕೋಣೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ ಎಂಬ ಮಾಹಿತಿ ಕನೆಕ್ಟಿಕಟ್ ಪೊಲೀಸರಿಂದ ಬಂದಿದೆ. ಸಾವಿಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ.

ಕೊಠಡಿಯ ಶೂನ್ಯ ಉಷ್ಣಾಂಶದಲ್ಲಿ ಹೆಚ್ಚಿಗೆ ಹೀಟರ್ ಬಳಸಿ, ಹೀಟರ್‌ನಿಂದ ಹೊರ ಸೂಸಲ್ಪಟ್ಟ ಇಂಗಾಲದ ಮಾನಾಕ್ಸೈಡ್ ಉಸಿರಾಡಿ, ನಿದ್ರೆಯಲ್ಲಿಯೇ ಸಾವನ್ನಪ್ಪಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ' ಎಂದು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಪಶ್ಚಿಮ ವಲಯದಲ್ಲಿ 'ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮ: ಚಾಲನೆ: ಡಿ.ಕೆ. ಶಿವಕುಮಾರ್, ಆಯೋಜನೆ: ಬಿಬಿಎಂಪಿ, ಸ್ಥಳ: ಗುಂಡೂರಾವ್ ಮೆಮೋರಿಯಲ್ ಹಾಲ್, ಶಿರೂರ್ ಆಟದ ಮೈದಾನ, ಶೇಷಾದ್ರಿಪುರ, ಬೆಳಿಗ್ಗೆ 9.30

ರಾಜ್ಯ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಸಮಾರೋಪ: ಅತಿಥಿಗಳು: ಡಾ.ಜಿ. ಪರಮೇಶ್ವರ, ಕನ್ನಿಕಾ ಪರಮೇಶ್ವರಿ, ಆಯೋಜನೆ: ರಾಜ್ಯ ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌ಪಿ ಕ್ರೀಡಾಂಗಣ, ಕೋರಮಂಗಲ, ಸಂಜೆ 4.30

ವಾರ್ಷಿಕೋತ್ಸವ, ಪದ್ಮಶ್ರೀ ಕಲಾರತ್ನ ಪ್ರಶಸ್ತಿ ಪ್ರದಾನ: ಜಿ. ನಾರಾಯಣ ಸಂಸ್ಮರಣೆ, ಎನ್. ರಾಘವೇಂದ್ರ ಅವರ 'ಚುನಾವಣಾ ಪ್ರಹಸನಗಳು' ಕೃತಿ ಬಿಡುಗಡೆ: ಉದ್ಘಾಟನೆ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಡಿ.ಎನ್. ಮುನಿಕೃಷ್ಣ, ಪುಸ್ತಕ ಬಿಡುಗಡೆ: ಭೈರಮಂಗಲ ರಾಮೇಗೌಡ, ಸಂಸ್ಮರಣಾ ನುಡಿ: ಸಿ.ಕೆ. ರಾಮೇಗೌಡ, ಟಿ. ತಿಮ್ಮೇಶ್, ಆಯೋಜನೆ: ಪದ್ಮಶ್ರೀ ಕಲಾ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡಭವನ, ಸಂಜೆ 4.30

ಐದು ದಿನಗಳ ರಾಜ್ಯಮಟ್ಟದ ಎನ್.ಎಸ್. ರಾವ್ ನಾಟಕಗಳ ಉತ್ಸವ ಉದ್ಘಾಟನಾ ಕಾರ್ಯಕ್ರಮ: ಅತಿಥಿಗಳು: ಲಗ್ಗೆರೆ ನಾರಾಯಣಸ್ವಾಮಿ, ರಾಘವೇಂದ್ರ ಪಿ.ಎಸ್., ರಂಗಗೌರವ: ಜಿ.ಟಿ. ಗಿರಿಯಪ್ಪ, ಆಯೋಜನೆ: ರಂಗ ಪರಂಪರೆ ಟ್ರಸ್ಟ್, ನಾಟಕ: ವರಭ್ರಷ್ಟ, ಸ್ಥಳ: ಅಶ್ವಿನಿ ಪಬ್ಲಿಕ್ ಸ್ಕೂಲ್ ಸಭಾಂಗಣದ ಕುವೆಂಪು ರಂಗಮಂದಿರ, ಎಲ್.ಜಿ. ರಾಮಣ್ಣ ಬಡಾವಣೆ, ಲಗ್ಗೆರೆ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

CHANAKYA UNIVERSITY
Rooted in ideals • Ascending with ideas
Bengaluru
Established under The Chanakya University Act 2021 (Karnataka Act No. 37 of 2021)
Recognized by the University Grants Commission (UGC), New Delhi.
Approved by AICTE, New Delhi

THE CHANAKYA EDGE

PGCET CODE
MBA- B400
MCA-C543

Liberal Education Model Inspired by NEP 2020
Multidisciplinary Learning
Industry-compliant academic curriculum
Mentoring from Industry and Societal Leaders
Experiential Career Readiness programs
Integration of Indian Knowledge Systems
Strategically located
Internships and Industry visits

M.B.A Master of Business Administration
with Majors in
• Finance
• Marketing
• Business Analytics

MCA Masters of Computer Application
• Data Science
• Theoritical Computer Science
• Graphics Vizualization
• Software Engineering & Management

Placements Assured**
Value-Added Professional Programs to enhance your employability skills
** As per Placement Policy

Management school Advisory Committee
Prof Bhimaraya Metri, Director, IIM Nagpur
Mr. Kamal Bali, President & MD, Volvo Group in India
Prof Prashant Gupta, Dean Faculty & Academics, IIM Nagpur
Dr. C Jayakumar, Sr. Vice President and CHRO, L&T
Prof Bharat Bhaskar, Director, IIM Ahmedabad
Prof Jayadev Madugula, Professor Finance, IIM Bangalore
Prof Chandan Chowdhury, President & MD, Volvo Group in India
Prof D P Goyal, Director, IIM Shillong
Prof Ramchandran Natarajan, Asso. Dean, College of Business, Tennessee Tech University, USA

For Admissions Contact
+918550 8550 92 / 94
admissions@chanakyauniversity.edu.in

Chanakya University Global Campus
Near Kempe Gowda International Airport (BIAL)
Devanahalli Taluk, Bengaluru Rural District - 562 129
www.chanakyauniversity.edu.in

ಕ್ಷೇಮ ಕುಶಲ

ಕೆಲವೊಮ್ಮೆ ಸಹಜವೆನಿಸಿದರೂ, ನಮಗೆ ಗೊತ್ತಿಲ್ಲದೆಯೇ ಗೀಳು ಗಂಭೀರ ಸ್ವರೂಪಕ್ಕೆ ತಿರುಗಿರುತ್ತದೆ. ಎಚ್ಚರಗೊಳ್ಳಬೇಕಿರುವುದು ಯಾವಾಗ?

ಗೀಳು ಕೀಳೆಂದು ಕಡೆಗಣಿಸದಿರಿ...

ಸಂಧ್ಯಾ ಹೆಗಡೆ

ಇದು ಸರ್ಕಾರಿ ಕಚೇರಿಯ ಹಣಕಾಸು ಅಧಿಕಾರಿಯೊಬ್ಬರ ಕತೆ.

ದಿನವೂ ಬಸ್ಸಿನಲ್ಲಿ ಕಚೇರಿಗೆ ತೆರಳುತ್ತಿದ್ದ ಅವರಿಗೆ ಮಾರ್ಗ ಮಧ್ಯೆ ಸಿಗುವ ಬೃಹತ್ ಕಟ್ಟಡವೊಂದರ 32 ಕಿಟಕಿ ಎಣಿಸುವುದು ರೂಢಿಗತ ಅಭ್ಯಾಸ. ಆ ಒಂದು ದಿನ ಅವರ ಎಣಿಕೆ 28 ಆಗುವಷ್ಟರಲ್ಲಿ ಬಸ್ ಮುಂದಕ್ಕೆ ಹೋಗಿಯಾಗಿತ್ತು. ಹಾಗೇ ಕಚೇರಿ ತಲುಪಿದ ಅವರು ಹಿರಿಯ ಅಧಿಕಾರಿಗಳ ಸಭೆಯಲ್ಲಿ ಭಾಗಿಯಾದರು. ಅಲ್ಲಿ ಹಿಗ್ಗಾಮುಗ್ಗಾ ಬೈಸಿಕೊಂಡ ಅವರಿಗೆ ಥಟ್ಟನೆ ಮನದೊಳಗೆ ಮೂಡಿದ್ದು 'ಓಹ್ ಇವತ್ತು ಕಿಟಕಿಯ ಎಣಿಕೆ ತಪ್ಪಿದ್ದೆ ಹೀಗಾಯ್ತು'. ವಾರದ ನಂತರ ಇಂತಹುದೇ ಘಟನೆಯೊಂದು ಪುನರಾವರ್ತನೆಯಾಯಿತು. ಆಗ ಅವರು ಕಿಟಕಿ ಎಣಿಸದಿದ್ದರೆ ಅವಘಡ ನಡೆಯುವುದು ಪಕ್ಕಾ ಎಂದು ತರ್ಕವಿಲ್ಲದ ಕುತರ್ಕಕ್ಕೆ ಜೋತುಬಿದ್ದರು.

ಶರವೇಗದಲ್ಲಿ ಸಾಗುವ ಬಸ್, ಎಣಿಸಿ ಮುಗಿಯದ ಕಿಟಕಿಗಳು.. ಅರ್ಧದಾರಿಯಲ್ಲಿ ಬಸ್ ಇಳಿದು ಮತ್ತೊಂದು ಬಸ್ ಹತ್ತಿ ಮೂಲ ಸ್ಥಳಕ್ಕೆ ಬರುವುದು ಮತ್ತೆ ಬಸ್ ಏರಿ ಹೊರಡುವುದು, ಹೀಗೆ ದಿನಕ್ಕೆ ನಾಲ್ಕಾರು ಬಾರಿ ಬಸ್ ಹತ್ತಿಳಿದು ಬಸವಳಿದರೂ ಮುಗಿಯದ ಎಣಿಕೆ, ಎದೆಯಲ್ಲಿ ತಳಮಳ, ಕಚೇರಿಗೆ ಹೋಗಲು ತಡವಾಗಿ ರಜೆ ಹಾಕುವುದು ಮಾಮೂಲಾಯಿತು.

ತಿಂಗಳು ಕಳೆದ ಮೇಲೆ ಕೆಲಸಕ್ಕೆ ಕಾಯಂ ರಜೆ ಮಾಡುವ ಪರಿಸ್ಥಿತಿ ಬಂತು. ಅವರ ಕುಟುಂಬದವರು ಚಿಂತಿತರಾಗಿ ಆಸ್ಪತ್ರೆಗೆ ಕರೆತಂದಾಗಲೇ ಗೊತ್ತಾಗಿದ್ದು ಇದು ಒಸಿಡಿ (obsessive-compulsive disorder) ಅಂದರೆ 'ಗೀಳು ರೋಗ' ಎಂದು.

ಹೀಗೆ ನೈಜ ಘಟನೆಯ ಉದಾಹರಣೆಯೊಂದಿಗೆ ಮಾತಿಗಿಳಿದರು ಮಂಗಳೂರಿನ ಮನೋವೈದ್ಯ ಡಾ. ರವೀಶ್ ತುಂಗಾ.

ಪ್ರತಿ ವ್ಯಕ್ತಿಯಲ್ಲಿ ಸುಪ್ತವಾಗಿರುವ ಗೀಳು ಸಾಂದರ್ಭಿಕವಾಗಿ ವ್ಯಕ್ತಗೊಳ್ಳುತ್ತದೆ. ಅನುಮಾನ, ಆಲೋಚನೆಗಳು ಮನುಷ್ಯನ ಸಹಜ ಗುಣ. ಮನೆಗೆ ಚಾವಿ ಹಾಕಿರುವ ಬಗ್ಗೆ, ಗ್ಯಾಸ್ ಆಫ್ ಮಾಡಿರುವ ಬಗ್ಗೆ ಎರಡೆರಡು ಬಾರಿ ಪರಿಶೀಲಿಸಿ ದೃಢಪಡಿಕೊಳ್ಳುತ್ತೇವೆ. ಆದರೆ, ದೃಢಪಟ್ಟ ಮೇಲೆ ಕೂಡ ಅದೇ ವಿಚಾರ ವ್ಯಕ್ತಿಯನ್ನು ಆವರಿಸಿಕೊಂಡರೆ ಅದು 'ಗೀಳು ರೋಗ'.

ದೈನಂದಿನ ಒತ್ತಡವೇ ಈ ರೋಗಕ್ಕೆ ಮೂಲ. ಯೋಚನೆ, ಭಾವನೆ, ವರ್ತನೆ ಎಂಬ ತ್ರಿಕೋನ ರೇಖೆಗಳು ವಕ್ರಗೊಂಡಾಗ, ಗೀಳೆಂಬ ಹುಳ ಮನಸ್ಸಿನ ಸುತ್ತ ಗುಂಯ್ ಗುಡಲಾರಂಭಿಸುತ್ತದೆ. ಅತ್ಯಂತ ಶಿಸ್ತು, ಅಚ್ಚುಕಟ್ಟು ಜೀವನ ಕ್ರಮ ರೂಢಿಸಿಕೊಂಡವರಲ್ಲಿ ಅವರಿಗೆ ಅರಿವಿಲ್ಲದಂತೆ ಒತ್ತಡ ಸೃಷ್ಟಿಯಾಗಿ ಗೀಳು ಕಾಡಬಹುದು.

ಅತಿಯಾದ ಗೀಳಿನಿಂದ ಉದ್ಯೋಗ ಕಳೆದುಕೊಂಡವರು ಇದ್ದಾರೆ. ಇದಕ್ಕೆ ವಯೋಮಿತಿ ಇಲ್ಲ. ಮಕ್ಕಳಿಂದ ವೃದ್ಧರವರೆಗೂ ಗೀಳು ರೋಗ ಆವರಿಸಬಹುದು. ಸ್ವಚ್ಛತೆಯ ಭ್ರಮೆಯಲ್ಲಿ ಇಡೀ ದಿನ ಕೈ ತೊಳೆಯುತ್ತಲೇ ಇರುವುದು, ಟ್ಯಾಂಕ್ ನೀರು ಖಾಲಿಯಾದರೂ ಸ್ನಾನ ಮುಗಿಸದಿರುವುದು, ಒಂದಕ್ಷರ ತಪ್ಪಾದರೂ ಪುಟ ಹರಿದು ಮತ್ತೆ ಬರೆಯುವುದು ಹೀಗೆ ಮನಸ್ಸಿಗೆ ಸಮಾಧಾನ ಸಿಗದೆ, ಮಾಡಿದ ಕೆಲಸವನ್ನೇ ಪುನಃ ಪುನಃ ಮಾಡುತ್ತಿರುವುದು ಗೀಳು ರೋಗದ ಲಕ್ಷಣ.

ಗುಣಪಡಿಸಲು ಸಾಧ್ಯ: ಹಲವರು ಇದು ರೋಗವೆಂದು ಗೊತ್ತಿಲ್ಲದೆ ನಿರ್ಲಕ್ಷಿಸುತ್ತಾರೆ. ರೋಗ ಉಲ್ಬಣಾವಸ್ಥೆ ತಲುಪಿದರೆ ಖಿನ್ನತೆಗೆ ಜಾರಬಹುದು, ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭಗಳೂ ಇರುತ್ತವೆ. ಆರಂಭಿಕ ಹಂತದಲ್ಲಿ ಚಿಕಿತ್ಸೆ ದೊರೆತರೆ, ಮೂರು ವಾರಗಳಲ್ಲಿ ರೋಗಿಗಳು ಸಹಜ ಸ್ಥಿತಿಗೆ ಮರಳುತ್ತಾರೆ. ಬಾಣಂತಿಯರಲ್ಲೂ ಈ ಲಕ್ಷಣ ಕಾಣಿಸಿಕೊಳ್ಳಬಹುದು. ಈ ರೀತಿಯ ವರ್ತನೆ ಕಂಡಲ್ಲಿ ತಕ್ಷಣ ವೈದ್ಯರನ್ನು ಸಂಪರ್ಕಿಸಿದರೆ ಹಿತ.

ಒಸಿಡಿ ಕಾಯಿಲೆಗೆ ಯಾವ ಅಡ್ಡ ಪರಿಣಾಮ ಇಲ್ಲದ ಅತ್ಯುತ್ತಮ ಚಿಕಿತ್ಸೆಗಳಿವೆ. ಎಸ್‌ಎಸ್‌ಆರ್‌ಐ (selective serotonin reuptake inhibitors) ಮೂಲಕ ಗುಣಪಡಿಸಲು ಸಾಧ್ಯವಿದೆ. ರೋಗಿಗೆ ಔಷಧ ಮಾತ್ರೆಗಳ ಜೊತೆಗೆ ಕುಟುಂಬದ ಪ್ರೀತಿ, ಸಾಂತ್ವನವೂ ಬೇಕಾಗುತ್ತದೆ.

ಕೌನ್ಸೆಲಿಂಗ್ ಜೊತೆಗೆ ವರ್ತನೆ ಚಿಕಿತ್ಸೆ (ಬಿಹೇವಿಯರ್ ಥೆರಪಿ) ನೀಡಿ, ವರ್ತನೆಯಲ್ಲಿ ಬದಲಾವಣೆ ತರುವುದು, ಇಆರ್‌ಪಿ (ಎಕ್ಸಪೋಷರ್ ಆ್ಯಂಡ್ ರಿವರ್ಸ್ ಪ್ರಿವೆನ್ಶನ್) ಅಂದರೆ ಇಷ್ಟವಾಗದ ಕೆಲಸದ ಮೂಲಕವೇ ಮನಸ್ಸನ್ನು ಸಹಜ ಸ್ಥಿತಿಗೆ ತರುವುದು, ಹೀಗೆ, ಹಲವಾರು ಚಿಕಿತ್ಸಾ ಮಾದರಿಗಳು ಇವೆ. ಒಸಿಡಿ ಗುಣಪಡಿಸಬಹುದಾದ ಕಾಯಿಲೆ. ಆದರೆ, ನಿರ್ಲಕ್ಷಿಸಿದರೆ ಅಪಾಯ ಎನ್ನುತ್ತಾರೆ ಡಾ. ತುಂಗಾ.

ಸೋಮಾರಿತನವನ್ನು ಬೇಜವಾಬ್ದಾರಿ ಅಂತಲೂ, ಅದು ಮನೆಯನ್ನು ಹಾಳುಗೆಡುವುತ್ತದೆ ಅಂತಲೂ ಇಲ್ಲಿಯವರೆಗೂ ತಿಳಿದುಕೊಳ್ಳಲಾಗಿತ್ತು. ಆದರೆ ಅದು ಪೂರ್ಣವಾಗಿ ನಿಜವಲ್ಲ. ಸೋಮಾರಿತನಗಳಲ್ಲಿ ಹಲವು ವಿಧಗಳಿವೆ. ಸ್ವಲ್ಪಮಟ್ಟಿನ ಸೋಮಾರಿತನವು ಆರೋಗ್ಯಕ್ಕೆ ಒಳ್ಳೆಯದು ಎನ್ನುತ್ತ ಹಲವು ಅಧ್ಯಯನಗಳು.

ಸೋಮಾರಿತನ ಹೊಸ ವ್ಯಾಖ್ಯಾನ

ಸುಕೃತ ಎಸ್.

ಯಾವಾಗಲೂ ಮನೆಯ ಹಾಸಿಗೆಯ ಮೇಲೆ ಮಲಗಿಯೇ ಇರುವುದು, ಅಮ್ಮ ಅಥವಾ ಅಪ್ಪ ಹೇಳಿದ ಯಾವ ಕೆಲಸವನ್ನೂ ಮಾಡದೇ ಇರುವುದು, ಯಾವ ಯಾವ ವಯಸ್ಸಿನಲ್ಲಿ ಯಾವೆಲ್ಲಾ ಜವಾಬ್ದಾರಿಗಳನ್ನು ನಿಭಾಯಿಸಬೇಕೋ ಅಂತಹ ಯಾವ ಜವಾಬ್ದಾರಿಯನ್ನೂ ಆಯಾ ಕಾಲಕ್ಕೆ ನಿಭಾಯಿಸದೇ ಇರುವುದನ್ನು ಸೋಮಾರಿತನ ಎನ್ನಬಹುದು. ಕಚೇರಿಯಲ್ಲಿಯೂ ಅಷ್ಟೇ. ತಮಗೆ ವಹಿಸಿದ ಯಾವ ಕೆಲಸವನ್ನೂ ಮಾಡದೇ ಇರುವುದು ಅಥವಾ ಹೇಳಿದ ಕೆಲಸವನ್ನು ತಕ್ಷಣಕ್ಕೆ ಮಾಡದೇ ಇರುವುದು... ಹೀಗೆ ಸೋಮಾರಿತನದ ಹಲವು ಲಕ್ಷಣಗಳನ್ನು ಪಟ್ಟಿ ಮಾಡಬಹುದು. ಜತೆಗೆ ಸೋಮಾರಿಗಳು ಕೆಟ್ಟವರು, ಬೇಜವಾಬ್ದಾರಿ ವ್ಯಕ್ತಿಗಳು ಎಂಬ ಹಣೆಪಟ್ಟಿಗಳನ್ನು ಕೊಡುವುದುಂಟು. ಆದರೆ, ಈಚಿನ ವರ್ಷಗಳಲ್ಲಿ ಸೋಮಾರಿತನದ ವ್ಯಾಖ್ಯಾನಗಳು ಬದಲಾಗಿವೆ. ಹಲವು ಸೂಕ್ಷ್ಮ ಅಂಶಗಳು ಸೋಮಾರಿತನದ ಲಕ್ಷಣಗಳಲ್ಲಿ ಸೇರಿಕೊಂಡಿವೆ. ಅಮೆರಿಕದ ಕೆಲವು ವಿಶ್ವವಿದ್ಯಾಲಯಗಳಲ್ಲಿ ನಡೆಸಿದ ಅಧ್ಯಯನಗಳು, ಸೋಮಾರಿತನದ ಹಲವು ಹೊಸ ಲಕ್ಷಣಗಳನ್ನು ಪಟ್ಟಿ ಮಾಡಿವೆ. ಜೊತೆಗೆ, ಸಣ್ಣ ಪ್ರಮಾಣ ಸೋಮಾರಿತನವು ಅಪಾಯಕಾರಿ ಅಲ್ಲ ಎಂದೂ ಹೇಳಿವೆ.

ಯಾವ ಕೆಲಸವನ್ನೂ ಮಾಡದೇ ಇರುವುದು ಅಥವಾ ಕೆಲಸವನ್ನು ಮುಂದೂಡುತ್ತಲೇ ಇರುವುದು ಎರಡು ಭಿನ್ನ ಪ್ರವೃತ್ತಿಗಳು ಎಂದು ಮನೋವೈದ್ಯರು ಹೇಳುತ್ತಾರೆ. ಒಂದು ಕೆಲಸಕ್ಕೆ ಎಷ್ಟು ಪರಿಶ್ರಮ ಬೇಕೋ ಅಷ್ಟನ್ನು ವಿನಿಯೋಗಿಸದಿರುವುದು ಮತ್ತು ಕೆಲಸವನ್ನು ಪರಿಪೂರ್ಣವಾಗಿ ಮಾಡದೇ ಇರುವುದು ಎಂಬುದು ಸೋಮಾರಿತನಕ್ಕೆ ಇರುವ ಸಾಂಪ್ರದಾಯಿಕವಾದ ವಿವರಣೆ. ಒಂದು ಕೆಲಸವನ್ನು ನಾಳೆ ಮಾಡುತ್ತೇನೆ, ಆಮೇಲೆ ಮಾಡುತ್ತೇನೆ ಎನ್ನುತ್ತಾ ಕೆಲಸ ಮಾಡುವುದನ್ನು ಮುಂದೂಡುವುದನ್ನು ವಿಳಂಬ ಪ್ರವೃತ್ತಿ ಎನ್ನುತ್ತಾರೆ. ಮೇಲು ನೋಟಕ್ಕೆ ಎರಡು ಒಂದೇ ಎನಿಸಿದರೂ, ಎರಡು ಬೇರೆ ಬೇರೆಯೇ ಆಗಿದೆ.

'ತಂತ್ರಗಾರಿಕೆಯ ಸೋಮಾರಿತನ'

'ದಿ ಸ್ವಾಡೆಲ್' ಎನ್ನುವ ವೆಬ್‌ಪತ್ರಿಕೆಗೆ ಬರೆಯುತ್ತಾ ದೇವ್ರುಪಾ ರಕ್ಷಿತಾ ಅವರು, 'ತಂತ್ರಗಾರಿಕೆಯ ಸೋಮಾರಿತನ' ಎನ್ನುವ ಹೊಸದೊಂದು ವ್ಯಾಖ್ಯಾನವೊಂದನ್ನು ನೀಡುತ್ತಾರೆ. ಕಚೇರಿಯಲ್ಲಿನ ಸೋಮಾರಿತನ ಒಂದು ಕಡೆಯಾದರೆ, ಗಂಡಸರು ಮನೆಯಲ್ಲಿ ತಂತ್ರವನ್ನು ಹೂಡಿ ಸೋಮಾರಿಯಾಗಿರುವುದಕ್ಕೆ ಬಯಸುತ್ತಾರೆ ಎನ್ನುತ್ತಾರೆ ಅವರು.

ಮನೆಗೆಲಸವನ್ನು ಮಹಿಳೆಯೇ ಮಾಡಬೇಕು, ಗಂಡಸರು ಮನೆಯಿಂದ ಹೊರಹೋಗಿ ದುಡಿಯಬೇಕು ಎನ್ನುವ ಮನೋಭಾವ ಸಮಾಜದಲ್ಲಿ ಇದೆ. ಆದರೆ ಸಮಾಜವು ಆಧುನಿಕಗೊಳ್ಳುತ್ತಾ ಈ ನಿಯಮವು ಸಡಿಲಗೊಳ್ಳುತ್ತಿದೆ. ಹಾಗಿದ್ದರೂ ಕೆಲವು ಗಂಡಸರು ಮನೆಗೆಲಸ ಮಾಡುವುದನ್ನು ತಪ್ಪಿಸಿಕೊಳ್ಳಲು, ಕೆಲಸ ಮಾಡುವಂತೆ ನಟಿಸುತ್ತಾರೆ. ಪಾತ್ರೆ ತೊಳೆಯಬೇಕು ಎಂದಿಟ್ಟುಕೊಳ್ಳಿ, ನೀರನ್ನು ಅಡುಗೆಮನೆಗೆಲ್ಲಾ ಸಿಡಿಸಿಬಿಡುತ್ತಾರೆ. ಪಾತ್ರೆಯಲ್ಲಿನ ಕೊಳೆಯನ್ನು ಸರಿಯಾಗಿ ತಿಕ್ಕುವುದೇ ಇಲ್ಲ. ಕೊನೆಗೆ ಮಹಿಳೆಯರು, 'ಸಾಕಪ್ಪಾ ಯಾವ ಕೆಲಸವನ್ನೂ ಮಾಡಬೇಡ' ಎನ್ನಬೇಕು. ಇದನ್ನು ಗಂಡಸರ ತಂತ್ರಗಾರಿಕೆಯ ಸೋಮಾರಿತನ ಎಂದು ಅವರು ವಿಶ್ಲೇಷಿಸುತ್ತಾರೆ.

ಬದಲಾದ ವ್ಯಾಖ್ಯಾನ

ಕಾಲ ಕಳೆದಂತೆ ಸೋಮಾರಿತನದ ವ್ಯಾಖ್ಯಾನಗಳು ಬದಲಾಗಿವೆ. ಸೋಮಾರಿತನದ ಕುರಿತು ನೂರಾರು ಅಧ್ಯಯನಗಳು ನಡೆದಿವೆ ಮತ್ತು ಈ ಎಲ್ಲ ಅಧ್ಯಯನಗಳಲ್ಲೂ ಬೇರೆ ಬೇರೆ ಆಯಾಮಗಳಲ್ಲಿ ವಿಶ್ಲೇಷಣೆಗಳನ್ನು ಮಾಡಲಾಗಿದೆ. ಸೋಮಾರಿತನವು ಮನುಷ್ಯನ ಬೌದ್ಧಿಕ ಬೆಳವಣಿಗೆಗೆ ಪೂರಕವಾಗಿಯೇ ಇದೆ ಎನ್ನುತ್ತದೆ ಅಂತಹ ಒಂದು ಅಧ್ಯಯನ.

ಆಟೊಮೊಬೈಲ್ ಕ್ಷೇತ್ರದ ಬೃಹತ್ ಕಂಪನಿ ಕ್ರಿಸ್ಲರ್ ಕಾರ್ಪೊರೇಷನ್‌ನ ಅಧ್ಯಕ್ಷರಾಗಿದ್ದ ಕ್ಲಾರೆನ್ಸ್ ಬ್ಲೈಷರ್ ಅವರು ಸೋಮಾರಿಗಳ ಕುರಿತು 1947ರಲ್ಲಿ ಹೇಳಿರುವ ಮಾತೊಂದನ್ನು ಇಂದಿಗೂ ಉಲ್ಲೇಖಿಸಲಾಗುತ್ತದೆ. 'ಕಾರ್ಖಾನೆಯಲ್ಲಿ ಯಾವುದೋ ಕಷ್ಟಕರ ಸ್ಥಿತಿ ನಿರ್ಮಾಣವಾಗಿದೆ. ನನಗೆ ಆ ಕೆಲಸವನ್ನು ಸುಲಭವಾಗಿ ಮಾಡುವ ವಿಧಾನ ತಿಳಿಯಲಿಲ್ಲ ಎಂದಿಟ್ಟುಕೊಳ್ಳಿ. ಆಗ ನಾನು ಒಬ್ಬ ಸೋಮಾರಿಯ ಬಳಿ ಹೋಗಿ, ಈ ಕೆಲಸವನ್ನು ಮಾಡಿಕೊಡಲು ಕೇಳಿಕೊಳ್ಳುತ್ತೇನೆ. ಆತ ಕಷ್ಟಕರ ಕೆಲಸವನ್ನು ಸುಲಭವಾಗಿ ಮಾಡುವ ವಿಧಾನವನ್ನು ಕೇವಲ 10 ದಿನಗಳಲ್ಲಿ ಕಂಡುಹಿಡಿದು ಬಿಡುತ್ತಾನೆ. ಆಗ ನಾವು ಅದೇ ವಿಧಾನವನ್ನು ಬಳಸುತ್ತೇವೆ'. ಕ್ರಿಸ್ಲರ್ ಅವರು ಈ ಮಾತು, ಸೋಮಾರಿಗಳನ್ನು ಕನಿಷ್ಠವಾಗಿ ನೋಡುವ ದೃಷ್ಟಿಕೋನವನ್ನೇ ಬದಲಾಯಿಸಿ ಬಿಟ್ಟಿತು. ಸೋಮಾರಿತನದ ಸಾಂಪ್ರದಾಯಿಕ ವ್ಯಾಖ್ಯಾನವು ದೈಹಿಕ ಶ್ರಮದ ಕುರಿತಷ್ಟೇ ಮಾತನಾಡುತ್ತದೆ. ಆದರೆ, ಮನೋಶ್ರಮದ ಕುರಿತು ಮಾತನಾಡುವುದಿಲ್ಲ. ಕೆಲಸಗಳನ್ನು ಹೆಚ್ಚು ಹೆಚ್ಚು ಸರಳಗೊಳಿಸಿಕೊಳ್ಳುವುದಕ್ಕಾಗಿಯೇ ಮನುಷ್ಯ ತಂತ್ರಜ್ಞಾನವನ್ನು ಕಂಡುಹಿಡಿದಿದ್ದಾನೆ. ಹೀಗೆ, ಹೆಚ್ಚು ಹೆಚ್ಚು ತಂತ್ರಜ್ಞಾನ ಬಂದಂತೆಲ್ಲಾ ಮನುಷ್ಯ ಅಷ್ಟರ ಮಟ್ಟಿಗೆ ಸೋಮಾರಿಯೇ. ಈಗ ಮನೋಶ್ರಮವನ್ನು ಹೆಚ್ಚು ವಿನಿಯೋಗಿಸುವುದರಿಂದ ದೈಹಿಕ ಶ್ರಮ ಮಾಡದೇ ಇರುವವರು ಸೋಮಾರಿಗಳು ಎಂದು ಕರೆಯುವುದು ಈ ಕಾಲಘಟ್ಟದಲ್ಲಿ ಒಪ್ಪತಕ್ಕದ್ದಲ್ಲ ಎನ್ನುತ್ತವೆ ಅಧ್ಯಯನದ ವರದಿಗಳು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

27) ಸುರಪುರದ ರಾಜನನ್ನು(ವೆಂಕಟಪ್ಪನನ್ನು) ಬ್ರಿಟಿಷರು ಸಂಶಯದಿಂದ ನೋಡಲು ಕಾರಣ ಏನು?

ಉತ್ತರ;– 1857ರಲ್ಲಿ ಪ್ರಾರಂಭದ ಹೋರಾಟದಲ್ಲಿನ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡು ಬಂತು. ಇದರಿಂದಾಗಿ ಬ್ರಿಟಿಷರು ರಾಜನನ್ನು ಸಂಶಯದಿಂದ ಕಾಣುವಂತಾಯಿತು.

28) ಯಾವುದನ್ನು ವ್ಯವಸಾಯ ಅಥವಾ ಕೃಷಿ ಎನ್ನುವರು? ಅದು ಏನನ್ನೆಲ್ಲಾ ಒಳಗೊಂಡಿದೆ?

ಉತ್ತರ:– ಮನುಷ್ಯ ತನಗೆ ಅಗತ್ಯವಾದ ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು 'ವ್ಯವಸಾಯ ಅಥವಾ ಕೃಷಿ' ಎನ್ನುವರು. ಇಂದು ಕೃಷಿಯು ಪಶುಪಾಲನೆ, ಕೋಳಿ ಸಾಕಣೆ ಮತ್ತು ಜೇನು ಸಾಕಣೆಗಳನ್ನೂ ಒಳಗೊಂಡಿದೆ.

29) ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಮುಖ್ಯ ಅಕ್ಷಾಂಶ ಯಾವುದು?

ಉತ್ತರ : $23\frac{1}{2}^0$ ಉತ್ತರ ಅಕ್ಷಾಂಶ (ಕರ್ಕಾಟಕ ಸಂಕ್ರಾಂತಿ ವೃತ್ತ) ಭಾರತದ ಮಧ್ಯ ಭಾಗದಲ್ಲಿ ಹಾಯ್ದು ಹೋಗುತ್ತದೆ.

30) ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.

ಉತ್ತರ:– ಹದಿನೇಳು ಕೋಟಿ ಎಪ್ಪತ್ತು ಲಕ್ಷ

31) ಯಾವ ಅವಧಿಯನ್ನು ಮಂದಗಾಮಿ ಯುಗ ಎನ್ನುತ್ತಾರೆ?

ಉತ್ತರ:– ಸಾಂಪ್ರಾದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿಯುಗ' ಎನ್ನುತ್ತಾರೆ.

32) ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?

ಉತ್ತರ.:– ಉತ್ತರದ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿವುದರಿಂದ ಈ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ.

33) ಜಯಚಾಮರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದವರನ್ನು ಹೆಸರಿಸಿ

ಉತ್ತರ:– ಮಿರ್ಜಾ ಇಸ್ಮಾಯಿಲ್, ಎನ್. ಮಾಧವರಾವ್ ಹಾಗೂ ಆರ್ಕಾಟ್ ರಾಮಸ್ವಾಮಿ

34) ಮಿಶ್ರ ಬೇಸಾಯ ಎಂದರೇನು?

ಉತ್ತರ: ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕೆ ಅಲ್ಲದೆ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವುದು. ಇದಕ್ಕೆ 'ಮಿಶ್ರ ಬೇಸಾಯ' ಎಂದು ಕರೆಯುವರು

35) ಹಲಗಲಿಯ ಬೇಡರ ಹೋರಾಟದ ಕುರಿತು ಬರೆಯಿರಿ.

ಉತ್ತರ:– ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ. ಹಿಂದೆ ಇದು ಮುಧೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತು. 1857ರ ಬಂಡಾಯದ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು. ಇದನ್ನು ಹಲಗಲಿಗೂ ಸಹ ಅನ್ವಯಿಸಲಾಯಿತು. ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ. ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ಸಿಡಿದೆದ್ದರು. ಈ ಹೋರಾಟದಲ್ಲಿ ಹಲಗಲಿಯ ಸುತ್ತಮುತ್ತಲಿನ ಪ್ರದೇಶಗಳಾದ ಮಂಟೂರು, ಬೋದಾನಿ, ಆಲಗುಂಡಿಯ ಬೇಡರು, ಹಲಗಲಿಯ ಬೇಡರೊಂದಿಗೆ ಸೇರಿಕೊಂಡರು. ಇವರ ಬಂಡಾಯವನ್ನು ಹತ್ತಿಕ್ಕಲು ನವೆಂಬರ್‌ನಲ್ಲಿ ಇಂಗ್ಲಿಷರ ಸೇನೆ ಹಲಗಲಿ ಗ್ರಾಮವನ್ನು ತಲುಪಿತು. ಬಂಡಾಯವೆದ್ದ ಬೇಡರನ್ನು ನಿಷ್ಕಾರುಣವಾಗಿ, ಅತ್ಯಂತ ದಮನಕಾರಿಯಾಗಿ ಹತ್ತಿಕ್ಕಿತ್ತು. ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು

36) ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳಾವುವು?

ಉತ್ತರ: ಭಾರತ ಸರ್ಕಾರವು ತ್ವರಿತಗತಿಯಲ್ಲಿ ಏರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದೆ, ಅವುಗಳಲ್ಲಿ ಕುಟುಂಬ ಯೋಜನೆ, ಮಹಿಳಾ ಕಲ್ಯಾಣ ಯೋಜನೆ, ಶಿಶು ಮರಣ ತಡೆಗಟ್ಟುವುದು, ಕ್ಷೇತ್ರ ಯೋಜನೆಗಳು, ಪ್ರಚಾರ ಜಾಹೀರಾತು, ಕುಟುಂಬ ಯೋಜನಾ ಶಿಬಿರಗಳು, ಗ್ರಾಮೀಣ ಪ್ರದೇಶಗಳಲ್ಲಿ ಅತಿಹೆಚ್ಚು ಪ್ರಚಾರವನ್ನು ಮಾಡಿ ಜನರಲ್ಲಿ ಅರಿವು ಮೂಡಿಸುವಲ್ಲಿ ಈ ಕಾರ್ಯಕ್ರಮಗಳು ಮುಂದುವರಿದಿದೆ.

37) ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು ಯಾವುವು?

ಉತ್ತರ:– ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು ಹೀಗಿವೆ :

* ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.
* ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ.
* ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.
* ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
* ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ ಮಾಡಿಕೊಡುತ್ತದೆ.
* ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು

38) ಭಾರತದಲ್ಲಿ ರೂಢಿಯಲ್ಲಿರುವ ವಿವಿಧ ಕೃಷಿ ವಿಧಾನಗಳು ಯಾವುವು?

ಉತ್ತರ:– ವಿವಿಧ ಭೌಗೋಳಿಕ, ಆರ್ಥಿಕ ಮತ್ತು ಸಾಮಾಜಿಕ ಅಂಶಗಳಿಂದಾಗಿ ಭಾರತದಲ್ಲಿ ವಿವಿಧ ಕೃಷಿ ವಿಧಾನಗಳು ರೂಢಿಯಲ್ಲಿವೆ. ಅವು ಹೀಗಿವೆ:– (1) ಜೀವನಾಧಾರಿತ ಬೇಸಾಯ (2) ಸಾಂದ್ರ ಬೇಸಾಯ (3) ವಾಣಿಜ್ಯ ಬೇಸಾಯ (4) ಮಿಶ್ರಬೇಸಾಯ (5) ತೋಟಗಾರಿಕಾ ಬೇಸಾಯ

39) ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯ ಕುರಿತು ಬರೆಯಿರಿ.

ಉತ್ತರ : ಸ್ವಾತಂತ್ರ್ಯ ಬಂದ ಹೊಸದರಲ್ಲಿ ಜನರಿಗೆ ಉತ್ತಮವಾದ ಆಡಳಿತ ನೀಡಲು ಜನರಾಡುವ ಭಾಷೆಯನ್ನು ಆಧರಿಸಿ ಪ್ರಾಂತ್ಯಗಳ ರಚನೆ ಆಗಬೇಕೆಂಬ ಕೂಗು ತೀವ್ರವಾಗಿತ್ತು. ಕೇಂದ್ರ ಸರ್ಕಾರವು 1953ರಲ್ಲಿ ಸರ್ಕಾರ ನ್ಯಾಯಮೂರ್ತಿ ಫಜಲ್ ಆಲಿ ಆಯೋಗ ರಚಿಸಿತು. ಇದರಲ್ಲಿ ಫಜಲ್ ಆಲಿ ಅಧ್ಯಕ್ಷರಾಗಿದ್ದರೆ ಕೆ. ಎಂ. ಫಣಿಕ್ಕರ್ ಮತ್ತು ಎಚ್. ಎನ್. ಕುಂಜ್ರು ಸದಸ್ಯರಾಗಿದ್ದರು.

ಮೊದಲ ಭಾಷಾವಾರು ರಾಜ್ಯವಾಗಿ 1953ರಲ್ಲಿ ಆಂಧ್ರ ಪ್ರದೇಶ ರಚನೆಯಾಯಿತು. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ವಿಂಗಡಣಾ ಕಾನೂನು ಜಾರಿಗೆ ಬಂತು. ಈ ಕಾನೂನಿನ ಪ್ರಕಾರ ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

(ಮುಂದುವರಿಯುವುದು)

II PUC PHYSICS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION : MODEL QUESTIONS

5. Derive an expression for impedance and urrent in LCR series circuit using phasor iagram.

ns:- (..........Contd)

his potential difference or voltage lags behind the urrent I by an angle of $\pi/2$.

his potential difference across R, $V_R = IR$

his potential difference or voltage is in phase with e current).

ince V_R and I are in phase, so V_R is represented by A in the direction of I fig.



The current lags behind the potential difference $_L$ by angle of $\pi/2$, so V_L is represented by OB rpendicular to the direction of I.

The current leads the potential difference V_C by angle of $\pi/2$, so V_C is represented by OF rpendicular to the direction of I.

Since V_L and V_C are in opposite phase, so their sultant

$V_L - V_C$) is represented by OD (Here, $V_L > V_C$).

he resultant of V_R and $(V_L - V_C)$ is given by OH.

he magnitude of OG is given by

$$H = \sqrt{(OA)^2 + (OD)^2} = \sqrt{V_R^2 + (V_L - V_C)^2}$$

hasor-diagram Solution of Series LCR circuit

$$\Rightarrow V = \sqrt{V_R^2 + (V_L - V_C)^2}$$

$$V = \sqrt{I^2R^2 + (IX_L - IX_C)^2} = I\sqrt{R^2 + (X_L - X_C)^2}$$

$$(\text{or}) \frac{V}{I} = \sqrt{R^2 + (X_L - X_C)^2}$$

ut $\frac{V}{1} = Z$, where Z is the effective opposition of CR circuit to A.C. called impedance of the circuit.

Impedance (Z) of LCR circuit is given by,

$Z = \sqrt{R^2 + (X_L - X_C)^2}$ the general relation for impedance.

tra information

he above relation is known to be

learly, (i) if X_L and X_C both are equal i.e., $X_L = X_C$, en $Z = R$ i.e. expression for pure resistive circuit,

i) If $X_L = 0$, then $Z = \sqrt{R^2 + X_C^2}$ i.e. expression for series RC circuit.

(iii) If $X_C = 0$, then Z = $Z = \sqrt{R^2 + X_L^2}$ i.e. expression for series RL circuit.

$$\text{Again, } I = \frac{V}{Z} \Rightarrow I = \frac{V}{\sqrt{R^2 + (X_L - X_C)^2}} = \frac{V}{\sqrt{R^2 + \left(L\omega - \frac{1}{C\omega}\right)^2}}$$

$$\left(\because X_L = L\omega \text{ and } X_C = \frac{1}{C\omega}\right)$$

Let ϕ be the phase angle between V and I, then from Figure already shown-

$$\tan\phi = \frac{V_L - V_C}{V_R} = \frac{IX_L - IX_C}{IR} = \frac{X_L - X_C}{R}$$

Putting $X_L = L\omega$ and $X_C = \frac{1}{C\omega}$, we get $\tan\phi = \frac{\left(L\omega - \frac{1}{C\omega}\right)}{R}$

Also $\cos\phi = \frac{R}{Z} = \frac{R}{\sqrt{R^2 + (X_L - X_C)^2}}$

PART– A

I. Pick the correct option among the four given options for ALL of the following questions:

1. A glass rod is rubbed with silk cloth. The charge acquired by glass rod is __________ .

(A) negative (B) positive
(C) zero
(D) positive on one end and negative on the opposite end

Ans:- (B) positive

2. A spherical conductor of radius R is carrying a charge of +Q. The ratio of the electric potentials corresponding to a point on the surface of the conductor and a point at a distance $\frac{R}{2}$ from the centre of the conductor are in the ratio

(A) 1: 2 (B) 2: 1
(C) 1:1 (D) 4:1

Ans:- (C) 1:1

3. The resistivity of a metallic conductor ______________ with decrease in temperature.

(A) increases (B) decreases
(C) first increases and then decreases
(D) first decreases and then increases

Ans:- (B) decreases

4. The Lorentz force is the force on a charged particle moving in a region containing ________ .

(A) only electric field
(B) only magnetic field
(C) both electric and magnetic fields
(D) only crossed electric and magnetic fields

Ans:- (C) both electric and magnetic fields

ಎತ್ತಿನಹೊಳೆ ಯೋಜನೆ: ಕಾಮಗಾರಿಯನ್ನು ತ್ವರಿತಗೊಳಿಸಲು ಕ್ರಮ

ಭೂಸ್ವಾಧೀನ ಪ್ರಕ್ರಿಯೆಗೆ ವೇಗ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಯಲ್ಲಿ ಆರಂಭಿಕ ಹಂತದ ಕಾಮಗಾರಿ ಪೂರ್ಣಗೊಂಡ ಸ್ಥಳಗಳಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಿದ ಬೆನ್ನಲ್ಲೇ ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಾಲುವೆ ನಿರ್ಮಾಣಕ್ಕೆ ಅಗತ್ಯವಿರುವ ಜಮೀನುಗಳ ಸ್ವಾಧೀನಕ್ಕೆ ಪ್ರಕ್ರಿಯೆ ಆರಂಭಿಸಲಾಗಿದೆ.

ಮುಂದಿನ ಮುಂಗಾರು ಆರಂಭಕ್ಕೂ ಮುನ್ನವೇ ಎತ್ತಿನಹೊಳೆ ಯೋಜನೆಯ ಮೊದಲನೇ ಹಂತದ ಕಾಮಗಾರಿಗಳನ್ನು ಪೂರ್ಣಗೊಳಿಸುವ ಗುರಿಯನ್ನು ಜಲ ಸಂಪನ್ಮೂಲ ಇಲಾಖೆ ಹೊಂದಿದೆ. ಅದಕ್ಕೆ ಪೂರಕವಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಚುರುಕುಗೊಳಿಸಲಾಗಿದೆ.

ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಕರಾವಳಿಯತ್ತ ಹರಿದು ಸಮುದ್ರ ಸೇರುವ ನದಿಗಳ ನೀರನ್ನು ತಿರುಗಿಸಿ ಬಯಲು ಸೀಮೆಯ ಜಿಲ್ಲೆಗಳಿಗೆ 24.01 ಟಿಎಂಸಿ ಅಡಿ ನೀರನ್ನು ಹರಿಸಲು ಎತ್ತಿನಹೊಳೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಏಳು ಜಿಲ್ಲೆಗಳ ಕೆರೆಗಳನ್ನು ತುಂಬಿಸುವುದಕ್ಕಾಗಿ ನಾಲ್ಕು ಜಾಕ್‌ವೆಲ್ ಮತ್ತು ಬೃಹತ್ ಪಂಪಿಂಗ್ ಕೇಂದ್ರಗಳು ಹಾಗೂ 260 ಕಿ.ಮೀ. ಉದ್ದದ ಕಾಲುವೆಗಳನ್ನು ನಿರ್ಮಿಸುವುದು ಈ ಯೋಜನೆಯಲ್ಲಿ ಸೇರಿದೆ. ತೀವ್ರ ವಿಳಂಬವಾಗಿರುವ ಕಾಮಗಾರಿಗಳಿಗೆ ವೇಗ ನೀಡಲು ಜಲ ಸಂಪನ್ಮೂಲ ಇಲಾಖೆ ಮುಂದಾಗಿದೆ.

ಹಾಸನ ಜಿಲ್ಲೆಯ ಕುಮರಿಹಳ್ಳಿ, ರಾಮದೇವರಹಳ್ಳಿ, ಐದಳ್ಳಕಾವಲ್ ಹಾಗೂ ತುಮಕೂರು ಜಿಲ್ಲೆಯ ಕಂಚಿಗನಹಳ್ಳಿ, ಯಲ್ಲಾಪುರ ಮತ್ತು ಬೊಮ್ಮನಹಳ್ಳಿ ಗ್ರಾಮಗಳಲ್ಲಿ 71 ಎಕರೆ ಅರಣ್ಯ ಜಮೀನುಗಳನ್ನು ಎತ್ತಿನಹೊಳೆ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲು ವಿಶ್ವೇಶ್ವರಯ್ಯ ಜಲ ನಿಗಮ (ವಿಜೆಎನ್‌ಎಲ್) ಪ್ರಸ್ತಾವ ಸಲ್ಲಿಸಿದೆ. ಈ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡರೆ ಕಾಲುವೆಗಳ ನಿರ್ಮಾಣ ಕಾಮಗಾರಿಗಳಿಗೆ ವೇಗ ದೊರೆಯಲಿದೆ.

'ಸಕಲೇಶಪುರ ತಾಲ್ಲೂಕಿನ ಹೆಬ್ಬನಹಳ್ಳಿ ವಿತರಣಾ ಘಟಕಕ್ಕೆ ಹೊಂದಿಕೊಂಡಿರುವ ಎತ್ತರ ಪ್ರದೇಶದಲ್ಲಿ 24 ಕಿ.ಮೀ. ಉದ್ದದ ಕಾಲುವೆ ಜಾಲದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 260 ಕಿ.ಮೀ. ಉದ್ದದ ಕಾಲುವೆಗಳ ನಿರ್ಮಾಣ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯೂ ಮುಗಿದಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬವೇ ಕಾಲುವೆಗಳ ನಿರ್ಮಾಣಕ್ಕೆ ದೊಡ್ಡ ತೊಡಕಾಗಿದೆ' ಎನ್ನುತ್ತಾರೆ ವಿಜೆಎನ್‌ಎಲ್ ಕಾರ್ಯನಿರ್ವಾಹಕ ಎಂಜಿನಿಯರ್ ಡಿ. ವೆಂಕಟೇಶ್.

ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಕಾಮಗಾರಿಗಳನ್ನು 2023ರ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ರಾಜ್ಯ ಸರ್ಕಾರವು ವಿಜೆಎನ್‌ಎಲ್‌ಗೆ ಗಡುವು ನೀಡಿತ್ತು. ಆದರೆ, 2024ರ ಅಂತ್ಯದ ವೇಳೆಗೆ 100 ಕಿ.ಮೀ. ವರೆಗೆ ನೀರು ಹರಿಸಲು ಸಾಧ್ಯವಾಗಬಹುದು ಎನ್ನುತ್ತಾರೆ ನಿಗಮದ ಹಿರಿಯ ಅಧಿಕಾರಿಯೊಬ್ಬರು.

'ಹಲವು ಕಡೆಗಳಲ್ಲಿ ಭೂಸ್ವಾಧೀನದಲ್ಲಿನ ಕಾನೂನು ತೊಡಕುಗಳ ಕಾರಣದಿಂದಾಗಿ ಕಾಲುವೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಮೂರು ಪ್ರಕರಣಗಳಲ್ಲಿ ಜಮೀನುಗಳು ಖಾಸಗಿಯವರ ಸ್ವಾಧೀನದಲ್ಲಿದ್ದರೂ ಅರಣ್ಯ ಇಲಾಖೆ ತನ್ನದೇ ಸ್ವತ್ತು ಎಂದು ಹಕ್ಕು ಪ್ರತಿಪಾದಿಸಿದೆ. ಇಂತಹ ಪ್ರಕರಣಗಳು ಬೇಗ ಇತ್ಯರ್ಥವಾದರೆ ಕಾಮಗಾರಿಯ ವೇಗ ಹೆಚ್ಚುತ್ತದೆ' ಎನ್ನುತ್ತಾರೆ ವಿಜೆಎನ್‌ಎಲ್ ಅಧಿಕಾರಿಗಳು.

ತುಮಕೂರು, ಹಾಸನಕ್ಕೆ ಮುಂದಿನ ವರ್ಷ ನೀರು?

ಅರಸೀಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ 33 ಕಿ.ಮೀ. ಉದ್ದದ ಕಾಲುವೆ ನಿರ್ಮಾಣ ಪೂರ್ಣಗೊಳ್ಳಬೇಕಿದೆ. ಮುಂದಕ್ಕೆ ನೀರು ಹರಿಯಬೇಕಾದರೆ ಈ ಭಾಗದ ಕಾಮಗಾರಿ ತ್ವರಿತವಾಗಿ ಮುಗಿಯಬೇಕು. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡರೆ ಕಾಮಗಾರಿಗೂ ವೇಗ ದೊರಕುತ್ತದೆ. ತುಮಕೂರು ಮತ್ತು ಹಾಸನ ಜಿಲ್ಲೆಗಳಿಗೆ ಮುಂದಿನ ವರ್ಷದಿಂದ ನೀರು ಹರಿಸಲು ಸಾಧ್ಯವಾಗುತ್ತದೆ ಎನ್ನುತ್ತಾರೆ ವಿಜೆಎನ್‌ಎಲ್ ಅವರು.

ಕಾಡುಮನೆ ಕಿಂಡಿ ಅಣೆಕಟ್ಟೆಯಿಂದ ಕಳೆದ ತಿಂಗಳು ಪ್ರಾಯೋಗಿಕವಾಗಿ ಕಾಲುವೆಗಳಲ್ಲಿ ನೀರು ಹರಿಸಲಾಗಿತ್ತು. ಭಾರಿ ಪ್ರಮಾಣದ ನೀರು ಕಾಲುವೆಯಿಂದ ಸೋರಿಕೆಯಾದ ಪರಿಣಾಮ ರಸ್ತೆಗಳು, ಕಾಫಿ ತೋಟಗಳು ಕೊಚ್ಚಿಕೊಂಡು ಹೋಗಿದ್ದವು. ನೀರಿನ ಸೋರಿಕೆ ತಡೆಗೆ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಎಸ್‌ಟಿಗೆ ಅಂಬಿಗರು: ಕೇಂದ್ರಕ್ಕೆ ಸ್ಪಷ್ಟೀಕರಣ

ಶರಣ ಸಂಸ್ಕೃತಿ ಉತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಹಾವೇರಿ ತಾಲ್ಲೂಕಿನ ಸುಕ್ಷೇತ್ರ ನರಸೀಪುರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ನಿಜಶರಣ ಅಂಬಿಗರ ಚೌಡಯ್ಯನವರ 6ನೇ ಶರಣ ಸಂಸ್ಕೃತಿ ಉತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಂಕೇತಿಕವಾಗಿ ದೋಣಿ ಹುಟ್ಟುಹಾಕುವ ಮೂಲಕ ಉದ್ಘಾಟಿಸಿದರು. ಮಾಜಿ ಸಚಿವ ಪಿ.ಟಿ. ಪರಮೇಶ್ವರ ನಾಯ್ಕ, ಶಾಸಕ ಶ್ರೀನಿವಾಸ ಮಾನೆ, ಸಚಿವ ಶಿವಾನಂದ ಪಾಟೀಲ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಹಾವೇರಿ: 'ಗಂಗಾಮತ, ಅಂಬಿಗ, ಕೋಳಿ, ಬೆಸ್ತ ಸಮಾಜ ಸೇರಿ 39 ಉಪ ಜಾತಿಗಳು ಪರಿಶಿಷ್ಟ ಪಂಗಡಕ್ಕೆ ಸೇರಲು ಸಂಪೂರ್ಣ ಅರ್ಹವಾಗಿವೆ. ಈ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸ್ವತಃ ನಾನೇ ಎರಡು ಬಾರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಕಳುಹಿಸಿದ್ದೆ. ಈಗ ಕೇಂದ್ರ ಸರ್ಕಾರ ಕೆಲ ಸ್ಪಷ್ಟೀಕರಣ ಕೋರಿ ರಾಜ್ಯಕ್ಕೆ ಹಿಂದಿರುಗಿಸಿದ್ದು, ಶೀಘ್ರವೇ ಸ್ಪಷ್ಟೀಕರಣ ಕಳುಹಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನರಸೀಪುರದ ನಿಜಶರಣ ಅಂಬಿಗಡರ ಚೌಡಯ್ಯನವರ ಗುರುಪೀಠದಲ್ಲಿ ಸೋಮವಾರ ನಡೆದ ನಿಜಶರಣ ಅಂಬಿಗರ ಚೌಡಯ್ಯನವರ 6ನೇ ಶರಣ ಸಂಸ್ಕೃತಿ ಉತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

'ಗಂಗಾಮತಸ್ಥರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಹೋರಾಟ 1996ರಿಂದ ಆರಂಭವಾಗಿದೆ. ಬಸವಕಲ್ಯಾಣದ ಶಾಸಕರಾಗಿದ್ದ ದಿ. ಜಿ.ನಾರಾಯಣರಾವ್ ಅವರು ದೊಡ್ಡ ಹೋರಾಟ ನಡೆಸಿದ್ದರು. ಪರಿಶಿಷ್ಟ ಪಂಗಡಗಳ ಇಲಾಖೆ ಅಧಿಕಾರಿಗಳ ಸಭೆ ಶೀಘ್ರವೇ ನಡೆಸಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಮುಂದಿನ ಪ್ರಕ್ರಿಯೆಯ ಜವಾಬ್ದಾರಿ ವಹಿಸಿಕೊಳ್ಳಲಿ' ಎಂದರು.

'ಈ ಸಮಾಜದ ಅಭಿವೃದ್ಧಿಗೆ ನಾನು 'ಅಂಬಿಗರ ಚೌಡಯ್ಯ ನಿಗಮ' ಸ್ಥಾಪಿಸಿದೆ. ಈ ಸಮಾಜಕ್ಕೆ ಆರ್ಥಿಕ ಶಕ್ತಿ ಬರಬೇಕು. ಆರ್ಥಿಕ, ಸಾಮಾಜಿಕ ಶಕ್ತಿಯಿಲ್ಲದ ಸಮಾಜ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುವುದಿಲ್ಲ. ಸಮ ಸಮಾಜದ ಕನಸು ನನಸಾಗಲು ಆರ್ಥಿಕ ಸಮಾನತೆ ಬರಬೇಕು. ಸಮಾಜದ ಹಲವು ಬೇಡಿಕೆಗಳಿವೆ. ವಸತಿ ಶಾಲೆಗೆ ₹15 ಕೋಟಿ, ಮಠದ ಸಮಗ್ರ ಅಭಿವೃದ್ಧಿಗೆ ₹25 ಕೋಟಿ ಒಳಗೊಂಡಂತೆ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಆಗದಿದ್ದರೂ ಹಲವು ಬೇಡಿಕೆಗಳನ್ನು ಖಂಡಿತ ಈಡೇರಿಸುವೆ' ಎಂದರು.

ರುದ್ರಾಕ್ಷಿ ಕಿರೀಟ: 8ನೇ ಪೀಠಾರೋಹಣದ ಪ್ರಯುಕ್ತ ಅಂಬಿಗರ ಚೌಡಯ್ಯನವರ ಗುರುಪೀಠದ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿಗೆ 8ನೇ ಪೀಠಾರೋಹಣ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ರುದ್ರಾಕ್ಷಿ ಕಿರೀಟ' ತೊಡಿಸಿದರು.

ಅಂಬಿಗರ ಸಮಾಜವನ್ನು ಎಸ್‌ಟಿಗೆ ಸೇರ್ಪಡೆ ಮಾಡುವ ಕುರಿತು ರಾಜ್ಯ ಸರ್ಕಾರ ಸ್ಪಷ್ಟೀಕರಣದ ಜೊತೆ ಪ್ರಸ್ತಾವ ಕಳುಹಿಸಿಕೊಟ್ಟರೆ ಸಂಬಂಧಪಟ್ಟವರ ಜೊತೆ ಮಾತನಾಡುವೆ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ರಾಜ್ಯಕ್ಕೆ ₹348 ಕೋಟಿ ವಿಪತ್ತು ನಿಧಿ

ಒಂದನೇ ಪುಟದಿಂದ...

ಎಸ್‌ಡಿಆರ್‌ಎಫ್ ರೂಪದಲ್ಲಿ ಐದು ವರ್ಷದ ಅವಧಿಗೆ ರಾಜ್ಯಕ್ಕೆ ₹4,369 ಕೋಟಿ ನಿಗದಿಪಡಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ₹1,803 ಕೋಟಿ ಬಿಡುಗಡೆಯಾಗಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹929 ಕೋಟಿ ನಿಗದಿಪಡಿಸಲಾಗಿದೆ. ಈ ಪೈಕಿ, ಜುಲೈ ತಿಂಗಳಲ್ಲಿ ಮೊದಲ ಕಂತಿನ ರೂಪದಲ್ಲಿ ₹348.80 ಕೋಟಿ ಬಿಡುಗಡೆ ಮಾಡಲಾಗಿತ್ತು. ಪ್ರತಿವರ್ಷ ಎರಡು ಸಮಾನ ಕಂತುಗಳಲ್ಲಿ ಕೇಂದ್ರದ ಪಾಲನ್ನು ಎಸ್‌ಡಿಆರ್‌ಎಫ್‌ಗೆ ಬಿಡುಗಡೆ ಮಾಡಲಾಗುತ್ತದೆ. ಮಾರ್ಗಸೂಚಿಗಳ ಪ್ರಕಾರ, ಹಿಂದಿನ ಕಂತಿನಲ್ಲಿ ಬಿಡುಗಡೆಯಾದ ಮೊತ್ತದ ಬಳಕೆಯ ಪ್ರಮಾಣಪತ್ರದ ಸ್ವೀಕೃತಿ ಮತ್ತು ಎಸ್‌ಡಿಆರ್‌ಎಫ್‌ನಿಂದ ಕೈಗೊಂಡ ಚಟುವಟಿಕೆ ಕುರಿತು ರಾಜ್ಯ ಸರ್ಕಾರದಿಂದ ವರದಿ ಸ್ವೀಕರಿಸಿದ ಬಳಿಕ ಎರಡನೇ ಕಂತಿನ ಹಣ ಬಿಡುಗಡೆ ಮಾಡಲಾಗುತ್ತದೆ.

ಯಾವ ರಾಜ್ಯಕ್ಕೆ ಎಷ್ಟು ಮೊತ್ತ?

ರಾಜ್ಯ	ಬಿಡುಗಡೆ ಮೊತ್ತ (₹ ಕೋಟಿಗಳಲ್ಲಿ)
ಮಧ್ಯಪ್ರದೇಶ	802.80
ಕರ್ನಾಟಕ	348.80
ಪಂಜಾಬ್	218.40
ಉತ್ತರಾಖಂಡ	413.20

ವಿಳಂಬ ಯಾನ: ಎಸ್‌ಒಪಿ ಜಾರಿ

ಒಂದನೇ ಪುಟದಿಂದ...

ಭಾನುವಾರ ನೂರಕ್ಕೂ ಅಧಿಕ ವಿಮಾನಗಳ ಹಾರಾಟ ವಿಳಂಬವಾಗಿದ್ದರೆ, ಸೋಮವಾರ ಕೆಲವೇ ವಿಮಾನಗಳು ಹಾರಾಟ ಆರಂಭಿಸಿದವು ಎಂದು ವಿಮಾನ ನಿಲ್ದಾಣ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ದೆಹಲಿ ವಿಮಾನ ನಿಲ್ದಾಣದಿಂದ ಹೊರಡಬೇಕಿದ್ದ 313 ವಿಮಾನಗಳ ಸಂಚಾರ ವಿಳಂಬವಾಗಿದೆ ಹಾಗೂ 82 ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ ಎಂದು ವಿಮಾನಗಳ ಸಂಚಾರ ಕುರಿತ ಮಾಹಿತಿ ಒದಗಿಸುವ 'ಫ್ಲೈಟ್‌ರಾಡಾರ್24' ಜಾಲತಾಣದಲ್ಲಿ ವಿವರಿಸಲಾಗಿದೆ.

ಇದರ ಬೆನ್ನಲ್ಲೇ, ವಿಮಾನಗಳ ಹಾರಾಟ ಹಾಗೂ ಕಾರ್ಯಾಚರಣೆಗೆ ಸಂಬಂಧಿಸಿ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ), 'ಪ್ರಮಾಣಿತ ಕಾರ್ಯಾಚರಣೆ ವಿಧಾನ' (ಎಸ್‌ಒಪಿ)ಗಳನ್ನು ಬಿಡುಗಡೆ ಮಾಡಿದೆ.

ಎಲ್ಲ ವಿಮಾನಯಾನ ಸಂಸ್ಥೆಗಳು ಈ ಪ್ರಮಾಣಿತ ಕಾರ್ಯಾಚರಣೆ ವಿಧಾನಗಳನ್ನು ತಕ್ಷಣದಿಂದಲೇ ಪಾಲನೆ ಮಾಡಬೇಕು ಎಂದು ಡಿಜಿಸಿಎ ಸೂಚಿಸಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ

ದಟ್ಟ ಮಂಜಿನಿಂದಾಗಿ ಆಗುತ್ತಿರುವ ತೊಂದರೆ ನಿವಾರಿಸುವುದಕ್ಕೆ ಸಂಬಂಧಪಟ್ಟ ಎಲ್ಲ ಭಾಗೀದಾರರು ನಿರಂತರವಾಗಿ ಶ್ರಮಿಸಿದ್ದಾರೆ. ಭವಿಷ್ಯದಲ್ಲಿ ಇಂತಹ ಸನ್ನಿವೇಶಗಳು ಉದ್ಭವವಾಗದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ

ಜ್ಯೋತಿರಾದಿತ್ಯ ಸಿಂಧಿಯಾ
ನಾಗರಿಕ ವಿಮಾನಯಾನ ಸಚಿವ

20 ವಿಮಾನಗಳ ಹಾರಾಟ ವಿಳಂಬ

ಒಂದನೇ ಪುಟದಿಂದ...

ಆದರೆ, ಕೋಲ್ಕತ್ತ, ಚೆನ್ನೈ, ಅಲಹಾಬಾದ್ ಮತ್ತು ಹುಬ್ಬಳ್ಳಿಯಲ್ಲಿ ಪ್ರತಿಕೂಲ ಹವಾಮಾನ ಇದ್ದ ಕಾರಣದಿಂದ ಕೆಐಎಯಿಂದ ಈ ವಿಮಾನಗಳು ಹಾರಾಟ ಆರಂಭಿಸುವುದು ತಡವಾಯಿತು' ಎಂದು ಕೆಐಎ ನಿರ್ವಹಣೆಯ ಉಸ್ತುವಾರಿ ಹೊತ್ತಿರುವ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ವಕ್ತಾರರು 'ಪ್ರಜಾವಾಣಿ'ಗೆ ತಿಳಿಸಿದರು.

ಕೇಂದ್ರದ ಒಬಿಸಿ ಪಟ್ಟಿಗೆ ವೀರಶೈವ ಲಿಂಗಾಯತ ಸಮುದಾಯ ಸೇರಿಸಿ: ಶಾಮನೂರು

'ಶಿಫಾರಸಿನಲ್ಲಿ ರಾಜಕೀಯ ಬೇಡ'

ಪ್ರಜಾವಾಣಿ ವಾರ್ತೆ

ಹರಿಹರ ತಾಲ್ಲೂಕಿನ ಹನಗವಾಡಿಯ ಪಂಚಮಸಾಲಿ ಗುರುಪೀಠದಲ್ಲಿ ಸೋಮವಾರ ಬರಗಾಲದ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲಾದ ಹರಜಾತ್ರೆಯ ಸಂದರ್ಭ ನಡೆದ ಅಕ್ಕಮಹಾದೇವಿ ವಚನಗಳ ಪಲ್ಲಕ್ಕಿ ಉತ್ಸವದಲ್ಲಿ ಬಿ.ಸಿ. ಉಮಾಪತಿ, ವಚನಾನಂದ ಸ್ವಾಮೀಜಿ, ಜಮಖಂಡಿ ಆಲಗೂರು ಗುರುಪೀಠದ ಶ್ರೀಗಳು ಹಾಗೂ ಸಮುದಾಯದ ಮುಖಂಡರು ಇದ್ದರು

ಹರಿಹರ (ದಾವಣಗೆರೆ): 'ರಾಜ್ಯ ಸರ್ಕಾರ ರಾಜಕೀಯ ಮಾಡದೇ ವೀರಶೈವ ಲಿಂಗಾಯತ ಸಮುದಾಯದ ಎಲ್ಲರನ್ನೂ ಕೇಂದ್ರದ ಒಬಿಸಿ ಪಟ್ಟಿಗೆ ಸೇರ್ಪಡೆ ಮಾಡಲು ಶಿಫಾರಸ್ಸು ಮಾಡಬೇಕು' ಎಂದು ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಕೋರಿದರು.

ಇಲ್ಲಿನ ಪಂಚಮಸಾಲಿ ಗುರುಪೀಠದಲ್ಲಿ ನಡೆದ ಹರಜಾತ್ರೆಯಲ್ಲಿ ಭಾಗವಹಿಸಿದ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದರು.

'ವೀರಶೈವ- ಲಿಂಗಾಯತ ಸಮುದಾಯದವರು ಬೇರೆ ಬೇರೆ ಅಲ್ಲ ಎಲ್ಲರೂ ಒಂದೇ. ವೀರಶೈವ ಲಿಂಗಾಯತರು ಒಳಪಂಗಡಗಳ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ಎಲ್ಲ ವೀರಶೈವ ಲಿಂಗಾಯತರು ಒಂದೇ ಎಂದು ಭಾವಿಸಬೇಕು. ಸಮಾಜದ ಬಡ ಮಕ್ಕಳಿಗೆ ಶಿಕ್ಷಣ, ಉದ್ಯೋಗಕ್ಕೆ ಅನುಕೂಲ ಆಗುವ ದೃಷ್ಟಿಯಿಂದ ರಾಜ್ಯ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು. ಇತ್ತೀಚಿಗೆ ಪಂಚಮಸಾಲಿ ಸಮಾಜ ಹೆಚ್ಚು ಬೆಳವಣಿಗೆ ಹೊಂದುತ್ತಿರುವುದು ಸಂತಸದ ವಿಚಾರ' ಎಂದರು.

ಹರಿಹರ ಪಂಚಮಸಾಲಿ ಗುರು ಪೀಠದ ವಚನಾನಂದ ಸ್ವಾಮೀಜಿ ಮಾತನಾಡಿ, 'ವೀರಶೈವ- ಲಿಂಗಾಯತ ಸಮುದಾಯದಲ್ಲಿ ಕೆಲವರು 2ಎ, 3ಎ, 3ಬಿ ಮೀಸಲಾತಿ ಪಡೆಯುತ್ತಿದ್ದು, ಇದು ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವಂತಾಗಿದೆ. ರಾಜ್ಯದಲ್ಲಿರುವ ಎಲ್ಲಾ ವೀರಶೈವ ಲಿಂಗಾಯತ ಸಮುದಾಯಕ್ಕೆ ಒಂದೇ ರೀತಿಯ ಮೀಸಲಾತಿ ಇರಬೇಕು' ಎಂದು ಅಭಿಪ್ರಾಯಪಟ್ಟರು.

22ರಂದು ಅಯೋಧ್ಯೆಯಲ್ಲಿ ನಡೆಯಲಿರುವ ರಾಮಲಲ್ಲಾ ಮೂರ್ತಿ ಪ್ರತಿಷ್ಠಾಪನೆ ಸಂದರ್ಭ ವೀರಶೈವ ಲಿಂಗಾಯತ ಸಮುದಾಯದ ಎಲ್ಲರೂ ಪೂಜೆ ಸಲ್ಲಿಸಬೇಕು

ವಚನಾನಂದ ಸ್ವಾಮೀಜಿ
ಹರಿಹರ ಪಂಚಮಸಾಲಿ ಗುರುಪೀಠ

'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೇಳುತ್ತಿದ್ದೇವೆ. ಸಮಾಜವನ್ನು ಒಡೆಯುವುದಿಲ್ಲ. ಜಾಗೃತಿ ಮೂಡಿಸುತ್ತಿದ್ದೇವೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭ ಪ್ರಕಟಿಸಿರುವ ಮೀಸಲಾತಿಯನ್ನು ವಿರೋಧಿಸಿಲ್ಲ. ಅದನ್ನು ಸ್ವಾಗತಿಸಿಯೂ ಇಲ್ಲ. ನಾವು ಅಗತ್ಯ ಕಾನೂನು ಹೋರಾಟ ಮಾಡುತ್ತಿದ್ದೇವೆ. ಈ ವಿಚಾರ ಕುರಿತು ಪ್ರಚಾರ ಪಡೆದರೆ ಮೀಸಲಾತಿ ಸಿಗುವುದಿಲ್ಲ' ಎಂದರು.

'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಟಿಕೆಟ್ ಹಂಚಿಕೆಯಲ್ಲಿ ಪಂಚಮಸಾಲಿ ಸಮುದಾಯಕ್ಕೆ ಆದ್ಯತೆ ನೀಡಬೇಕು' ಎಂದು ಅವರು ಆಗ್ರಹಿಸಿದರು.

ಪ್ರಾಥಮಿಕ ವರದಿ ಬಂದ ನಂತರ ಎಸ್‌ಐಟಿ ತನಿಖೆ ತೀರ್ಮಾನ: ಸಿ.ಎಂ

‘ಅತ್ಯಾಚಾರ: ಯಾರನ್ನೂ ರಕ್ಷಿಸಲ್ಲ’

ಪ್ರಜಾವಾಣಿ ವಾರ್ತೆ

ಹಾವೇರಿ: ‘ಹಾನಗಲ್ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಈಗಾಗಲೇ 7 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಯಾರನ್ನೂ ರಕ್ಷಿಸುವ ಪ್ರಯತ್ನ ಮಾಡುವುದಿಲ್ಲ. ಕಾನೂನನ್ನು ಯಾರೇ ಕೈಗೆ ತೆಗೆದುಕೊಂಡರೂ ಶಿಕ್ಷೆ ಕೊಡಿಸಲು ಪ್ರಯತ್ನಿಸುತ್ತೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ನರಸೀಪುರದಲ್ಲಿ ಸೋಮವಾರ 6ನೇ ಶರಣ ಸಂಸ್ಕೃತಿ ಉತ್ಸವದಲ್ಲಿ ಭಾಗವಹಿಸಲು ಬಂದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ನಡೆದಿದೆ ಎಂಬ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರೋಪಕ್ಕೆ ಹೀಗೆ ಪ್ರತಿಕ್ರಿಯಿಸಿದರು.

ಪರಿಹಾರದ ಬಗ್ಗೆ ಪರಿಶೀಲನೆ: ಘಟನೆ ನಡೆದು ವಾರವಾದರೂ ಪರಿಹಾರ ಏಕೆ ನೀಡಿಲ್ಲ ಎಂಬ ಪ್ರಶ್ನೆಗೆ, ‘ಸಂತ್ರಸ್ತೆಯ ಕುಟುಂಬದವರು ಈಗಷ್ಟೇ ಮನವಿ ಪತ್ರ ಕೊಟ್ಟಿದ್ದಾರೆ. ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುತ್ತೇವೆ’ ಎಂದರು.

ಇಮ್ರಾನ್

ಒಟ್ಟಾರೆ ಪ್ರಕರಣದ ಬಗ್ಗೆ ಮುಖ್ಯಮಂತ್ರಿ ಪ್ರತಿಕ್ರಿಯಿಸಿಲ್ಲ ಎಂಬ ಆರೋಪಕ್ಕೆ ತಿರುಗೇಟು ನೀಡಿದ ಅವರು,‘ಮಾತನಾಡಿದರೆ ಮಾತ್ರ ಕ್ರಮ, ಇಲ್ಲದಿದ್ದರೆ ಇಲ್ಲ ಎಂದರ್ಥವೇ? ಮಾತನಾಡದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲವೇ’ ಎಂದರು.

ಪ್ರಾಥಮಿಕ ವರದಿ ಬರಲಿ: ಪ್ರಕರಣವನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸಬೇಕು ಎಂಬ ಬಿಜೆಪಿ ಆಗ್ರಹಕ್ಕೆ ಉತ್ತರಿಸಿದ ಅವರು, ‘ಎಸ್‌ಐಟಿಯಲ್ಲಿ ಇರುವವರೂ ನಮ್ಮ ಪೊಲೀಸರೇ. ಪ್ರಕರಣದ ತನಿಖೆ ನಡೆಯುತ್ತಿದ್ದು, ಪ್ರಾಥಮಿಕ ವರದಿ ಬಂದ ಬಳಿಕ ತೀರ್ಮಾನಿಸಲಾಗುವುದು’ ಎಂದರು.

ಸಂತ್ರಸ್ತೆ ಬದಲು ಆರೋಪಿಗೆ ಪೊಲೀಸರು ಚಿಕಿತ್ಸೆ ಕೊಡಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಈ ಬಗ್ಗೆ ಬ್ಯಾಡಗಿ ಶಾಸಕ ಶಿವಣ್ಣ ಅವರೊಂದಿಗೆ ಮಾತನಾಡಿ, ಸರಿಪಡಿಸುವ ಕ್ರಮ ಕೈಗೊಳ್ಳುವೆ’ ಎಂದು ಸಿದ್ದರಾಮಯ್ಯ ಹೇಳಿದರು.

ಸಾಮೂಹಿಕ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯ ಸಂಬಂಧಿಕರು ಹಾಗೂ ಸಾರ್ವಜನಿಕರು ಹಾವೇರಿ ತಾಲ್ಲೂಕಿನ ನರಸೀಪುರದ ಹೆಲಿಪ್ಯಾಡ್ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಹವಾಲು ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಪ್ರಕರಣ ಮುಚ್ಚಿ ಹಾಕುವ ಪ್ರಶ್ನೆಯೇ ಇಲ್ಲ. ತಪ್ಪು ಮಾಡಿದವರ ಮೇಲೆ ಕ್ರಮ ಜರುಗಿಸಲಾಗುವುದು. ಸಮಗ್ರ ತನಿಖೆ ನಡೆಸಲಾಗುವುದು.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಮಾದರ್ ಸಾಬ್

ಅಫ್ತಾಬ್

ಖಾದರ್

ಶೋಯಬ್

ಸಾಧಿಕ್

ರೆಹಾನ್

‘ಸಂತ್ರಸ್ತೆಗೆ ಸರ್ಕಾರಿ ಉದ್ಯೋಗ ನೀಡಿ’

‘ಸಾಮೂಹಿಕ ಅತ್ಯಾಚಾರ ಪ್ರಕರಣದ ಸಂತ್ರಸ್ತೆಗೆ ಸೂಕ್ತ ಪರಿಹಾರ ಕೊಡುವುದರ ಜೊತೆಗೆ ಜೀವನ ಸಾಗಿಸಲು ಅನುಕೂಲವಾಗುವಂತೆ ಸರ್ಕಾರಿ ಉದ್ಯೋಗ ನೀಡಬೇಕು’ ಎಂದು ಸಂತ್ರಸ್ತೆಯ ಸಂಬಂಧಿಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.

ತಾಲ್ಲೂಕಿನ ನರಸೀಪುರದ ಹೆಲಿಪ್ಯಾಡ್ ಬಳಿ ಸೋಮವಾರ ಸಿಎಂ ಅವರನ್ನು ಭೇಟಿಯಾಗಿ ಮನವಿ ಪತ್ರ ಕೊಟ್ಟ ಸಂತ್ರಸ್ತೆಯ ಸೋದರ ಮಾವನ ಮಗ ಹಾಗೂ ಇಬ್ಬರು ಅಕ್ಕಂದಿರು, ‘ಸಂತ್ರಸ್ತೆಗೆ ಸೂಕ್ತ ಚಿಕಿತ್ಸೆಯ ಅವಶ್ಯವಿದೆ. ಸೋಮವಾರ ಶಿರಸಿ ಆಸ್ಪತ್ರೆಯಲ್ಲಿ ನಾವೇ ಚಿಕಿತ್ಸೆ ಕೊಡಿಸಿದ್ದೇವೆ. ಸರ್ಕಾರ ಕೂಡಲೇ ಆಕೆಗೆ ಚಿಕಿತ್ಸೆ ಕೊಡಿಸಬೇಕು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು’ ಎಂದು ಕೋರಿದರು.

ಆರೋಪಿಗಳ ಸಂಖ್ಯೆ 7ಕ್ಕೆ ಏರಿಕೆ

ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ಮತ್ತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಈವರೆಗೆ ಒಟ್ಟು 7 ಆರೋಪಿಗಳನ್ನು ಬಂಧಿಸಿದಂತಾಗಿದೆ.

ಅಕ್ಕಿಆಲೂರಿನ ಸಂತೆ ವ್ಯಾಪಾರಿ ಸಾದಿಕ್ ಬಾಬುಸಾಬ್ ಅಗಸಿಮನಿ (29) ಮತ್ತು ಹೋಟೆಲ್ ಕಾರ್ಮಿಕ ಶೋಯೆಬ್ ನಿಯಾಜ್ ಅಹ್ಮದ್ ಮುಲ್ಲಾ (19) ಬಂಧಿತರು. ಭಾನುವಾರ ಅಕ್ಕಿಆಲೂರಿನ ಇಮ್ರಾನ್ ಬಶೀರ್ ಅಹಮದ್ ಜೇಕಿನಕಟ್ಟಿ (23) ಹಾಗೂ ರೇಹಾನ್ ಮಹಮ್ಮದ್ ಹುಸೇನ್ ವಾಲೀಕಾರ ಅಕ್ಕಿಆಲೂರ (19) ಎಂಬವರನ್ನು ಬಂಧಿಸಲಾಗಿತ್ತು. ಇದಕ್ಕೂ ಮುನ್ನ, ಅಕ್ಕಿಆಲೂರಿನ ಗ್ಯಾರೇಜ್ ಕಾರ್ಮಿಕ ಅಫ್ತಾಬ್ ಚಂದನಕಟ್ಟಿ (24), ವ್ಯಾಪಾರಿ ಮದರಸಾಬ್ ಮಂಡಕ್ಕಿ (23) ಮತ್ತು ಆಟೊ ಚಾಲಕ ಅಬ್ದುಲ್ ಖಾದರ್ ಜಾಫರಸಾಬ್ ಹಂಚಿನಮನಿ (28) ಎಂಬ ಮೂವರು ಆರೋಪಿಗಳನ್ನು ಬಂಧಿಸಲಾಗಿತ್ತು. ಇನ್ನೊಬ್ಬ ಆರೋಪಿ ಮಹಮ್ಮದ್ ಸೈಫ್ ಸಾವಿಕೇರಿ ಎಂಬಾತ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗಾಗಿ ಒಳರೋಗಿಯಾಗಿ ದಾಖಲಾಗಿದ್ದು, ಚಿಕಿತ್ಸೆ ಪೂರ್ಣಗೊಂಡ ಬಳಿಕ ಬಂಧಿಸಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್ ತಿಳಿಸಿದ್ದಾರೆ.

ಬೈಕ್‌ಗೆ ಭತ್ತ ಕಟಾವು ಯಂತ್ರ ಡಿಕ್ಕಿ; ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ (ಚಾಮರಾಜನಗರ): ತಾಲ್ಲೂಕಿನ ಜಿನಕನಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಸೋಮವಾರ ಬೆಳಿಗ್ಗೆ ಭತ್ತ ಕಟಾವು ಯಂತ್ರವು ಬೈಕ್‌ಗೆ ಡಿಕ್ಕಿ ಹೊಡೆದಿದ್ದರಿಂದ ದಂಪತಿ ಹಾಗೂ ಅವರ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಪಾಳ್ಯ ಗ್ರಾಮದ ಸಂತೋಷ್ (32), ಅವರ ಪತ್ನಿ ಸೌಮ್ಯ (27), ಮಗಳು ನಿತ್ಯ ಸಾಕ್ಷಿ (4), ಮಗ ಅಭಿಷೇಕ್ (9) ಮೃತಪಟ್ಟವರು. ಸಂಕ್ರಾಂತಿ ಹಬ್ಬಕ್ಕಾಗಿ ಬಟ್ಟೆ ಖರೀದಿಸಲು ಕೊಳ್ಳೇಗಾಲಕ್ಕೆ ಬೈಕ್‌ನಲ್ಲಿ ಬರುತ್ತಿದ್ದರು.

ಜಿನಕನಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಬರುತ್ತಿದ್ದಾಗ ಯಂತ್ರವು ಬೈಕ್‌ಗೆ ಡಿಕ್ಕಿ ಹೊಡೆಯಿತು. ಬೈಕ್‌ನಲ್ಲಿದ್ದವರನ್ನು 30 ಮೀಟರ್ ದೂರಕ್ಕೆ ಎಳೆದುಕೊಂಡು ಹೋಗಿದೆ. ಅದೇ ರಸ್ತೆಯಲ್ಲಿ ಬರುತ್ತಿದ್ದ ವಾಹನ ಸವಾರರು ಕೂಗಿಕೊಂಡಾಗ, ಚಾಲಕ ಕಟಾವು ಯಂತ್ರವನ್ನು ನಿಲ್ಲಿಸಿ ಪರಾರಿಯಾಗಿದ್ದಾನೆ. ತೀವ್ರವಾಗಿ ಗಾಯಗೊಂಡಿದ್ದ ಸಂತೋಷ್, ಅವರ ಪತ್ನಿ ಹಾಗೂ ಮಗಳು ಸ್ಥಳದಲ್ಲೇ ಮೃತಪಟ್ಟರೆ, ಮಗ ಅಭಿಷೇಕ್ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಕೊನೆಯುಸಿರೆಳೆದ. ಚಾಲಕನ ಅಜಾಗರೂಕತೆಯಿಂದ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಗಡೆ ಕ್ಷೇತ್ರದಲ್ಲಿ ಏನಾದರೂ ಕೆಲಸ ಮಾಡಿದ್ದಾರೆಯೇ?

ಪ್ರಜಾವಾಣಿ ವಾರ್ತೆ

ಹಾವೇರಿ: ‘ನಾಪತ್ತೆಯಾಗಿದ್ದ ಅನಂತ ಕುಮಾರ ಹೆಗಡೆ ಅವರು ಚುನಾವಣೆ ಸಮೀಪಿಸುತ್ತಿದ್ದಂತೆ ಕಾಣಿಸಿಕೊಂಡು ಹೇಳಿಕೆ ನೀಡಿದ್ದಾರೆ. ಸಂಸದ, ಸಚಿವರಾಗಿ ಅವರ ಕ್ಷೇತ್ರಕ್ಕೆ ಏನಾದರೂ ಕೆಲಸ ಮಾಡಿದ್ದಾರೆಯೇ? ಬಡವರ ಸಮಸ್ಯೆ ಕೇಳಿದ್ದಾರೆಯೇ? ಸಂಸ್ಕೃತಿ ಎಂದರೆ ಮನುಷ್ಯತ್ವ. ಮೊದಲು ಮನುಷ್ಯತ್ವ ಇರಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದರು.

‘ಏಕವಚನದಲ್ಲಿ ಮಾತನಾಡುವುದನ್ನು ಕಲಿಸಿದ್ದೇ ಸಿದ್ದರಾಮಯ್ಯ ಅವರು’ ಎಂದು ಪ್ರಲ್ಹಾದ ಜೋಶಿ ಅವರು ಅನಂತಕುಮಾರ ಹೆಗಡೆ ಹೇಳಿಕೆಯನ್ನು ಸಮರ್ಥಿಸಿ ಕೊಂಡಿದ್ದರು.

ಈ ಬಗ್ಗೆ ನರಸೀಪುರದಲ್ಲಿ ಸೋಮವಾರ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿಎಂ, ‘ಜೋಶಿ ಅವರು ರಾಜಕೀಯವಾಗಿ ಆರೋಪಿಸುತ್ತಲೇ ಇರುತ್ತಾರೆ. ಚುನಾವಣೆ ಸಮೀಪಿಸಿದಾಗ ಕೆಲವರು ಮನಸ್ಸಿಗೆ ಬಂದಂತೆ ಮಾತನಾಡುತ್ತಾರೆ’ ಎಂದು ಸಿದ್ದರಾಮಯ್ಯ ಹೇಳಿದರು.

ಮಾರ್ಚ್ ಮೊದಲ ವಾರದೊಳಗೆ ಲೋಕಸಭಾ ಚುನಾವಣೆಯ ನೀತಿಸಂಹಿತೆ ಘೋಷಣೆಯಾಗುವ ಹಿನ್ನೆಲೆಯಲ್ಲಿ ಫೆಬ್ರುವರಿ ತಿಂಗಳಲ್ಲೇ ಬಜೆಟ್ ಮಂಡಿಸಲಾಗುವುದು.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೇಂದ್ರದಿಂದ ರೈತರಿಗೆ ಪರಿಹಾರ ಬರಲಿ: ರೈತರಿಗೆ ಪರಿಹಾರ ನೀಡಿಲ್ಲವೆಂದು ಪ್ರತಿಭಟನೆ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ, ‘ರೈತರಿಗೆ ₹2000 ತಾತ್ಕಾಲಿಕ ಪರಿಹಾರವನ್ನು ನೀಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಪರಿಹಾರ ಬಂದ ನಂತರ ಪುನಃ ಎನ್‌ಡಿಆರ್‌ಎಫ್ ನಿಯಮಾವಳಿ ಪ್ರಕಾರ ಪರಿಹಾರ ನೀಡಲಾಗುವುದು’ ಎಂದು ಸಿದ್ದರಾಮಯ್ಯ ಹೇಳಿದರು.

‘ಪ್ರತಿಕ್ರಿಯೆ ನೀಡಲ್ಲ’

ಹುಬ್ಬಳ್ಳಿ: ‘ಸೌಹಾರ್ದಯುತ ಮತ್ತು ಪ್ರೇಮಮಯ ವಾತಾವರಣದಲ್ಲಿ ರಾಮಮಂದಿರ ಉದ್ಘಾಟನೆ ಆಗಬೇಕು ಎಂಬುದು ಪ್ರಧಾನಿ ನರೇಂದ್ರ ಮೋದಿಯವರ ಅಪೇಕ್ಷೆ. ಅದಕ್ಕೆ ಯಾರಾದರೂ ವಿವಾದಾತ್ಮಕ ಹೇಳಿಕೆ ನೀಡಿದರೆ, ನಾನು ಪ್ರತಿಕ್ರಿಯೆ ನೀಡುವುದಿಲ್ಲ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಪ್ರಲ್ಹಾದ ಜೋಶಿ

ಸಂಸದ ಅನಂತಕುಮಾರ ಹೆಗಡೆ ಅವರ ಹೇಳಿಕೆಗೆ ಸೋಮವಾರ ಮಾಧ್ಯಮಗಳಿಗೆ ಅವರು ಹೀಗೆ ಪ್ರತಿಕ್ರಿಯಿಸಿದರು.

ಏಳು ಅಧಿಕಾರಿಗಳ ವಿರುದ್ಧ ಪ್ರಕರಣ

ಬೆಂಗಳೂರು: ಕಾಮಗಾರಿಗಳಲ್ಲಿ ಅಕ್ರಮ ನಡೆಸಿದ್ದಾರೆಂದು ಆರೋಪಿಸಿ ಲೋಕಾಯುಕ್ತಕ್ಕೆ ದೂರು ನೀಡಿದ್ದ ಗುತ್ತಿಗೆದಾರನಿಗೆ ಜೀವಬೆದರಿಕೆ ಹಾಕಿದ ಆರೋಪದಡಿ ಕೆಆರ್‌ಐಡಿಎಲ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಏಳು ಅಧಿಕಾರಿಗಳ ವಿರುದ್ಧ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರವೀಣ್ ಶ್ರೀಹರಿ, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಾದ ವಿ. ಶ್ರೀಧರ್, ಲಕ್ಷ್ಮಿ ಪಾಟೀಲ್, ಗ್ರಾಮೀಣಾಭಿವೃದ್ಧಿ ಇಲಾಖೆ ನಿರ್ದೇಶಕ ಶ್ರೀನಿವಾಸ್ ಎಚ್. ಮಾರಂಗಪ್ಪ, ಇಲಾಖೆಯ ಸಾಮಾಜಿಕ ಲೆಕ್ಕಪರಿಶೋಧನೆ ವಿಭಾಗದ ನಿವೃತ್ತ ನಿರ್ದೇಶಕ ಕೆ.ಎಚ್. ನಾಗರಾಜ್, ಜಂಟಿ ಕಾರ್ಯದರ್ಶಿ ಸಿದ್ದೇಶ್ ಪೋತಲಕಟ್ಟಿ, ಸೂಪರಿಂಟೆಂಡಿಂಗ್ ಎಂಜಿನಿಯರ್ ಮುಕ್ಕಣ್ಣ ನಾಯಕ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಮುದ್ದಿನಪಾಳ್ಯ ನಿವಾಸಿ ಪ್ರಥಮ ದರ್ಜೆ ಗುತ್ತಿಗೆದಾರ ಬಿ.ಕೆ. ಮೋಹನ್ ಕುಮಾರ್ ನ್ಯಾಯಾಲಯದಲ್ಲಿ ಖಾಸಗಿ ಸಲ್ಲಿಸಿದ್ದ ದೂರಿನ ಹಿನ್ನೆಲೆ ಕೋರ್ಟ್ ಸೂಚನೆ ಮೇರೆಗೆ ಪ್ರಕರಣ ದಾಖಲಾಗಿದೆ.

ಪರ್ಯಾಯಕ್ಕೆ ಸಿಂಗಾರಗೊಂಡಿದೆ ಉಡುಪಿ

ಪುತ್ತಿಗೆ ಪರ್ಯಾಯೋತ್ಸವ ಜ.17,18ಕ್ಕೆ

ಪ್ರಜಾವಾಣಿ ವಾರ್ತೆ

ಉಡುಪಿ: ಅಷ್ಟಮಠಗಳಲ್ಲಿ ಒಂದಾಗಿರುವ ಪುತ್ತಿಗೆ ಮಠದ ಪರ್ಯಾಯ ಮಹೋತ್ಸವ ಜ.17 ಹಾಗೂ 18ರಂದು ನಡೆಯಲಿದ್ದು ಪೂರ್ವಭಾವಿ ಸಿದ್ಧತೆಗಳು ಭರದಿಂದ ಸಾಗಿವೆ. ಇಡೀ ನಗರ ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿದೆ.

ಪುತ್ತಿಗೆ ಮಠದ ಹಿರಿಯ ಯತಿಗಳಾದ ಸುಗುಣೇಂದ್ರ ತೀರ್ಥರು ನಾಲ್ಕನೇ ಬಾರಿಗೆ (1976, 1992, 2008) ಪರ್ಯಾಯ ಪೀಠಾರೋಹಣ ಮಾಡಲಿದ್ದಾರೆ. 18ರಂದು ನಸುಕಿನ 1.30ಕ್ಕೆ ಕಾಪುವಿನ ದಂಡತೀರ್ಥ ದಲ್ಲಿ ಪವಿತ್ರ ಸ್ನಾನ ಮಾಡಿ ಉಡುಪಿಯ ಜೋಡುಕಟ್ಟೆಗೆ ಆಗಮಿಸುವ ಶ್ರೀಗಳನ್ನು ಅದ್ದೂರಿ ಮೆರವಣಿಗೆಯ ಮೂಲಕ ಕೃಷ್ಣಮಠಕ್ಕೆ ಕರೆತರಲಾಗುತ್ತದೆ.

ಸ್ತಬ್ಧಚಿತ್ರಗಳು, ಜಾನಪದ ಕಲಾತಂಡಗಳು, ವೇದ, ಮಂತ್ರ ಘೋಷ, ಮಂಗಳವಾದ್ಯ ಸಹಿತ ಭಜನಾ ತಂಡಗಳು ಭಾಗವಹಿಸಲಿವೆ. 18ರಂದು ಬೆಳಗಿನ ಜಾವ 5.50ಕ್ಕೆ ಪುತ್ತಿಗೆ ಶ್ರೀಗಳು ಸಂಪ್ರದಾಯದಂತೆ ಅಕ್ಷಯ ಪಾತ್ರೆ ಸ್ವೀಕರಿಸಿ ಸರ್ವಜ್ಞ ಪೀಠಾರೋಹಣ ಮಾಡಲಿದ್ದಾರೆ. ಈ ಮೂಲಕ ಪುತ್ತಿಗೆ ಮಠದ ಪರ್ಯಾಯ ಅಧಿಕೃತವಾಗಿ ಆರಂಭವಾಗಲಿದ್ದು ಮುಂದಿನ 2 ವರ್ಷ ಕೃಷ್ಣನ ಪೂಜಾ ಕೈಂಕರ್ಯ ಹಾಗೂ ಕೃಷ್ಣಮಠದ ಆಡಳಿತ ನಿರ್ವಹಿಸಲಿದ್ದಾರೆ.

ಪರ್ಯಾಯಕ್ಕೆ ದೇಶ ವಿದೇಶಗಳಿಂದ 1 ಲಕ್ಷಕ್ಕೂ ಹೆಚ್ಚು ಮಂದಿ ಆಗಮಿಸುವ ನಿರೀಕ್ಷೆ ಇದ್ದು ಉಡುಪಿಯಿಂದ ಮಂಗಳೂರಿನವರೆಗೆ ಹಾಗೂ ಕುಂದಾಪುರದಿಂದ ಉಡುಪಿಯವರೆಗಿನ ವಸತಿ ಗೃಹಗಳನ್ನು ಅತಿಥಿಗಳ ವಾಸ್ತವ್ಯಕ್ಕೆ ಕಾಯ್ದಿರಿಸಲಾಗಿದೆ. ಉಡುಪಿ ಸುತ್ತಮುತ್ತ ವಾಸವಿರುವ ನೂರಕ್ಕೂ ಹೆಚ್ಚು ಮಂದಿ ತಮ್ಮ ಮನೆಗಳಲ್ಲಿ ಅತಿಥಿಗಳಿಗೆ ವಾಸ್ತವ್ಯದ ವ್ಯವಸ್ಥೆ ಮಾಡಿದ್ದಾರೆ. ನಗರಸಭೆಯಿಂದ ಮೊಬೈಲ್ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಪರ್ಯಾಯ ಮಹೋತ್ಸವಕ್ಕೆ ಸಿಂಗಾರಗೊಂಡಿರುವ ಪುತ್ತಿಗೆ ಮಠ

ಕೃಷ್ಣಮಠಕ್ಕೆ ಬರುವ ಭಕ್ತರಿಗೆ ಪ್ರತಿನಿತ್ಯ ಭೋಜನದ ವ್ಯವಸ್ಥೆಗೆ ಪೂರಕವಾಗಿ ನೂರಾರು ಸಂಘ ಸಂಸ್ಥೆಗಳು, ದೇವಸ್ಥಾನಗಳು, ಉದ್ಯಮಿಗಳು ಅಪಾರ ಪ್ರಮಾಣದಲ್ಲಿ ಹೊರೆಕಾಣಿಕೆ ಸಲ್ಲಿಸಿದ್ದಾರೆ. ಪರ್ಯಾಯ ದ ಅಂಗವಾಗಿ ಪ್ರತಿನಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಚಾರಗೋಷ್ಠಿ, ಸಂವಾದಗಳು ನಡೆಯುತ್ತಿವೆ.

ಎಐಸಿಸಿ ಅಧ್ಯಕ್ಷತೆ ಜೊತೆಗೆ ಇಂಡಿಯಾ ಒಕ್ಕೂಟದ ಜವಾಬ್ದಾರಿ ಹೆಚ್ಚಿಸಿದ ಕಾರ್ಯಭಾರ

ಖರ್ಗೆ ಸ್ಪರ್ಧೆ: ಮುಂದುವರಿದ ಗೊಂದಲ

• ಮನೋಜಕುಮಾರ್ ಗುದ್ದಿ

ಮಲ್ಲಿಕಾರ್ಜುನ ಖರ್ಗೆ

ಕಲಬುರಗಿ: ಎಐಸಿಸಿ ಅಧ್ಯಕ್ಷರೂ ಆಗಿರುವ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಯಾವ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂಬುದು ಈವರೆಗೂ ನಿಗೂಢವಾಗಿಯೇ ಉಳಿದಿದೆ.

ಕಲಬುರಗಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಬಗ್ಗೆಯೂ ಇನ್ನೂವರೆಗೆ ಸ್ಪಷ್ಟ ಸೂಚನೆಗಳು ಕಾಣಿಸಿಕೊಳ್ಳದ ಕಾರಣದಿಂದ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮುಂದುವರಿದಿದೆ. ಖರ್ಗೆ ಅವರೂ ತಾವು ಸ್ಪರ್ಧಿಸುವ ಬಗ್ಗೆ ಇನ್ನೂ ಗುಟ್ಟು ಬಿಟ್ಟುಕೊಟ್ಟಿಲ್ಲ.

ಖರ್ಗೆ ಅವರು ಪಕ್ಷದ ಅಧ್ಯಕ್ಷ ಹುದ್ದೆಯ ಮಹತ್ವದ ಜವಾಬ್ದಾರಿಯ ಜೊತೆಗೆ ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಅಧ್ಯಕ್ಷರೂ ಆಗಿರುವುದರಿಂದ ದೇಶದಾದ್ಯಂತ ಸಂಚರಿಸಿ ಸಮನ್ವಯ ಸಾಧಿಸಬೇಕಿದೆ. ಹೀಗಾಗಿ, ಅವರು ಸ್ಪರ್ಧಿಸುವ ಬಗ್ಗೆ ಪಕ್ಷದ ನಾಯಕರಲ್ಲಿಯೇ ಅನುಮಾನಗಳು ವ್ಯಕ್ತವಾಗಿವೆ. ಈ ಬಾರಿ ಸ್ಪರ್ಧಿಸಬೇಕು ಎಂದು ಹಲವು ಮುಖಂಡರು ಭೇಟಿಯಾಗಿ ಖರ್ಗೆ ಅವರಿಗೆ ಮನವಿ ಮಾಡಿದ್ದರೂ, ಇನ್ನೂ ಖಚಿತ ಭರವಸೆ ನೀಡಿಲ್ಲ.

ಎರಡು ವಾರಗಳ ಹಿಂದೆ ಕೆಪಿಸಿಸಿ ಸೂಚನೆ ಮೇರೆಗೆ ಜಿಲ್ಲೆಗೆ ಭೇಟಿ ನೀಡಿದ್ದ ಸಚಿವ ಬಿ. ನಾಗೇಂದ್ರ ಅವರು ಜಿಲ್ಲೆಯ ಕಾಂಗ್ರೆಸ್ ಶಾಸಕರು ಹಾಗೂ ಪಕ್ಷದ ಜಿಲ್ಲಾ ಘಟಕದ ಪದಾಧಿಕಾರಿಗಳನ್ನು ಭೇಟಿ ಮಾಡಿ ಲೋಕಸಭೆಗೆ ಸ್ಪರ್ಧಿಸಲಿರುವ ಆಕಾಂಕ್ಷಿಗಳ ಬಗ್ಗೆ ಮಾಹಿತಿ ಪಡೆದು ಹೋಗಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಕಲಬುರಗಿ ಕ್ಷೇತ್ರದಿಂದ ಮತ್ತೊಮ್ಮೆ ಸ್ಪರ್ಧಿಸುವಂತೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಒತ್ತಾಯಿಸಿ, ಮತದಾರರ ಕೈ-ಕಾಲು ಹಿಡಿದು ಮತ ಹಾಕಿಸಬೇಕು ಎಂಬ ಮಾತುಗಳನ್ನು ಮುಖ್ಯಮಂತ್ರಿಯವರ ಸಲಹೆಗಾರ ಬಿ.ಆರ್. ಪಾಟೀಲ ಅವರು ಸಾರ್ವಜನಿಕವಾಗಿ ಆಡಿದ್ದರ ಬಳಿಕ ಖರ್ಗೆ ಅವರೇ ಅಭ್ಯರ್ಥಿಯಾಗಬೇಕು ಎಂಬ ಬಲವಾದ ಕೂಗು ಕೇಳಿಬರುತ್ತಿದೆ.

'ಎಲ್ಲರೂ ಒಕ್ಕೊರಲಿನಿಂದ ಮಲ್ಲಿಕಾರ್ಜುನ ಖರ್ಗೆ ಅವರೇ ಈ ಬಾರಿಯೂ ಸ್ಪರ್ಧಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಅದನ್ನು ರಾಜ್ಯ ಘಟಕದ ಅಧ್ಯಕ್ಷರ ಮೂಲಕ ಹೈಕಮಾಂಡ್‌ಗೆ ಕಳಿಸಲಾಗುತ್ತದೆ' ಎಂದು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಜಗದೇವ ಗುತ್ತೇದಾರ 'ಪ್ರಜಾವಾಣಿ'ಗೆ ತಿಳಿಸಿದರು.

ಸುದೀರ್ಘ ಅವಧಿಯವರೆಗೆ ಯಾದಗಿರಿ ಜಿಲ್ಲೆಯ ಗುರುಮಠಕಲ್ ಕ್ಷೇತ್ರವನ್ನು ವಿಧಾನಸಭೆಯಲ್ಲಿ ಪ್ರತಿನಿಧಿಸಿದ್ದ ಖರ್ಗೆ ಅವರು 2009, 2014ರಲ್ಲಿ ಕಲಬುರಗಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದಿದ್ದರು. 2019ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಖರ್ಗೆ ಅವರು ಒಂದು ಕಾಲದಲ್ಲಿ ಅವರ ಶಿಷ್ಯರಾಗಿದ್ದ ಬಿಜೆಪಿಯ ಡಾ. ಉಮೇಶ ಜಾಧವ ಅವರ ಎದುರು ಭಾರಿ ಮತಗಳ ಅಂತರದಿಂದ ಸೋಲುಂಡರು. ಈ ಸೋಲು ಖರ್ಗೆ ಅವರಿಗೆ ಭಾರಿ ನಿರಾಸೆಯನ್ನು ಮೂಡಿಸಿತ್ತು. ಇದನ್ನು ಹಲವು ಬಾರಿ ವೇದಿಕೆಗಳಲ್ಲಿಯೂ ವ್ಯಕ್ತಪಡಿಸಿದ್ದಾರೆ. ಅದಾದ ಬಳಿಕ ರಾಜ್ಯಸಭೆ ಸದಸ್ಯತ್ವ ಪಡೆಯಲೂ ಹಿಂದೇಟು ಹಾಕಿದ್ದರು ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

'ಖರ್ಗೆ ಅವರು ಕಲಬುರಗಿಯಿಂದ ಸ್ಪರ್ಧಿಸಿದರೆ ಅವರ ಗೆಲುವಿನ ಜೊತೆಗೆ ರಾಜ್ಯದ ಇತರೆ ಸ್ಥಾನಗಳನ್ನೂ ಗೆಲ್ಲಿಸಿಕೊಂಡು ಬರುವ ಛಾತಿ ಅವರಿಗಿದೆ. ಹೀಗಾಗಿ, ಅವರೇ ಸೂಕ್ತ ಅಭ್ಯರ್ಥಿ ಎನ್ನುತ್ತಾರೆ' ಜಿಲ್ಲೆಯ ಕಾಂಗ್ರೆಸ್ ಶಾಸಕರೊಬ್ಬರು.

ಅಧ್ಯಕ್ಷರೇ ನಿರ್ಣಯ ಕೈಗೊಳ್ಳಬೇಕು: ಪ್ರಿಯಾಂಕ್

ಪ್ರಿಯಾಂಕ್ ಖರ್ಗೆ

'ಕಲಬುರಗಿ ಲೋಕಸಭಾ ಕ್ಷೇತ್ರದಿಂದ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರೇ ಸ್ಪರ್ಧಿಸಬೇಕು ಎಂಬುದು ಪಕ್ಷದ ಜಿಲ್ಲಾ ಮಟ್ಟದ ನಾಯಕರು, ಕಾರ್ಯಕರ್ತರ ಅಪೇಕ್ಷೆಯಾಗಿದೆ. ಆದರೆ, ಇದೀಗ ಅವರಿಗೆ ಕಾರ್ಯಭಾರವೂ ಹೆಚ್ಚಾಗಿದೆ. ತಾವು ಸ್ಪರ್ಧಿಸುವ ಬಗ್ಗೆ ಅಧ್ಯಕ್ಷರೇ ನಿರ್ಣಯ ಕೈಗೊಳ್ಳಬೇಕು' ಎಂದು ಖರ್ಗೆ ಅವರ ಪುತ್ರರೂ ಆಗಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, 'ಮಲ್ಲಿಕಾರ್ಜುನ ಖರ್ಗೆ ಅವರು 'ಇಂಡಿಯಾ' ಒಕ್ಕೂಟದ ನೇತೃತ್ವ ವಹಿಸಿದ್ದರಿಂದ ರಾಷ್ಟ್ರ ಮಟ್ಟದಲ್ಲಿ ಹೆಚ್ಚಿನ ಜವಾಬ್ದಾರಿಗಳೂ ಇವೆ. ಹೀಗಾಗಿ, ಕಲಬುರಗಿಯಿಂದ ಸ್ಪರ್ಧಿಸಬೇಕೇ ಬೇಡವೇ ಎಂಬ ನಿರ್ಣಯವನ್ನು ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರು ಅವರಿಗೇ ಬಿಟ್ಟಿದ್ದಾರೆ. ಫೆಬ್ರುವರಿ ಮಧ್ಯಭಾಗದಲ್ಲಿ ಸ್ಪಷ್ಟ ಚಿತ್ರಣ ದೊರೆಯಲಿದೆ' ಎಂದರು.

'ಕಲಬುರಗಿ ಲೋಕಸಭಾ ಕ್ಷೇತ್ರದಿಂದ ನಾನು ಸ್ಪರ್ಧಿಸುವ ಬಗ್ಗೆ ಚಿಂತನೆ ಮಾಡಿಲ್ಲ' ಎಂದು ಪ್ರಿಯಾಂಕ್ ಅವರು ಸ್ಪಷ್ಟಪಡಿಸಿದರು.

3 ಕಷ್ಟಕರ ಕ್ಷೇತ್ರ ಗೆಲ್ಲಿಸಿಕೊಂಡು ಬರುತ್ತೇನೆ: ಸೋಮಣ್ಣ

ಬೆಂಗಳೂರು: 'ಕಷ್ಟಕರವಾದ ಯಾವುದೇ ಮೂರು ಲೋಕಸಭಾ ಕ್ಷೇತ್ರಗಳ ಉಸ್ತುವಾರಿ ಕೊಟ್ಟರೂ ಸರಿ, ಅವುಗಳನ್ನು ಗೆಲ್ಲಿಸಿಕೊಂಡು ಬರುತ್ತೇನೆಂದು ವರಿಷ್ಠರಿಗೆ ಹೇಳಿದ್ದೇನೆ' ಎಂದು ಮಾಜಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಸೋಮವಾರ ಅವರು ಸುದ್ದಿಗಾರರ ಜತೆ ಮಾತನಾಡಿ, 'ವರಿಷ್ಠರನ್ನು ಶನಿವಾರ ಭೇಟಿ ಮಾಡಿದಾಗ ರಾಜ್ಯಸಭೆಗೆ ಟಿಕೆಟ್ ಕೇಳುವುದರ ಜತೆಗೆ ಮೂರು ಲೋಕಸಭಾ ಕ್ಷೇತ್ರಗಳ ಗೆಲ್ಲಿಸಿಕೊಂಡು ಬರುವ ಜವಾಬ್ದಾರಿಯನ್ನೂ ಕೇಳಿದ್ದೇನೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಜತೆ ಮಾಡಿ ಮಾತುಕತೆ ನಡೆಸಿದೆ. ಐದು ನಿಮಿಷ ಸಮಯ ಕೇಳಿದ್ದೆ. ಆದರೆ, ಅವರು ನನ್ನ ಜತೆ ಅರ್ಧ ಗಂಟೆ ಮಾತನಾಡಿದರು. ಇದೀಗ ಎಲ್ಲವೂ ಸುಖಾಂತ್ಯವಾಗಿದೆ. ಒಳ್ಳೆಯತನಕ್ಕೆ ಮತ್ತು ಒಳ್ಳೆಯ ನಡವಳಿಕೆಗೆ ಬೆಲೆ ಇರುತ್ತದೆ ಎಂಬುದಕ್ಕೆ ದೆಹಲಿ ಭೇಟಿಯೇ ಒಂದು ಉದಾಹರಣೆ. ಅಮಿತ್ ಶಾ ಅವರು ನನ್ನ ಬಗ್ಗೆ ಸಕಾರಾತ್ಮಕವಾಗಿಯೇ ಇದ್ದರು. ಮುಂದೆ ಒಳ್ಳೆಯ ತೀರ್ಮಾನವನ್ನೇ ತೆಗೆದುಕೊಳ್ಳಲಿದ್ದಾರೆ' ಎಂದು ಸೋಮಣ್ಣ ವಿಶ್ವಾಸ ವ್ಯಕ್ತಪಡಿಸಿದರು.

'ಸೋಮಣ್ಣ ಸ್ಪರ್ಧೆಗೆ ಅಭ್ಯಂತರವಿಲ್ಲ'

'ಸೋಮಣ್ಣ ಅವರು ಹಿರಿಯರು. ಪಕ್ಷಕ್ಕೆ ಅವರದ್ದೇ ಆದ ಕೊಡುಗೆ ಇದೆ. ವಿಧಾನಸಭಾ ಚುನಾವಣೆಯಲ್ಲಿ ಎರಡೂ ಕ್ಷೇತ್ರಗಳಲ್ಲಿ ಗೆಲ್ಲುವ ಭರವಸೆಯಿಂದ ಸ್ಪರ್ಧಿಸಿದ್ದರು. ಅವರ ಸೋಲು ನಮಗೂ ನೋವು ತಂದಿದೆ. ವರಿಷ್ಠರ ಮುಂದೆ ಅವರು ವ್ಯಕ್ತಪಡಿಸಿರುವ ಆಕಾಂಕ್ಷೆ (ರಾಜ್ಯಸಭೆ ಟಿಕೆಟ್) ಬಗ್ಗೆ ಮಾತನಾಡುತ್ತೇನೆ. ಇದಕ್ಕೆ ನಮ್ಮ ಅಭ್ಯಂತರವಿಲ್ಲ. ಲೋಕಸಭೆ ಚುನಾವಣೆ ಸ್ಪರ್ಧೆಯೂ ಸೇರಿ ಯಾವುದೇ ವಿಚಾರವಾದರೂ ಸರಿ ವರಿಷ್ಠರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೋ ಅದೇ ರೀತಿ ನಡೆದುಕೊಳ್ಳುತ್ತೇನೆ' ಎಂದು ಬಿ.ವೈ. ವಿಜಯೇಂದ್ರ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಜನಾರೋಗ್ಯ ವಿಮೆ ನಿಲ್ಲಿಸಲ್ಲ: ಚಿವಟೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಗಡಿ ವಿವಾದಕ್ಕೆ ಒಳಪಟ್ಟ 865 ಹಳ್ಳಿ ಮತ್ತು ಪಟ್ಟಣಗಳಿಗೆ ನೀಡಿದ ಜ್ಯೋತಿರಾವ್ ಫುಲೆ ಜನಾರೋಗ್ಯ ವಿಮೆ ಯೋಜನೆಯನ್ನು ಯಾವುದೇ ಕಾರಣಕ್ಕೂ ನಿಲ್ಲಿಸಲ್ಲ. ಬೆಳಗಾವಿಯಲ್ಲಿ ಸೇವಾ ಕೇಂದ್ರಗಳನ್ನು ಬಂದ್ ಮಾಡಿದ್ದರೂ ಆನ್‌ಲೈನ್ ಮೂಲಕ ಸೇವೆ ಮುಂದುವರಿಸುತ್ತೇವೆ' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಕಚೇರಿಯ ವಿಶೇಷಾಧಿಕಾರಿ ಮಂಗೇಶ ಚಿವಟೆ ಹೇಳಿದ್ದಾರೆ.

ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡ ಕೊಲ್ಹಾಪುರ ಜಿಲ್ಲೆಯ ಚಂದಗಡ ತಾಲ್ಲೂಕಿನ ಇನಾಮ ಸವರ್ದೆ ಗ್ರಾಮದಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ನಿಯೋಗದೊಂದಿಗೆ ಭಾನುವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಯೋಜನೆ ಅನುಷ್ಠಾನಕ್ಕೆ ಕನ್ನಡ ಸಂಘಟನೆಗಳು ಆಕ್ಷೇಪಿಸಿದ್ದರಿಂದ ಬೆಳಗಾವಿ ಜಿಲ್ಲಾಡಳಿತ ಸೇವಾ ಕೇಂದ್ರಗಳನ್ನು ಮುಚ್ಚಿದೆ. ಆದರೆ, ನಮ್ಮ ಜನರಿಗೆ ಯೋಜನೆ ತಲುಪಿಸಲು ನಾವು ಹಿಂದೆ ಬೀಳಲ್ಲ' ಎಂದರು.

'ಮಹಾರಾಷ್ಟ್ರದ ಸಾಂಗ್ಲಿ, ಜತ್ತ, ಅಕ್ಕಲಕೋಟ, ಮಿರಜ್, ಸೊಲ್ಲಾಪುರ, ನಾಂದೇಡ್ ಮತ್ತು ಇತರೆ ಗಡಿ ಪ್ರದೇಶಗಳಲ್ಲಿನ ಕೆಲ ಆಸ್ಪತ್ರೆಗಳು ಕರ್ನಾಟಕದ ಆರೋಗ್ಯ ವಿಮೆ ಯೋಜನೆಯಡಿ ಚಿಕಿತ್ಸೆ ಕೊಡುತ್ತಿವೆ. ಕರ್ನಾಟಕ ಸರ್ಕಾರ ನಮಗೆ ಅಡ್ಡಿಪಡಿಸಿದರೆ, ನಾವು ಆ ಯೋಜನೆ ಮುಂದುವರಿಸುವ ಬಗ್ಗೆ ಚಿಂತಿಸಬೇಕಾಗುತ್ತದೆ' ಎಂದರು.

ಎಂಇಎಸ್ ಮುಖಂಡರಾದ ಮಾಲೋಜಿ ಅಷ್ಟೇಕರ, ರಂಜೀತ ಚವ್ಹಾಣ ಪಾಟೀಲ, ಶಿವಾಜಿ ಮಂಡೋಳ್ಕರ್, ಆನಂದ ಅಷ್ಟೇಕರ್ ಇತರರು ನಿಯೋಗದಲ್ಲಿದ್ದರು.

'ಈ ಯೋಜನೆಗೆ ಏಕೆ ವಿರೋಧ ವ್ಯಕ್ತವಾಗಿದೆ ಎಂಬುದು ಎಂಇಎಸ್ ಹಾಗೂ ಮಹಾರಾಷ್ಟ್ರದ ನಾಯಕರಿಗೆ ಗೊತ್ತಿದೆ. ಜನಾರೋಗ್ಯ ವಿಮೆಯನ್ನು ಭಾಷೆಯ ಆಧಾರದ ಮೇಲೆ ನೀಡುವ ಬದಲು ಎಲ್ಲರಿಗೂ ಯಾಕೆ ನೀಡಬಾರದು? ಎಂಇಎಸ್ ಶಿಫಾರಸು ಪತ್ರ ಯಾಕೆ ಬೇಕು? ಅದೇನು ಸರ್ಕಾರಿ ಸಂಸ್ಥೆಯೇ' ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಪ್ರಶ್ನಿಸಿದ್ದಾರೆ.

'ಸುವರ್ಣ ಸೌಧದಲ್ಲಿ 2 ತಿಂಗಳಿಗೊಮ್ಮೆ ಸಭೆ: ಸೂಚನೆ'

ಬೆಳಗಾವಿ: 'ವಿಧಾನ ಪರಿಷತ್ತಿನಡಿ ಬರುವ ಎಲ್ಲ ಸಮಿತಿಗಳ ಸಭೆಯನ್ನು ಎರಡು ತಿಂಗಳಿಗೊಮ್ಮೆ ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ನಡೆಸಲು ಸಂಬಂಧಪಟ್ಟ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಕ್ರಮ ಕೈಗೊಳ್ಳಬೇಕು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸೂಚಿಸಿದ್ದಾರೆ.

'ಸುವರ್ಣ ವಿಧಾನಸೌಧದ ಸದ್ಬಳಕೆ ಗಾಗಿ ಬೆಂಗಳೂರಿನಲ್ಲಿ ಹಲವು ಸರ್ಕಾರಿ ಕಚೇರಿಗಳು ಸುವರ್ಣ ವಿಧಾನ ಸೌಧದಿಂದ ಕಾರ್ಯ ನಿರ್ವಹಿಸಬೇಕು ಎಂಬುದು ಉತ್ತರ ಕರ್ನಾಟಕದ ಜನರ ಬೇಡಿಕೆ' ಎಂದು ತಿಳಿಸಿದ್ದಾರೆ.

'ಬೆಂಗಳೂರಿನ ಕೆಲ ಸರ್ಕಾರಿ ಕಚೇರಿಗಳನ್ನು ಸುವರ್ಣ ವಿಧಾನಸೌಧಕ್ಕೆ ಸ್ಥಳಾಂತರಿಸುವ ಬಗ್ಗೆ ನಾನು ಅಧ್ಯಕ್ಷನಾಗಿದ್ದ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯಿಂದ ಸರ್ಕಾರಕ್ಕೆ ವರದಿ ನೀಡಲಾಗಿತ್ತು. ಅದರ ಪ್ರಗತಿ ಶೂನ್ಯವಾಗಿದೆ. ಅದಕ್ಕೆ ಎರಡು ತಿಂಗಳಿಗೊಮ್ಮೆ ಸುವರ್ಣ ಸೌಧದಲ್ಲಿ ವಿಧಾನ ಪರಿಷತ್ತಿನಡಿ ಬರುವ ಎಲ್ಲ ಸಮಿತಿಗಳ ಸಭೆ ನಡೆಸಲು ಕ್ರಮ ವಹಿಸಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಏಕಾಂಗಿಯಾಗಿ ಸ್ಪರ್ಧೆ'

ಲಖನೌ (ಪಿಟಿಐ): 'ಲೋಕಸಭಾ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಏಕಾಂಗಿಯಾಗಿ ಸ್ಪರ್ಧಿಸಲಿದೆ' ಎಂದು ಪಕ್ಷದ ಅಧ್ಯಕ್ಷೆ ಮಾಯಾವತಿ ಸೋಮವಾರ ತಿಳಿಸಿದರು.

ಪಕ್ಷದ ಕಚೇರಿಯಲ್ಲಿ ನಡೆದ ತಮ್ಮ 68ನೇ ಜನ್ಮ ದಿನಾಚರಣೆಯ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು ಚುನಾವಣೋತ್ತರ ಮೈತ್ರಿಯ ಸಾಧ್ಯತೆಯನ್ನು ತಳ್ಳಿಹಾಕಲಿಲ್ಲ. ಮಾಧ್ಯಮಗಳಲ್ಲಿ ಪ್ರಕಟವಾದ ರಾಜಕೀಯ ನಿವೃತ್ತಿಯ ವರದಿಗಳನ್ನು ಅವರು ನಿರಾಕರಿಸಿದರು.

'ಮತ್ತೊಮ್ಮೆ ಮೋದಿ' ಅಭಿಯಾನ

ಪ್ರಜಾವಾಣಿ ವಾರ್ತೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೋಮವಾರ ಶೇಷಾದ್ರಿಪುರದ ಮಾರುತಿ ಆಸ್ಪತ್ರೆಯ ಬಳಿ ಗೋಡೆ ಬರಹ ಅಭಿಯಾನಕ್ಕೆ ಚಾಲನೆ ನೀಡಿದರು. ಸಂಸದ ಪಿ.ಸಿ ಮೋಹನ್, ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಭಾಗವಹಿಸಿದ್ದರು

ಬೆಂಗಳೂರು: '2024ಕ್ಕೆ ಮತ್ತೊಮ್ಮೆ ಮೋದಿ' ಎಂಬ ಲೋಕಸಭಾ ಚುನಾವಣೆಯ ಗೋಡೆ ಬರಹ ಅಭಿಯಾನಕ್ಕೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸೋಮವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಜಯೇಂದ್ರ, '2047ಕ್ಕೆ ವಿಕಸಿತ ಭಾರತದ ಸಂಕಲ್ಪವನ್ನು ಪ್ರಧಾನಿ ಮೋದಿಯವರು ಹೊಂದಿದ್ದಾರೆ. ಅದನ್ನು ಈಡೇರಿಸಲು ಮೋದಿ ಸಂಕಲ್ಪಕ್ಕೆ ಜನತೆ ಭಾರಿ ಬೆಂಬಲ ನೀಡುತ್ತಿದ್ದಾರೆ' ಎಂದರು.

'ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೂಚನೆಯ ಮೇರೆಗೆ ಗೋಡೆ ಬರಹ ಅಭಿಯಾನ ಆರಂಭಿಸಿದ್ದೇವೆ. ವಿಕಸಿತ ಭಾರತದ ಸಂಕಲ್ಪದ ಮೂಲಕ ಮೋದಿ ಅವರ ಜನಪರ ಯೋಜನೆಗಳು ಜನರನ್ನು ತಲುಪುತ್ತಿವೆ. ರಾಜ್ಯದ ಜನತೆ ಕೂಡಾ ಬಿಜೆಪಿ ಮತ್ತು ಮೋದಿ ಅವರ ಮೇಲಿನ ಗೌರವದಿಂದ ಬಹಳ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ' ಎಂದು ವಿವರಿಸಿದರು.

ಹಾವೇರಿಯಲ್ಲಿ ಮಹಿಳೆ ಮೇಲೆ ಅತ್ಯಾಚಾರದ ಪ್ರಕರಣಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಈ ವಿಷಯದಲ್ಲಿ ರಾಜಕೀಯ ಮಾಡಲು ಬಯಸುವುದಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಪದೇ ಪದೇ ಈ ರೀತಿಯ ಘಟನೆಗಳು ನಡೆಯುತ್ತಿವೆ. ಬೆಳಗಾವಿ, ಹಾವೇರಿಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದ ಘಟನೆಗಳು ನಾಚಿಕೆಗೇಡಿನ ಸಂಗತಿ. ರಾಜ್ಯದಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲ. ಇಂತಹ ಗಂಭೀರ ವಿಷಯಗಳನ್ನು ರಾಜ್ಯ ಸರ್ಕಾರ ಹಗುರವಾಗಿ ತೆಗೆದುಕೊಂಡಿದೆ. ಪೊಲೀಸರು ರಾಜ್ಯ ಕಾಂಗ್ರೆಸ್ ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವುದು ದುರ್ದೈವ. ಈ ಘಟನೆಯ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಲು ಸರ್ಕಾರವನ್ನು ಒತ್ತಾಯಿಸಿದ್ದೇವೆ' ಎಂದರು.

ನದಿ ದಡದಲ್ಲಿ ರಾಮ ಮಂದಿರ ಪತ್ತೆ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ ತಾಲ್ಲೂಕಿನ ಸದಲಗಾ ಪಟ್ಟಣ ಹೊರವಲಯದಲ್ಲಿ ದೂಧಗಂಗಾ ನದಿ ದಡದಲ್ಲಿ ಮುಳುಗಡೆಯಾಗಿದ್ದ ಮಂದಿರವನ್ನು ಸೋಮವಾರ ಹೊರತೆಗೆಯಲಾಯಿತು

ಚಿಕ್ಕೋಡಿ: ತಾಲ್ಲೂಕಿನ ಸದಲಗಾ ಪಟ್ಟಣದ ಹೊರವಲಯದಲ್ಲಿ ದೂಧಗಂಗಾ ನದಿ ದಡದಲ್ಲಿ, ಹಲವು ವರ್ಷಗಳ ಹಿಂದೆ ಮಣ್ಣಲ್ಲಿ ಹುದುಗಿದ್ದ ರಾಮ ಮಂದಿರವನ್ನು ಸ್ಥಳೀಯರು ಹೊರತೆಗೆದಿದ್ದಾರೆ.

'ಎರಡು ತಲೆಮಾರುಗಳ ಹಿಂದೆ ನಮ್ಮೂರಿನ ನದಿ ದಡದಲ್ಲಿ ರಾಮ ಮಂದಿರ ಇತ್ತು. ಪ್ರವಾಹದ ವೇಳೆ ಮುಳುಗಿತ್ತು ಎಂದು ಹಿರಿಯರು ಹೇಳುತ್ತಿದ್ದರು. ಅಯೋಧ್ಯೆಯಲ್ಲಿ ರಾಮನ ಮಂದಿರ ಉದ್ಘಾಟನೆ ಆಗುತ್ತಿರುವ ಹಿನ್ನೆಲೆಯಲ್ಲಿ ಯುವಕರು ಸೋಮವಾರ ಇಡೀ ದಿನ ಜೆಸಿಬಿ ಸಾಧನದ ನೆರವಿನಿಂದ ದೇವಸ್ಥಾನಕ್ಕೆ ಶೋಧ ನಡೆಸಿದರು. ಸಂಜೆ ಪತ್ತೆಯಾಯಿತು' ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಶಾಸಕಿ ಶಶಿಕಲಾ ಜೊಲ್ಲೆ ಸ್ಥಳಕ್ಕೆ ಭೇಟಿ ನೀಡಿದರು. ಸದಲಗಾ ಪಟ್ಟಣ ಹಾಗೂ ಸುತ್ತಲಿನ ಜನರು ತಂಡೋಪತಂಡವಾಗಿ ಬಂದು ಮಂದಿರ ನೋಡಿದರು.

ವಿದೇಶಿ ವಿದ್ಯಾರ್ಥಿಗಳ ಸಂಖ್ಯೆಗೆ ಮಿತಿ ಹೇರಲು ಕೆನಡಾ ಚಿಂತನೆ

ಒಟ್ಟಾವ (ಪಿಟಿಐ): ವಿದೇಶಿ ವಿದ್ಯಾರ್ಥಿಗಳ ಸಂಖ್ಯೆಗೆ ಮಿತಿ ಹೇರುವ ಸಾಧ್ಯತೆಯನ್ನು ಕೆನಡಾ ಪರಿಶೀಲಿಸುತ್ತಿದೆ.

ತೀವ್ರಗೊಂಡಿರುವ ವಸತಿ ಬೇಡಿಕೆ ತಗ್ಗಿಸಲು ಮತ್ತು ನಿಯಂತ್ರಣವಿಲ್ಲದಂತಾಗಿರುವ ವಿದೇಶಿ ವಿದ್ಯಾರ್ಥಿಗಳ ಪ್ರವೇಶ ವ್ಯವಸ್ಥೆ ಸರಿಪಡಿಸಲು ಈ ಕ್ರಮ ಅಗತ್ಯವಾಗಿದೆ ಎಂದು ವಲಸೆ ಸಚಿವ ಮಾರ್ಕ್ ಮಿಲ್ಲರ್ ಹೇಳಿದ್ದಾರೆ.

ಕೆನಡಾದ ಈ ಕ್ರಮವು ಭಾರತೀಯ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಆದರೆ, ಕೆನಡಾ ಸರ್ಕಾರ ಮಿತಿ ಹೇರಲು ಚಿಂತಿಸಿರುವ ಗಾತ್ರದ ಬಗ್ಗೆ ಮಿಲ್ಲರ್ ಬಹಿರಂಗಪಡಿಸಿಲ್ಲ.

ಕಾಯಂ ಮತ್ತು ತಾತ್ಕಾಲಿಕ ನಿವಾಸಿಗಳು ಸೇರಿ ದೇಶದಲ್ಲಿ ವಲಸಿಗರ ಸಂಖ್ಯೆ ಏರಿಕೆಯಿಂದ ವಸತಿ ಸಮಸ್ಯೆ ತೀವ್ರಗೊಂಡಿದ್ದು, ಪ್ರಧಾನಿ ಜಸ್ಟಿನ್ ಟ್ರುಡೊ ಅವರ ನೇತೃತ್ವದ ಕೇಂದ್ರ ಸರ್ಕಾರ ಭಾರಿ ಟೀಕೆಗೆ ಗುರಿಯಾಗುತ್ತಿರುವ ಬೆನ್ನಲ್ಲೇ ಭಾನುವಾರ ಮಿಲ್ಲರ್ ಈ ಹೇಳಿಕೆ ನೀಡಿದ್ದಾರೆ.

ನಿಧನ ವಾರ್ತೆ

ಸುಶೀಲಾಬಾಯಿ ನಿರಾಣಿ

ಬಾಗಲಕೋಟೆ: ಜಿಲ್ಲೆಯ ಬೀಳಗಿ ತಾಲ್ಲೂಕಿನ ಬಸವ ಹಂಚಿನಾಳ ಗ್ರಾಮದ ನಿವಾಸಿ ಸುಶೀಲಾಬಾಯಿ ನಿರಾಣಿ (78) ಸೋಮವಾರ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತಿ ಹಾಗೂ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮುರುಗೇಶ ನಿರಾಣಿ, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಸೇರಿ ಐವರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಮೃತರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 1ಕ್ಕೆ ಬಸವ ಹಂಚಿನಾಳ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ

ಮುರುಗೇಶ ಆರ್. ನಿರಾಣಿಯವರ
ಮಾತೋಶ್ರೀಯವರಾದ
ನಿರಾಣಿ ಪರಿವಾರದ ಅಮ್ಮ, ವಾತ್ಸಲ್ಯಪೂರ್ಣ ನುಡಿಗಳಿಂದ
ಎಲ್ಲರನ್ನು ಸಲುಹಿದ ಮಮತಾಮಯಿ, ನಿರಾಣಿ ಪರಿವಾರದ
ಕೃಷಿ ಕುಟುಂಬದ ಹಿಂದಿನ ಕತೃತ್ವ ಶಕ್ತಿ
ಶ್ರೀಮತಿ ಸುಶೀಲಾತಾಯಿ ರುದ್ರಪ್ಪ ನಿರಾಣಿ ಯವರು
ಸೋಮವಾರ ದಿ. 15-01-2024ರಂದು
ಕೈಲಾಸವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ
ಅಂತ್ಯಕ್ರಿಯೆಯನ್ನು ಮಂಗಳವಾರ
ದಿ. 16-01-2024 ರಂದು ಬಾಗಲಕೋಟ ಜಿಲ್ಲೆಯ ಬೀಳಗಿ
ತಾಲೂಕಿನ ಬಸವಹಂಚಿನಾಳದಲ್ಲಿ ಮಧ್ಯಾಹ್ನ
ಒಂದು (1) ಗಂಟೆಗೆ ನೆರವೇರಿಸಲಾಗುವುದು.

ದುಃಖತಪ್ತರು
ಶ್ರೀ ರುದ್ರಪ್ಪ ನಿಂಗಪ್ಪ ನಿರಾಣಿ
ಹಾಗೂ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರು.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ಪಾದಗಳೇ ಇಲ್ಲದ ವ್ಯಕ್ತಿಯನ್ನು ನೋಡುವತನಕ, ನನ್ನ ಬಳಿ ಶೂಗಳೇ ಇಲ್ಲ ಎಂದು ನಾನು ದೂರುತ್ತಲೇ ಇದ್ದೆ.
-ಕನ್‌ಫ್ಯೂಷಿಯಸ್

ಮರ್ಯಾದೆ ಹೆಸರಿನಲ್ಲಿ ಮರ್ಯಾದೆಗೇಡು ಕೃತ್ಯ: ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲಿ

ಮಹಿಳೆಯೊಬ್ಬರ ಮೇಲೆ ಹಾವೇರಿಯಲ್ಲಿ ಒಂದು ಗುಂಪು ನಡೆಸಿದ ದಾಳಿಯು ಅನೈತಿಕ ಪೊಲೀಸ್‌ಗಿರಿ, ಲೈಂಗಿಕ ದೌರ್ಜನ್ಯ ಮತ್ತು ಕೋಮು ಅಸಹಿಷ್ಣುತೆ ಎಲ್ಲವೂ ಸೇರಿಕೊಂಡಿರುವ ಕ್ರೌರ್ಯ. ಐದು ಮಂದಿಯ ಗುಂಪು ಹೋಟೆಲ್ ಒಂದಕ್ಕೆ ನುಗ್ಗಿ ಮಹಿಳೆ ಮತ್ತು ಅವರ ಪುರುಷ ಸಂಗಾತಿಯ ಮೇಲೆ ಹಲ್ಲೆ ನಡೆಸಿದೆ. ಮಹಿಳೆಯನ್ನು ನಿರ್ಜನ ಪ್ರದೇಶಕ್ಕೆ ಗುಂಪು ಒಯ್ದಿದೆ. ಅಲ್ಲಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ ಎಂದು ಆರೋಪಿಸಲಾಗಿದೆ. ಮಹಿಳೆಗೆ ಮದುವೆಯಾಗಿದೆ. ಅವರು ಹಾಗೂ ಅವರ ಜೊತೆಗೆ ಹೋಟೆಲ್‌ನಲ್ಲಿ ಇದ್ದ ಸಂಗಾತಿಯು ಭಿನ್ನ ಧರ್ಮಕ್ಕೆ ಸೇರಿದವರು ಎಂಬ ಅಂಶವು ಅವರ ಮೇಲೆ ದಾಳಿ ನಡೆಸುವ ಹಕ್ಕನ್ನು ಯಾರಿಗೂ ಕೊಡುವುದಿಲ್ಲ. ಸಂತ್ರಸ್ತರನ್ನು ಅಪಮಾನಿಸಲು ಮತ್ತು ಇತರರಲ್ಲಿ ಭೀತಿ ಹುಟ್ಟಿಸಲು ಹಲ್ಲೆಯ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಆರೋಪಿಗಳು ಹಂಚಿಕೊಂಡಿದ್ದಾರೆ. ವ್ಯಕ್ತಿಗಳು ಮತ್ತು ಅವರ ಸಂಬಂಧಗಳ ಮೇಲೆ ನಿಗಾ ಇರಿಸಲಾಗಿದೆ ಮತ್ತು ಸಾಮಾಜಿಕ ಅಥವಾ ಕೋಮು ಮಾನದಂಡವನ್ನು ಮೀರಿದವರಿಗೆ ಶಿಕ್ಷೆ ವಿಧಿಸಲಾಗುವುದು ಎಂಬ ಸಂದೇಶ ಸಾರುವುದು ಆರೋಪಿಗಳ ಉದ್ದೇಶವಾಗಿದೆ. ಇದು ಖಂಡನಾರ್ಹ ಮತ್ತು ಅಕ್ಷಮ್ಯ.

ಅನೈತಿಕ ಪೊಲೀಸ್‌ಗಿರಿಯಂಥ ಕೃತ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾದುದು ಸಮಾಜ ಮತ್ತು ಸರ್ಕಾರದ ಕರ್ತವ್ಯ

ತಮ್ಮ ಜೀವನದಲ್ಲಿ ಏನು ಮಾಡಬೇಕು ಮತ್ತು ವೈಯಕ್ತಿಕ ಸಂಬಂಧಗಳು ಹೇಗಿರಬೇಕು ಎಂಬುದನ್ನು ನಿರ್ಧರಿಸುವ ಹಕ್ಕು ಹಲ್ಲೆಗೊಳಗಾದ ಜೋಡಿಗೆ ಇದೆ. ಯಾವುದೇ ಕಾನೂನನ್ನು ಉಲ್ಲಂಘಿಸದೆ, ತಮ್ಮಿಷ್ಟದಂತೆ ಬದುಕುವ ಹಕ್ಕು ಎಲ್ಲರಿಗೂ ಇದೆ. ಒಂದು ವೇಳೆ ಅವರು ಕಾನೂನನ್ನು ಉಲ್ಲಂಘಿಸಿದರೂ ನೈತಿಕತೆಯ ಹೆಸರಿನಲ್ಲಿ ದೌರ್ಜನ್ಯ ನಡೆಸುವ ಮತ್ತು ದಂಡಿಸುವ ಹಕ್ಕನ್ನು ಕೈಗೆ ತೆಗೆದುಕೊಂಡು ಶಿಕ್ಷೆ ಕೊಡುವ ಅಧಿಕಾರ ಯಾವುದೇ ವ್ಯಕ್ತಿಗೆ ಇಲ್ಲ. 'ನೈತಿಕತೆಯ ಕಾವಲುಗಾರರು' ಎಂದು ಸ್ವಯಂಘೋಷಿಸಿಕೊಂಡವರು ದೌರ್ಜನ್ಯ ನಡೆಸುವ ಪ್ರಕರಣಗಳು ಹೆಚ್ಚುತ್ತಲೇ ಇವೆ. ಕೆಲವು ದಿನಗಳ ಹಿಂದೆ, ಭಿನ್ನ ಧರ್ಮಗಳಿಗೆ ಸೇರಿದ ಸೋದರ ಸಂಬಂಧಿಗಳಾದ ಯುವಕ ಮತ್ತು ಯುವತಿಯ ಮೇಲೆ ಬೆಳಗಾವಿಯಲ್ಲಿ ಹಲ್ಲೆ ನಡೆಸಲಾಗಿತ್ತು. ಈ ಇಬ್ಬರನ್ನು ಪ್ರೇಮಿಗಳು ಎಂದು ಭಾವಿಸಿ ಥಳಿಸಲಾಗಿತ್ತು. ಈ ರೀತಿಯ ದೌರ್ಜನ್ಯಗಳಿಗೆ ವೈಯಕ್ತಿಕ, ಕೌಟುಂಬಿಕ ಮತ್ತು ಸಾಮುದಾಯಿಕ ಗೌರವದ ವಿವಿಧ ಆಯಾಮಗಳನ್ನು ಕಾರಣಗಳಾಗಿ ನೀಡಲಾಗುತ್ತಿದೆ. ಮರ್ಯಾದೆಗೆ ಧಕ್ಕೆಯಾಯಿತು ಎಂಬ ಪ್ರತಿಕ್ರಿಯೆಯಿಂದ ನಡೆಸುವ ಈ ಬಗೆಯ ದಾಳಿಗಳು ಸದಾ ಹಿಂಸಾತ್ಮಕ ಆಗಿಯೇ ಇರುತ್ತವೆ. ಕೆಲವೊಮ್ಮೆ ಹತ್ಯೆ ಮತ್ತು ಅತ್ಯಾಚಾರದಂತಹ ಕ್ರೌರ್ಯವನ್ನೂ ಒಳಗೊಂಡಿರುತ್ತವೆ.

ರಾಜಕೀಯ ಪಕ್ಷಗಳು ಇಂತಹ ಘಟನೆಗಳಿಗೆ ನೀಡುವ ಪ್ರತಿಕ್ರಿಯೆಗಳು ನಿಷ್ಪಕ್ಷಪಾತವಾಗಿ ಇರುವುದಿಲ್ಲ. ಸಂತ್ರಸ್ತರು ಯಾವ ಧರ್ಮಕ್ಕೆ ಸೇರಿದವರು ಮತ್ತು ಘಟನೆಯು ಎಲ್ಲಿ ನಡೆದಿದೆ ಎಂಬುದರ ಮೇಲೆ ರಾಜಕೀಯ ಪಕ್ಷಗಳ ಪ್ರತಿಕ್ರಿಯೆ ನಿರ್ಧಾರವಾಗುತ್ತದೆ. ಕೋಮು ಭಾವನೆಯನ್ನು ಕೆರಳಿಸಲು ಮತ್ತು ಸಾಮಾಜಿಕ ವಿಭಜನೆಗಳನ್ನು ಇನ್ನಷ್ಟು ಗಾಢವಾಗಿಸಲು ರಾಜಕಾರಣಿಗಳು ಇಂತಹ ಘಟನೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಾರೆ. ಸಾಮಾಜಿಕ ಸಂಘಟನೆಗಳು ಸಾಮಾನ್ಯವಾಗಿ ಇಂತಹ ಸಮಾಜಘಾತುಕ ಕೃತ್ಯಗಳನ್ನು ಸಮರ್ಥಿಸಿಕೊಳ್ಳುತ್ತವೆ. ಈ ಬಗೆಯ ಕೃತ್ಯ ಎಸಗಿದವರನ್ನು ರಕ್ಷಿಸುವ ಕೆಲಸವನ್ನೂ ಮಾಡುತ್ತವೆ. ಸಮಾಜದ ಕಟ್ಟಲೆಗಳನ್ನು ಮೀರಿ ನಡೆದ ಸಮುದಾಯದ ಸದಸ್ಯರಿಗೆ ಶಿಕ್ಷೆ ವಿಧಿಸುವುದನ್ನು ಕಾಪ್ ಪಂಚಾಯಿತಿಗಳು ಸಮರ್ಥಿಸುತ್ತವೆ. ಭಿನ್ನ ಧರ್ಮಗಳಿಗೆ ಸೇರಿದ ಜೋಡಿಗಳ ಮೇಲೆ ಕಣ್ಣಿಟ್ಟು ಅವರ ಮೇಲೆ ದೌರ್ಜನ್ಯ ಎಸಗುವುದಕ್ಕೆ ನೆರವಾಗಲು ವಾಟ್ಸ್‌ಆ್ಯಪ್ ಗುಂಪುಗಳೂ ಇವೆ. ಅನೈತಿಕ ಪೊಲೀಸ್‌ಗಿರಿಯು ಸಮಾಜದ ಪುರುಷಪ್ರಧಾನ ಸ್ವರೂಪದ ಪ್ರತಿಫಲನವಾಗಿದೆ. ಇಂತಹ ಅನೈತಿಕ ಪೊಲೀಸ್‌ಗಿರಿಯು ಹೆಚ್ಚಾಗಿ ಮಹಿಳೆಯರ ಮೇಲೆಯೇ ನಡೆಯುತ್ತದೆ. ವಿಶೇಷವಾಗಿ, ಒಂದು ಸಮುದಾಯದ ಮಹಿಳೆಯು ಬೇರೊಂದು ಸಮುದಾಯದ ಪುರುಷನ ಜೊತೆಗೆ ಹೋದಾಗ ಅಥವಾ ಮದುವೆಯಾದಾಗ, ಅದನ್ನು ಸಮುದಾಯದ ಅಪಮಾನ ಎಂದು ಭಾವಿಸಲಾಗುತ್ತದೆ. ಆದರೆ, ಒಂದು ಸಮುದಾಯದ ಪುರುಷ ಬೇರೊಂದು ಸಮುದಾಯದ ಮಹಿಳೆಯ ಜೊತೆಗೆ ಹೋದಾಗ ಪುರುಷನ ಸಮುದಾಯವು ಅದನ್ನು ಅಷ್ಟೊಂದು ದೊಡ್ಡ ಅವಮಾನ ಎಂದು ಭಾವಿಸುವುದಿಲ್ಲ. ಹಾಗಾಗಿ, ಅನೈತಿಕ ಪೊಲೀಸ್‌ಗಿರಿ ಹೆಚ್ಚು ತೊಂದರೆಗೆ ಒಳಗಾಗುವುದು ಮಹಿಳೆಯರು ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ಇಂತಹ ಕೃತ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾದುದು ಸಮಾಜ ಮತ್ತು ಸರ್ಕಾರದ ಕರ್ತವ್ಯ. ಅನೈತಿಕ ಪೊಲೀಸ್‌ಗಿರಿ ಎಸಗುವವರಿಗೆ ಕಾನೂನು ಪ್ರಕಾರ ತಕ್ಕ ಶಿಕ್ಷೆ ಆಗಬೇಕು. ಸಮಾಜವು ತನ್ನ ನೈತಿಕತೆಯ ಮಾನದಂಡವನ್ನು ಮರುರೂಪಿಸಬೇಕಾದ ಅಗತ್ಯವೂ ಇದೆ.

ದಿನದ ಟ್ವೀಟ್

ಸಂಚಾರ ವ್ಯವಸ್ಥೆ ಸುಗಮವಾಗಲಿ

ವಿಮಾನಗಳ ವಿಳಂಬ ಹಾರಾಟದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅದರಲ್ಲೂ ಎಕ್ಸ್ ವೇದಿಕೆಯಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಆದರೆ ರೈಲುಗಳು ಮತ್ತು ಬಸ್‌ಗಳಿಗೆ ಸಂಬಂಧಿಸಿದಂತೆ ಹದಗೆಟ್ಟ ಪರಿಸ್ಥಿತಿ ನಿತ್ಯನಿರಂತರ. ಈ ಕುರಿತು ಯಾವ ಆಕ್ರೋಶವೂ ಕಂಡು-ಬರುವುದಿಲ್ಲ. ಜನದಟ್ಟಣೆ, ವಿಳಂಬ, ಕೆಟ್ಟ ಆಹಾರ, ಗಬ್ಬುನಾರುವ ಶೌಚಾಲಯ ಎಲ್ಲವೂ ಇಲ್ಲಿವೆ. ಏಕೆಂದರೆ, ಬಸ್ಸು, ರೈಲುಗಳನ್ನು ಪ್ರಮುಖ ವ್ಯಕ್ತಿಗಳು, ಸೆಲೆಬ್ರಿಟಿಗಳು ನಿತ್ಯ ಬಳಸುವುದಿಲ್ಲ. ಒಪ್ಪುವಿರಾ?

ಶ್ರೀನಿವಾಸ್ ಅಲವಿಲ್ಲಿ, ಸಹ ಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

ಕಿಡಿನುಡಿ

'ಇಂಡಿಯಾ' ಮೈತ್ರಿಕೂಟಕ್ಕೆ ಅಸ್ತಿತ್ವವೇ ಇಲ್ಲ. ಇದು ಫೋಟೊಗಳಿಗೆ ಪೋಸ್ ನೀಡುವುದಕ್ಕಷ್ಟೇ ಸೀಮಿತವಾದ ತೋರಿಕೆಯ ಘಟಬಂಧನ್. ಮಹಾರಾಷ್ಟ್ರ, ಉತ್ತರ ಪ್ರದೇಶ, ಕೇರಳದಲ್ಲಿ ಪರಸ್ಪರ ಜಗಳವಿದೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮೈತ್ರಿಕೂಟದಿಂದ ಹೊರಬರುವ ಯೋಚನೆಯಲ್ಲಿದ್ದಾರೆ. ಇದರಿಂದ ಕಾಂಗ್ರೆಸ್ ಅಸಹಾಯಕವಾಗಿದೆ. ಅದಕ್ಕೆಂದೇ ಮಲ್ಲಿಕಾರ್ಜುನ ಖರ್ಗೆ ಅವರನ್ನು ನಾಯಕರನ್ನಾಗಿ ಮಾಡಿ ಬಲಿಪಶು ಮಾಡಲು ಮುಂದಾಗಿದೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ
ಶನಿವಾರ, 16-1-1999

• ಪಾಕ್ ಕ್ರಿಕೆಟ್ ತಂಡಕ್ಕೆ ರಕ್ಷಣೆ ಪ್ರಧಾನಿ ಭರವಸೆ

ನವದೆಹಲಿ, ಜ. 15 (ಯುಎನ್‌ಐ)– ಪಾಕಿಸ್ತಾನ ಕ್ರಿಕೆಟ್ ತಂಡದ ಭಾರತ ಪ್ರವಾಸವನ್ನು ಹಾಳುಮಾಡಲು ನಡೆಸುವ ಎಲ್ಲ ಪ್ರಯತ್ನಗಳನ್ನೂ ವಿಫಲಗೊಳಿಸಲಾಗುವುದು ಎಂದು ಪ್ರಧಾನಿ ಎ.ಬಿ.ವಾಜಪೇಯಿ ಅವರು ಹೇಳಿದ್ದಾರೆ.

ದೆಹಲಿಯ ಫಿರೋಜ್‌ಶಾ ಕೋಟ್ಲಾ ಮೈದಾನದ ಪಿಚ್ ಅನ್ನು ಅಗೆದು ಹಾಕಿದವರು 'ಯಾರ ಪರವಾಗಿ ಆಡುತ್ತಿದ್ದಾರೆ?' ಎಂದು ಕೇಳಿದ ಅವರು, 'ಕತ್ತಲಲ್ಲಿ ಬಂದು ಅಂಗಣ ಅಗೆಯುವುದು ಧೈರ್ಯದ ಕೆಲಸವೇ' ಎಂದು ತಮ್ಮ ಅಧಿಕೃತ ನಿವಾಸದಲ್ಲಿ ಕ್ರೀಡಾಳುಗಳ ಒಂದು ತಂಡವನ್ನು ಭೇಟಿಯಾದ ಸಂದರ್ಭದಲ್ಲಿ ಪ್ರಶ್ನಿಸಿದರು.

'ಕ್ರೀಡೆಯಲ್ಲಿ ರಾಜಕೀಯ ಬೇಡ' ಎಂದ ಅವರು, 'ಭಾರತ–ಪಾಕಿಸ್ತಾನದ ನಡುವಿನ ಕ್ರೀಡಾ ಬಾಂಧವ್ಯಕ್ಕೆ ಹುಳಿ ಹಿಂಡುವ ಯತ್ನ ಫಲಿಸದು' ಎಂದರು.

• ಶಬರಿಮಲೆ ದುರಂತ ನ್ಯಾಯಾಂಗ ತನಿಖೆ

ತಿರುವನಂತಪುರ, ಜ. 15 (ಪಿಟಿಐ, ಯುಎನ್‌ಐ)– ಶಬರಿಮಲೆ ಸಮೀಪದ ಪಂಬಾ ಬೆಟ್ಟದಲ್ಲಿ ಗುರುವಾರ ಭೂಕುಸಿತ ಮತ್ತು ಕಾಲ್ತುಳಿತಕ್ಕೆ ಸಿಕ್ಕಿ 52 ಯಾತ್ರಿಕರು ಮೃತಪಟ್ಟ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಕೇರಳ ಸರ್ಕಾರ ಇಂದು ಆದೇಶ ನೀಡಿದೆ.

50 ವರ್ಷಗಳ ಹಿಂದೆ
ಬುಧವಾರ, 16-1-1974

• ಆಕ್ಟ್ರಾಯ್‌ಗೆ ಸೂಕ್ತ ಬದಲಿ ಆದಾಯ ಮೂಲ ಅರಸಲು ಪ್ರತಿನಿಧಿಗಳ ತಂಡ

ಬೆಂಗಳೂರು, ಜ. 15– ಸಾಮಾನು ಸಾಗಿಸುವ ಲಾರಿಗಳಿಗೆ ಕಿರುಕುಳ ತಪ್ಪಿಸಿ, ಬೇರೆ ರೂಪದಲ್ಲಿ ಅದೇ ಆದಾಯವನ್ನು ಒದಗಿಸುವ ಸೂಕ್ತ ಬದಲು ಕ್ರಮ ಸೂಚಿಸಲ್ಪಟ್ಟರೆ ಆಕ್ಟ್ರಾಯ್ ಸುಂಕವನ್ನು ರದ್ದು ಮಾಡಲು ಸರ್ಕಾರ ಸಿದ್ಧವಿದೆಯೆಂದು ಅರ್ಥ ಸಚಿವ ಎಂ.ವೈ.ಘೋರ್ಪಡೆ ಅವರು ಇಂದು ಇಲ್ಲಿ ತಿಳಿಸಿದರು.

ಈ ಉದ್ದೇಶದಿಂದ ಸೂಕ್ತ ಹಾಗೂ ಆರ್ಥಿಕವಾಗಿ ಕಾರ್ಯಸಾಧ್ಯವಾದ ಬದಲಿ ಆದಾಯ ಕ್ರಮವನ್ನು ಕಂಡುಹಿಡಿಯಲು ಸಾರಿಗೆ ಲಾರಿ ಮಾಲೀಕರು, ಕಾರ್ಪೊರೇಷನ್, ವಾಣಿಜ್ಯ ಸಂಘ ಹಾಗೂ ಸಂಬಂಧಪಟ್ಟ ಖಾತೆಗಳ ಪ್ರತಿನಿಧಿಗಳೊಡನೆ ಸಚಿವರು ಸಮಾಲೋಚನೆಯನ್ನು ಆರಂಭಿಸಲಿದ್ದಾರೆ.

ಕಿರುಕುಳ: ಆಕ್ಟ್ರಾಯ್ ಸುಂಕವು ಕಿರುಕುಳಕಾರಕ ಹಾಗೂ ಹಳೆಯ ಪದ್ಧತಿ ಎಂಬುದನ್ನು ಮನವರಿಕೆ ಮಾಡಿಕೊಡಲು ಸಾರಿಗೆ ಮಾಲೀಕರು ವಿಶೇಷ ಪ್ರಯತ್ನ ಮಾಡಬೇಕಾಗಿಲ್ಲವೆಂದು, ಲಾರಿಗಳ ಮೆರವಣಿಗೆ ಮೂಲಕ ತಮ್ಮನ್ನು ಭೇಟಿ ಮಾಡಿದ ನಿಯೋಗಕ್ಕೆ ಅರ್ಥ ಸಚಿವ ಘೋರ್ಪಡೆ ಸ್ಪಷ್ಟಪಡಿಸಿದರು.

ಅಧಿಕಾರಕ್ಕಾಗಿ ಸಚಿವ ಬಣಗಳ ದಿಬ್ಬಣ, ನಾಡಿನ ಅಭಿವೃದ್ಧಿ ಗೌಣ

ಕಾಂಗ್ರೆಸ್‌ಗೆ ಬೇಕಿದೆ 'ಜೋಡೊ' ಯಾತ್ರೆ

ಗತಿಬಿಂಬ

ವೈ.ಗ.ಜಗದೀಶ್

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ಒಟ್ಟಿಗೆ ನಡೆಯೋಣ; ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆಯೋಣ' ಎಂಬ ಒಡಲ ತುಡಿತದ ಕರೆಯೊಂದಿಗೆ ದೇಶದುದ್ದಕ್ಕೂ 'ಭಾರತ್ ಜೋಡೊ ಯಾತ್ರೆ' ನಡೆಸಿದ್ದರು. ಹಿಂಸೆಯ ಕುದಿಯಲ್ಲಿ ಬೆಂದಿರುವ ಮಣಿಪುರದಿಂದ 'ಭಾರತ್ ಜೋಡೊ ನ್ಯಾಯಯಾತ್ರೆ'ಯನ್ನು ಸಂಕ್ರಾಂತಿಯ ಹಿಂದಿನ ದಿನವಷ್ಟೇ ಆರಂಭಿಸಿದ್ದಾರೆ. ಜೋಡೊ ಯಾತ್ರೆಯು ಭಾರತದ ನೆಲದಲ್ಲಿ ಶಾಂತಿ, ಸಹಿಷ್ಣುತೆ ಬಿತ್ತಿ ಸಹಬಾಳ್ವೆ ಕಟ್ಟಲು ಇತ್ತೀಚಿನ ವರ್ಷಗಳಲ್ಲಿ ನಡೆಸಿದ ಮಹಾಯಾನ ಆಗಿದೆ. ಅದರಿಂದ ಕಾಂಗ್ರೆಸ್‌ಗೆ ವೋಟು ಬರಲಿಲ್ಲವಾದರೂ, ಮನಸ್ಸುಗಳಲ್ಲಿ ಕೆರಳಿಸಲಾಗಿದ್ದ ಸುಡುಬೆಂಕಿ ಮುರುಟಿ, ಸಹಬಾಳ್ವೆ ನಡೆಸುವವರ ಹೃದಯದೊಳಗೆ ಪ್ರೀತಿಯ ಜಿನುಗುವಿಕೆಗೆ ಕಾರಣವಾಯಿತು.

ರಾಜ್ಯದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರ ಒಂದೆಡೆ ಧರ್ಮ, ಜನಾಂಗದ ಮಧ್ಯೆ ದ್ವೇಷವನ್ನು ಬಿತ್ತಿ, ಅದನ್ನು ಹುರಿಗಟ್ಟಿಸುತ್ತಿದ್ದರೆ, ಮತ್ತೊಂದೆಡೆ, ಭ್ರಷ್ಟಾಚಾರವನ್ನೇ ಹಾಯಿದೋಣಿಯನ್ನಾಗಿ ಮಾಡಿಕೊಂಡಿತ್ತು. ಅದೇ ಹೊತ್ತಿನೊಳಗೆ ರಾಜ್ಯದಲ್ಲಿ ರಾಹುಲ್ ಪಾದಯಾತ್ರೆ ನಡೆಸಿದರು. ಬಿಜೆಪಿ ಆಡಳಿತವನ್ನು ನೋಡಿ ರೋಸಿಹೋಗಿದ್ದ ಜನ, 2023ರ ಮೇ ತಿಂಗಳಿನಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ತಿರಸ್ಕರಿಸಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದರು. ಚುನಾವಣೆ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ರಾಹುಲ್, 'ಕಾಂಗ್ರೆಸ್ ಕಾರ್ಯಕರ್ತರು ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆದಿದ್ದಾರೆ. ಯಾವುದೇ ಜಾತಿ, ಧರ್ಮ ನೋಡದೆ ಎಲ್ಲರೊಂದಿಗೆ ಬೆರೆಯುತ್ತಾರೆ' ಎಂದು ತಮ್ಮ ಪಕ್ಷದವರ ಭವಿಷ್ಯದ ನಡೆಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದರು.

ಕಾಂಗ್ರೆಸ್ ನೇತೃತ್ವದ ಸರ್ಕಾರ ಆಡಳಿತಕ್ಕೆ ಬಂದು ಏಳು ತಿಂಗಳು ಕಳೆದುಹೋಯಿತು. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ನಿತ್ಯವೂ ಸುದ್ದಿಗಳಾಗುತ್ತಿದ್ದ ಹಿಜಾಬ್, ಆಜಾನ್, ದೇವಸ್ಥಾನಗಳ ಆವರಣದಲ್ಲಿ ಅನ್ಯಧರ್ಮೀಯರು ಅಂಗಡಿ ತೆರೆಯಲು ವಿರೋಧ, ಶಿಕ್ಷಣದ ಕೇಸರೀಕರಣದಂತಹವು ಕಡಿಮೆಯಾಗಿವೆ. ಇದರ ಬದಲು, ಜನರ ಕಷ್ಟಗಳಿಗೆ ತುಸು ಆಸರೆಯಾಗುವ 'ಗ್ಯಾರಂಟಿ'ಗಳ ಜೋಗುಳದ ಮಂದ್ರಸ್ವರ ಕಿವಿಗಾನಿಸುತ್ತಿದೆ. ಅದೇ ಹೊತ್ತಿನೊಳಗೆ, ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ, ಸಾಮೂಹಿಕ ಅತ್ಯಾಚಾರ, ದಲಿತ ಸಮುದಾಯದವರಿಗೆ ದೇವಸ್ಥಾನ ಪ್ರವೇಶ ನಿಷೇಧ, ಹಲ್ಲೆ–ಬಹಿಷ್ಕಾರದಂತಹ ಅಮಾನವೀಯ ಪ್ರಕರಣಗಳೂ ಕಿವಿಗೆ ಅಪ್ಪಳಿಸುತ್ತಿವೆ. ಗ್ಯಾರಂಟಿಗಳ ಬೆನ್ನೇರಿ ರಾಜ್ಯವನ್ನು ಅಭಿವೃದ್ಧಿಯೆಡೆಗೆ ಮುನ್ನಡೆಸಬೇಕಾದ ಇತರ ಹಲವು ಯೋಜನೆಗಳು ಬಜೆಟ್ ಪುಸ್ತಕದ ಅಕ್ಷರದೊಳಗೆ ಅವಿತು ಕುಳಿತುಕೊಂಡಿವೆ. ಸಿದ್ದರಾಮಯ್ಯ ನೇತೃತ್ವದ ಎರಡನೇ ಅವಧಿಯ ಸರ್ಕಾರದ 'ಮಧುಚಂದ್ರ'ದ ಅವಧಿಯು ಗ್ಯಾರಂಟಿಗಳ ಗುಂಗಿನೊಳಗೆ ಕಳೆದುಹೋಗಿದೆ.

ಹಿಂದಿನ 40 ವರ್ಷಗಳಲ್ಲಿ ಕಾಣದೇ ಇರುವಂತಹ ಬರಗಾಲ ರಾಜ್ಯದ ಎಲ್ಲ ತಾಲ್ಲೂಕುಗಳನ್ನೂ ಆವರಿಸಿದೆ. ಬಿತ್ತಿದ ಬೀಜ ಮೊಳೆಯದೇ ಹಾಗೂಹೀಗೂ ಚಿಗುರಿದ್ದ ಗಿಡ ಬೆಳೆಯದೇ ರೈತ ಸಂಕುಲಕ್ಕೆ ದಿಗಿಲಾಗಿದೆ. ಮನುಷ್ಯರು, ಜಾನುವಾರುಗಳು ಕುಡಿಯುವ ನೀರಿಗೆ ಪರದಾಡುವಂತಹ ಸ್ಥಿತಿ ಇದೆ. ಅನೇಕ ಜಿಲ್ಲೆಗಳ ಜನ ಗುಳೆ ಹೊರಟದ್ದಾರೆ. ಜಿಲ್ಲೆಯಲ್ಲೇ ಮೊಕ್ಕಾಂ ಹೂಡಿ, ಬರ ಪರಿಹಾರ ಕಾರ್ಯಕ್ಕೆ ಅಧಿಕಾರಿಗಳನ್ನು ಚುರುಕುಗೊಳಿಸಿ, ಜನರ ನೋವಿಗೆ ಮಿಡಿಯಬೇಕಾದ ಸಚಿವರು ಮಾತ್ರ, ಇವೆಲ್ಲದರ ನೆದರೇ ಇಲ್ಲದಂತೆ ಇದ್ದಾರೆ. ಇಲ್ಲದ ಗಂಜಿಗೆ ಉಪ್ಪು ಕೊಡುವಂತೆ ಪ್ರತಿ ಎಕರೆಗೆ ₹ 2 ಸಾವಿರ ಪರಿಹಾರ ಘೋಷಿಸಿದ್ದರೂ ಅದನ್ನು ರೈತರ ಖಾತೆಗೆ ಹಾಕಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಬಹುತೇಕ ಸಚಿವರಿಗೆ ಈ ಯಾವುದೂ ಆದ್ಯತೆಯಾಗಿಲ್ಲ. ಮತ್ತೆ ಮೂರು ಉಪ ಮುಖ್ಯಮಂತ್ರಿ ಸ್ಥಾನ ಸೃಷ್ಟಿಗೆ ಬೇಡಿಕೆ, ವರ್ಗಾವಣೆ, ಹಿಂದಿನ ಸರ್ಕಾರದ ಅವಧಿಯಲ್ಲಿನ ಕಾಮಗಾರಿಗಳ ಬಿಲ್ ಪಾವತಿಗೆ ಕಮಿಷನ್ ಪಡೆಯುವುದರಲ್ಲೇ ಹೆಚ್ಚಿನ ಸಂಖ್ಯೆಯ ಸಚಿವರು ಮಗ್ನರಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಮ್ಮ ಸಚಿವ ಸಂಪುಟದ ಮೇಲಿನ ಹಿಡಿತ ತಪ್ಪಿರುವುದಕ್ಕೆ ಬೇರೆ ಸಾಕ್ಷ್ಯ ಬೇಕಿಲ್ಲ.

'ಮೂರು ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಪಕ್ಷದ ಮುಂದಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪದೇಪದೇ ಹೇಳಿದ್ದಾರೆ. ಹಾಗಿದ್ದರೂ 15 ದಿನಗಳಿಗೊಮ್ಮೆ ಕೆಲವು ಸಚಿವರು ಈ ವಿಷಯವೇ ಚರ್ಚೆಯ ಮುಂಚೂಣಿಯಲ್ಲಿ ಇರುವಂತೆ ನೋಡಿಕೊಂಡಿದ್ದಾರೆ. ಎಐಸಿಸಿ ಅಧ್ಯಕ್ಷರ ಮಾತಿಗೆ ಕಿಮ್ಮತ್ತಿಲ್ಲ. ಕಾಂಗ್ರೆಸ್ ಪಕ್ಷದೊಳಗೆ ತಾಂಡವವಾಡುತ್ತಿರುವ ಅರಾಜಕತೆಗೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ.

ಬಿಜೆಪಿಯಲ್ಲಿ ಬಣ ರಾಜಕೀಯವೇ ಮೇಲುಗೈ ಪಡೆದು, ಆಡಳಿತ ಯಂತ್ರ ಹದಗೆಡಲು ಕಾರಣವಾಗಿತ್ತು. ಕಾಂಗ್ರೆಸ್ ಅಧಿಕಾರದ ಅವಧಿಯಲ್ಲೂ ಅದು ಮುಂದುವರಿದಿದೆ. ಬಿಜೆಪಿಯಲ್ಲಿ ಅಂದು ಮೂರು ಬಣಗಳಿದ್ದರೆ ಕಾಂಗ್ರೆಸ್‌ನಲ್ಲಿ ಐದಾರು ಬಣಗಳಿವೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇಬ್ಬರೂ ಅಧಿಕಾರಕೇಂದ್ರ ತಮ್ಮ ಬಳಿಯೇ ಇರಬೇಕು ಎಂದು ಪೈಪೋಟಿಗೆ ಇಳಿದಿದ್ದಾರೆ. ಯಾರು ಯಾರನ್ನು ಕೆಡವುತ್ತಾರೆ, ಯಾರಿಗೆ ಯಾರು ಮರ್ಮದೇಟು ಕೊಡುತ್ತಾರೆ ಎಂಬುದನ್ನು ಕಾಲವೇ ಬಲ್ಲದು. ತಾವೊಬ್ಬರೇ ಉಪಮುಖ್ಯಮಂತ್ರಿಯಾಗಿರಬೇಕು ಎಂದು ಪಟ್ಟು ಹಿಡಿದು, ಎರಡನೇ ಶಕ್ತಿಕೇಂದ್ರವಾಗಿ ತಮ್ಮ ಪ್ರಭಾವಳಿಯನ್ನು ಬೆಳೆಸಿಕೊಳ್ಳುತ್ತಿರುವ ಶಿವಕುಮಾರ್ ಅವರಿಗೆ ಎದಿರೇಟು ಕೊಡಲು ಮತ್ತೊಂದು ಬಣ ಸಜ್ಜಾಗಿದೆ. ಸಚಿವರಾದ ಸತೀಶ ಜಾರಕಿಹೊಳಿ, ಜಿ.ಪರಮೇಶ್ವರ, ಎಚ್.ಸಿ.ಮಹದೇವಪ್ಪ, ಕೆ.ಎನ್.ರಾಜಣ್ಣ ಈ ಬಣದ ಮುಂಚೂಣಿಯಲ್ಲಿದ್ದಾರೆ.

ಲೋಕಸಭೆ ಚುನಾವಣೆ ಬಳಿಕ ಮುಖ್ಯಮಂತ್ರಿ ಗಾದಿಗೆ ಹಟ ತೊಡಬಹುದಾದ ಶಿವಕುಮಾರ್ ಅವರನ್ನು ಕಟ್ಟಿಹಾಕಲು ಹೆಚ್ಚುವರಿ ಉಪಮುಖ್ಯಮಂತ್ರಿ ಸ್ಥಾನಗಳ ಸೃಷ್ಟಿಯ ಬೇಡಿಕೆಯನ್ನು ಮುನ್ನೆಲೆಗೆ ತರಲು ಆರಂಭದಲ್ಲಿ ಸಿದ್ದರಾಮಯ್ಯ ಅವರೇ ಕೆಲವರನ್ನು ಹುರಿದುಂಬಿಸಿದ್ದರು ಎಂಬ ಚರ್ಚೆ ಪಕ್ಷದ ವಲಯದಲ್ಲಿತ್ತು. ಆದರೆ, ಅದೀಗ ಅವರ ಕೈಮೀರಿ, ಮತ್ತೊಂದು ಬಲಿಷ್ಠ ಬಣದ ಸ್ವರೂಪ ಪಡೆಯುವತ್ತ ಹೊರಳಿದೆ. ಯಾರ ಉಸಾಬರಿಯೂ ಬೇಡವೆಂಬ ತಟಸ್ಥ ಬಣವೂ ಇದೆ.

ಬಿಜೆಪಿ ದುರಾಡಳಿತದ ಕಾರಣಕ್ಕೆ ಅನಾಯಾಸವಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, 33 ಜನರಿಗೆ ಸಚಿವಗಿರಿ ಕೊಟ್ಟಿದೆ. ಇರುವ ಅಧಿಕಾರವನ್ನು ಜನಕಲ್ಯಾಣಕ್ಕೆ ಬಳಸಬೇಕಾದವರು, ಅದು ಸಾಲದು, ಉಪಮುಖ್ಯಮಂತ್ರಿ ಸ್ಥಾನ ಬೇಕು ಎಂದು ಕ್ಯಾತೆ ತೆಗೆಯುತ್ತಾ ಕೂರುವುದು ಒಳ್ಳೆಯ ಬೆಳವಣಿಗೆಯಲ್ಲ. ಒಬ್ಬರ ಖಾತೆಯಲ್ಲಿ ಮತ್ತೊಬ್ಬರು ಕೈ–ಮೂಗು ತೂರಿಸುವುದು ಸರಿಯಾದುದಲ್ಲ. ಜನಹಿತವೇ ಮುಖ್ಯವಾಗಬೇಕು. ಕಾರ್ಯಕರ್ತರ ಬೆನ್ನಿಗೆ ನಿಲ್ಲಬೇಕು. ಸಚಿವರು ಅಧಿಕಾರದ ಪೈಪೋಟಿಗೆ ಬಿದ್ದಿರುವುದರಿಂದ ಅಭಿವೃದ್ಧಿ ಗೌಣವಾಗಿದೆ. ಸಚಿವರು ಕೈಗೆ ಸಿಗುವುದಿಲ್ಲ ಎಂದು ಅವರ ಪಕ್ಷದ ಶಾಸಕರೇ ತಿರುಗಿಬಿದ್ದಿದ್ದಾರೆ.

ಸಿದ್ದರಾಮಯ್ಯ ಅವರು ಜುಲೈನಲ್ಲಿ ₹ 3,27,747 ಕೋಟಿ ಮೊತ್ತದ ಹೊಸ ಬಜೆಟ್ ಮಂಡಿಸಿದ್ದರು. ಅದರಲ್ಲಿ ನೌಕರರ ವೇತನ, ಸಚಿವರಿಗೆ ಸವಲತ್ತು, ಆಡಳಿತ ವೆಚ್ಚ ಹಾಗೂ ವಿವಿಧ ಯೋಜನೆಗಳಿಗೆ ನೀಡಲೇಬೇಕಾದ ಬದ್ಧ ವೆಚ್ಚದ ಮೊತ್ತ ₹ 2,50,933 ಕೋಟಿಯಷ್ಟಿತ್ತು. ಅಭಿವೃದ್ಧಿ ಕಾಮಗಾರಿಗಳಿಗಾಗಿ ಬಂಡವಾಳ ವೆಚ್ಚದ ರೂಪದಲ್ಲಿ ₹ 54,374 ಕೋಟಿ ತೆಗೆದಿರಿಸಿದ್ದರು. ಅದರಲ್ಲಿ ಬಹುಪಾಲು ಖರ್ಚಾದಂತಿಲ್ಲ. ಗ್ಯಾರಂಟಿಗಳು, ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್‌ಗಳು ಹಸಿದವರು, ಅಬಲರಿಗೆ ರಕ್ತ ಮಾಂಸ ತುಂಬಲು, ಜೀವ ಉಳಿಸಿಕೊಳ್ಳಲು ಬೇಕು. ಇವಕ್ಕೆಲ್ಲ ನಿಯತವಾಗಿ ಆದಾಯ ಬಂದು ಬೊಕ್ಕಸ ತುಂಬಬೇಕಾದರೆ ನೀರಾವರಿ, ಮೂಲಸೌಕರ್ಯದಂತಹ ಅಭಿವೃದ್ಧಿ ಯೋಜನೆಗಳು ಜತೆಜತೆಗೆ ನಡೆಯಬೇಕು. ಆಗ ಮಾತ್ರ ನಾಡಿನ ಸಂಪತ್ತು ವೃದ್ಧಿಯಾದೀತು. ಈ ದಿಸೆಯಲ್ಲಿ ಯೋಚಿಸಿ ಕಾರ್ಯಪ್ರವೃತ್ತವಾಗದಿದ್ದರೆ, ಮುಂಬರುವ ವರ್ಷಗಳಲ್ಲಿ ಸಾಲವೊಂದನ್ನೇ ನೆಚ್ಚಿಕೊಳ್ಳಬೇಕಾದ ಪರಿಸ್ಥಿತಿ ಬಂದೊದಗಬಹುದು.

ಚುನಾವಣೆ ಸೋಲಿನ ನಂತರ ಮಲಗಿದ್ದ ಬಿಜೆಪಿ, ಬಿ.ವೈ.ವಿಜಯೇಂದ್ರ ರಾಜ್ಯ ಘಟಕದ ಅಧ್ಯಕ್ಷರಾದ ಬಳಿಕ ಮೈಕೊಡವಿ ಎದ್ದಿದೆ. 135 ಶಾಸಕ ಬಲದ ಕಾಂಗ್ರೆಸ್, ಬಣ ಜಗಳ, ಅಧಿಕಾರದ ಪೈಪೋಟಿಯಲ್ಲಿ ಬಿದ್ದು ಸೊರಗಿದೆ. ದೇಶದ ಜನಪದರನ್ನು ಜೋಡಿಸುವಲ್ಲಿ ತೊಡಗಿರುವ ರಾಹುಲ್ ಗಾಂಧಿ, ತಮ್ಮ ಪಕ್ಷದ ರಾಜ್ಯ ನಾಯಕರನ್ನು ಜೋಡಿಸುವ ಕೆಲಸಕ್ಕೆ ಕೈಹಾಕದಿದ್ದರೆ, ಲೋಕಸಭೆ ಬಳಿಕ ಮುಖ ಉಳಿಸಿಕೊಳ್ಳಲು ಅಧಿಕಾರಸ್ಥರು ಹೆಣಗಾಡಬೇಕಾದೀತು. ಕಾಂಗ್ರೆಸ್‌ನ ರಾಜ್ಯ ಘಟಕದ ಸದ್ಯದ ಸ್ಥಿತಿಗೆ ವಿಶೇಷ ಕನ್ನಡಿಯನ್ನೇನೂ ರಾಹುಲ್ ನೋಡಬೇಕಿಲ್ಲ, ಪಕ್ಷದ ನಾಯಕರ ಮುಖ ನೋಡಿದರೆ ಸಾಕು!

ಚುರುಮುರಿ



ಸಂಕ್ರಾಂತಿ ಫಲಗಳು

• ಲಿಂಗರಾಜು ಡಿ.ಎಸ್.

ಸಂಕ್ರಾಂತಿ ಪುರುಷನು ಆಯುಧಗಳನ್ನು ಹಿಡಿದಿದ್ದು, ದೇಶಗಳ ನಡುವಿನ ಯುದ್ಧವು ದೇಶದ ಜನರ ಬದುಕಿನ ಮೇಲೆ ತೀವ್ರ ಪ್ರಭಾವ ಬೀರಲಿದೆ. ಉತ್ತರ ದಿಕ್ಕಿಗೆ ಶುಭ ಫಲ, ದಕ್ಷಿಣಕ್ಕೆ ಅನುದಾನ ಖೋತಾ, ಗಳಿಕೆ ಮಧ್ಯಮ. ಸಂಕ್ರಾಂತಿ ಪುರುಷನಿಗೆ ನವಕರವಿದ್ದು ಕಳ್ಳ-ಸುಳ್ಳ ಅಧಿಕಾರಿಗಳಿಗೆ ಅನುಕೂಲವು. ಲೋಕಸೆಣಸಾಟದಲ್ಲಿ ಗಾಂಧಿ ಮಂತ್ರ, ರಾಮ ಜಪ ಶುಭ ಫಲ ತಂದಾವು. ಮಣಿಪುರದಲ್ಲಿ ಗೊಂದಲಗಳು ಮುಂದುವರಿಯುವುವು. ಅರುಣಾಚಲದಲ್ಲಿ ಡ್ರಾಗನ್ ಕಾಟವು. ಉಗ್ರವಾದಿ ಗಳಿಗೆ ತೀವ್ರ ಹಿನ್ನಡೆಯಾಗಲಿದೆ. ದೇಶದ ಕುಸ್ತಿಪಟುಗಳು ಅಕಾರಣವಾಗಿ ಚಿತ್ತಾಗುವರು. ವಿರೋಧ ಪಕ್ಷಗಳ ಮುಸುಕಿನ ಗುದ್ದಾಟದಿಂದ ದಿಲ್ಲಿ ಮಹಾರಾಜರಿಗೆ ಪಕ್ಷ ಸೌಖ್ಯ ಹೆಚ್ಚಲಿದೆ.

ಭವಿಷ್ಯದ ದಿನಗಳ ಸೋಲಾಯಮಾನ ಸ್ಥಿತಿಯ ನಿರೀಕ್ಷೆಯಿಂದ ರಾಜ್ಯ ನಾಯಕರುಗಳಿಗೆ ಚಿಂತೆಯು. ಅಧಿಕಾರದ ಕನವರಿಕೆಯಲ್ಲಿ ನಿದ್ರೆ ನಾಸ್ತಿ. ತೆನೆ-ಕಮಲಗಳ ಸಾತಿವ್ರತ್ಯಕ್ಕೆ ಕಠೋರ ಪರೀಕ್ಷೆಯು. ಕೇಂದ್ರ ಮಂತ್ರಿ ನಿರೀಕ್ಷೆಯಲ್ಲಿ ಪಿತೃಪಕ್ಷವಿದ್ದರೆ ಮಾತೃಪಕ್ಷಕ್ಕೆ ಕಷ್ಟದ ದಿನಗಳು ಎದುರಾಗಲಿವೆ. ಗ್ಯಾರಂಟಿಗಳ ಹೊಂಗನಸಲ್ಲಿ ಇರುವ ರಾಜಕಾರಣಿಗಳಿಗೆ ರೈತರ ಹಾಗೂ ಜನರ ಕೂಗು ಇಂಪಾದ ಸಂಗೀತದಂತೆ ಕೇಳಿಸೀತು. ಡಿಸಿಎಂ ಆಕಾಂಕ್ಷಿಗಳ ನಿರಂತರ ಡ್ರಾಮಾವತಾರದಿಂದ ಪಕ್ಷಕ್ಕೆ ಮಾನಹಾನಿ. ವಿರೋಧಿ ಗಣಗಳು ಪರಸ್ಪರ ಕತ್ತು ಕೊಯ್ದಾಟದಲ್ಲಿ ಮಗ್ನವಾಗಿರುತ್ತವೆ.

ಜನಸಾಮಾನ್ಯರು ನಾನಾ ವಿದೇಶಿ ಕಾಯಿಲೆಗಳಿಂದ ನರಳುವರು. ದುಬಾರಿಯಾಗುವ ಔಷಧಿ ಬೆಲೆಗಳಿಂದ ತಯಾರಕರು ನೆಮ್ಮದಿ ಹೊಂದುವರು. ಕಾಪಿಟ್ಟ ಹಣಕ್ಕೆ ಸೈಬರ್ ದುರುಳರು ಕನ್ನ ಹಾಕುವ ಪ್ರವೃತ್ತಿ ಮುಂದುವರಿಯಲಿದೆ. ಲಂಚವು ಭೀಕರ ರೂಪ ತಾಳಲಿದೆ. ಭ್ರಷ್ಟರ ತನಿಖೆಗಳಿಗೆ ಸರ್ಕಾರದ ನಿರಾಕರಣಾ ವ್ಯಾಧಿ ಮುಂದುವರಿಯಲಿದೆ. ಜನೋಪಯೋಗಿ ಕಾರ್ಯಗಳು ಸಾಡೆಸಾತಿಯ ಪ್ರಭಾವದಿಂದ ಸ್ಥಗಿತಗೊಳ್ಳಲಿವೆ. ಗ್ರಹರಾಶಿಯ ಪ್ರಕಾರ ಗುರುವು ಒಂದನೇ ಮನೆಯಲ್ಲಿರುವುದರಿಂದ ಬಾಹ್ಯಾಕಾಶ ಕ್ಷೇತ್ರದಲ್ಲಿ ದೇಶಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಬರಲಿದೆ.

ಸಂಗತ

ಲಕ್ಷದ್ವೀಪ ಭೇಟಿ ಯೋಜಿಸುವ ಮುನ್ನ...

ಮೋಜು ಮಸ್ತಿಯ ಹೆಸರಿನಲ್ಲಿ ಪ್ರವಾಸಿ ತಾಣಗಳನ್ನು ಹಾಳುಗೆಡಹುವ ಮನುಷ್ಯ, ಆ ಸ್ಥಳಗಳ ಸೊಬಗು ಕಾಯ್ದುಕೊಳ್ಳಬೇಕಾದ ಬಹುದೊಡ್ಡ ಹೊಣೆಗಾರಿಕೆಯನ್ನು ಕಡೆಗಣಿಸುತ್ತಿದ್ದಾನೆ

• ಡಾ. ಲಕ್ಷ್ಮಣ ವಿ.ಎ.

'ಚೇಸಿಂಗ್ ವಾಟರ್‌ಫಾಲ್ಸ್' ಎಂಬ ಹಾಲಿವುಡ್ ಚಿತ್ರ ಇತ್ತೀಚೆಗೆ ಬಹುವಾಗಿ ಕಾಡಿತು. ಈ ಚಿತ್ರದ ನಾಯಕಿ ಖ್ಯಾತ ಪತ್ರಿಕೆಯೊಂದರ ಯುವ ಛಾಯಾಗ್ರಾಹಕಿ. ಹೇಗಾದರೂ ಮಾಡಿ ವೃತ್ತಿಬದುಕಿನಲ್ಲಿ ಹೆಸರು ಮಾಡಬೇಕೆಂಬ ಹಂಬಲ ಅವಳದು. ಅವಳ ಅದೃಷ್ಟವೆಂಬಂತೆ, ಆ ಪತ್ರಿಕೆಯ ಹಿರಿಯ ಛಾಯಾಗ್ರಾಹಕ ಅನಾರೋಗ್ಯಪೀಡಿತನಾದಾಗ, ಆತ ಮಾಡುತ್ತಿದ್ದ ಛಾಯಾಗ್ರಹಣದ ಹೊಣೆ ಅನಾಯಾಸವಾಗಿ ಇವಳ ಹೆಗಲೇರುತ್ತದೆ.

ಈ ಹೊಸ ಸವಾಲಿನ ಭಾಗವಾಗಿ, ಜಗತ್ತಿಗೆ ಅನಾಮಿಕವಾಗಿ ಉಳಿದ, ಬರೀ ಪುರಾಣ, ಕತೆಗಳಲ್ಲಿ ಮಾತ್ರ ಕೇಳಿದ್ದಂತಹ ಜಲಪಾತಗಳ ಚಿತ್ರಬೇಟೆಗೆ ಹೊರಡಲು ಅವಳು ಅನುವಾಗುತ್ತಾಳೆ. ದಟ್ಟ ಕಾಡಿನೊಳಗೆ ಅವಳ ಗೈಡ್ ಆಗಿ ಬರುವ ಯುವಕನೊಂದಿಗೆ ಅವಳ ಪ್ರೇಮ ಚಿಗುರಿ ಕಥೆ ಅನೇಕ ತಿರುವುಗಳನ್ನು ಪಡೆಯುತ್ತದೆ. ಆತನೊಂದಿಗೆ ಸೇರಿ ಅಪರೂಪದ ಜಲಪಾತಗಳನ್ನು ಅನ್ವೇಷಿಸಿ, ಅವುಗಳ ಅದ್ಭುತ ಸೊಬಗಿನ ಅನನ್ಯ ಚಿತ್ರಗಳನ್ನು ಆಕೆ ಸೆರೆಹಿಡಿಯುತ್ತಾಳೆ. ಆದರೆ ನಂತರ, ಆ ಚಿತ್ರಗಳನ್ನು ನಾಗರಿಕ ಜಗತ್ತಿಗೆ ತೋರಿಸಲು ಆ ಜೋಡಿ ಹಿಂದೇಟು ಹಾಕುತ್ತದೆ.

ಆ ಸೊಬಗಿನ ಖನಿಗಳು ಜನರ ಕಣ್ಣಿಗೆ ಬೀಳದೆ ಅನಾಮಿಕವಾಗಿಯೇ ಉಳಿಯಲಿ ಎಂಬ ಇವರಿಬ್ಬರ ಆಶಯ ಅತ್ಯಂತ ಗಮನಾರ್ಹ. ತಮಗೆ ಸಿಗಬಹುದಾಗಿದ್ದ ಅಪಾರ ಜನಮನ್ನಣೆ, ಸಂಪತ್ತು, ವೃತ್ತಿ ಬದುಕಿನ ಉನ್ನತ ಸ್ಥಾನಗಳನ್ನು ನಿರಾಕರಿಸಿ, ಮನುಷ್ಯನಿಂದ ದೂರವಾಗಿರುವ ಜಲಪಾತಗಳ ಪಾವಿತ್ರ್ಯ ಕಾಪಾಡುವ ಈ ಚಿತ್ರದ ಕಥಾಹಂದರ ಈ ದಿನಮಾನಗಳಲ್ಲಿ ಮೇಲ್ನೋಟಕ್ಕೆ ಒಂದು ಹಗಲುಗನಸಿನಂತೆ ಭಾಸವಾಗುತ್ತದೆ. ಆದರೂ ಇಂತಹದ್ದೊಂದು ಸಾಧ್ಯತೆಯನ್ನು ನಮ್ಮ ಎದುರಿಗಿಡುವ ಸಿನಿಮಾ, ನಿಸರ್ಗಪ್ರಿಯರನ್ನು ಸಕಾರಾತ್ಮಕ ಚಿಂತನೆಗೆ ಹಚ್ಚುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಸಹ್ಯಾದ್ರಿ ಶ್ರೇಣಿಯಲ್ಲಿರುವ ಯಾಣ ಕೂಡ ಇಂತಹುದೇ ಒಂದು ಸ್ಥಳವಾಗಿತ್ತು. 'ನಮ್ಮೂರ ಮಂದಾರ ಹೂವೇ' ಚಿತ್ರ ಬಿಡುಗಡೆಯಾದ ನಂತರ ಇದು ಹೆಚ್ಚು ಪ್ರಸಿದ್ಧಿಗೆ ಬಂದಿತು. ಬಳಿಕ ಇಲ್ಲಿಗೆ ಭೇಟಿ ನೀಡುವ ಚಾರಣಿಗರ ಸಂಖ್ಯೆಯೂ ಹೆಚ್ಚಾಗಿ, ಇದ್ದಕ್ಕಿದ್ದಂತೆ ಮನುಷ್ಯನ ಮೋಜಿನ ತಾಣವಾಗಿ ಬದಲಾದ ಯಾಣ ತನ್ನ ಮೊದಲಿನ ಚೆಲುವನ್ನು ಕಳೆದುಕೊಂಡಿತು.

ಸಹ್ಯಾದ್ರಿ ಶ್ರೇಣಿಯ ಅಪೂರ್ವ ಚೆಲುವಿನ ಇನ್ನೊಂದು ತಾಣ ದೂಧ್‌ಸಾಗರ ಜಲಪಾತ. ಇಲ್ಲಿಗೆ ಸೂಕ್ತ ರಸ್ತೆ ವ್ಯವಸ್ಥೆ ಇಲ್ಲದ ಕಾರಣಕ್ಕೆ ಬಹುದಿನಗಳವರೆಗೆ ಇದು ಜನರ ಕಣ್ಣಿಗೆ ಬಿದ್ದಿರಲಿಲ್ಲ. ಆದರೆ ಯಾವಾಗ 'ಚೆನ್ನೈ ಎಕ್ಸ್‌ಪ್ರೆಸ್' ಹಿಂದಿ ಚಲನಚಿತ್ರದ ಮೂಲಕ ಪ್ರಸಿದ್ಧಿಗೆ ಬಂದಿತೋ ಪ್ರವಾಸಿಗರ ದಂಡು ಇಲ್ಲಿಗೂ ಲಗ್ಗೆಯಿಡಲು ಶುರು ಮಾಡಿತು.

ಇಲ್ಲಿ ಹಾದುಹೋಗುವ ರೈಲು ಹಳಿಗಳ ಮೇಲೆ ನಡೆದುಕೊಂಡು ಸಾಗುವ ಚಾರಣಿಗರನ್ನು ಗಮನದಲ್ಲಿಟ್ಟು ಹಾಗೂ ಬೆಟ್ಟದ ಮೇಲಿನ ಜಾರುವ ಹಾವಸೆಯ ಕಾರಣದಿಂದ, ಮುಂಗಾರಿನ ಅವಧಿಯಲ್ಲಿ ಇಲ್ಲಿಗೆ ಭೇಟಿ ನೀಡುವುದನ್ನು ಗೋವಾ ಪ್ರವಾಸೋದ್ಯಮ ಇಲಾಖೆ ನಿಷೇಧಿಸಿದೆ. ಆದರೂ ಪ್ರತಿವರ್ಷ ಈ ನಿಯಮವನ್ನು ಉಲ್ಲಂಘಿಸುವ ಪ್ರವಾಸಿಗರ ಅತಿಕ್ರಮಣ ಸ್ವಾಭಾವಿಕ ಎಂಬಂತಾಗಿದೆ. ಸುಸ್ಥಿರ, ಪರಿಸರಪೂರಕ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ನೀತಿ ನಿಯಮಗಳಿದ್ದರೂ ಇಂತಹ ಕಡೆಯಲ್ಲೆಲ್ಲಾ ಮನುಷ್ಯನ ಮೋಜಿನ ಪ್ರವಾಸದ ಹೆಸರಿನಲ್ಲಿ ವ್ಯಾಪಾರೀಕರಣ ಎಗ್ಗಿಲ್ಲದೆ ನಡೆಯುವುದನ್ನು ನೋಡುತ್ತಿದ್ದೇವೆ.

ಅತಿ ಸೂಕ್ಷ್ಮ ಪರಿಸರ ವಲಯದಲ್ಲಿ ಕಂಡಕಂಡಲ್ಲಿ ಉಗುಳುವವರು, ಬೆಂಕಿ ಹಾಕಿ, ಜೋರಾಗಿ ಧ್ವನಿವರ್ಧಕ ಹಾಕಿಕೊಂಡು ಕುಣಿಯುವವರಲ್ಲಿ ಪಾಪಪ್ರಜ್ಞೆಯ ಒಂದಂಶವೂ ಕಾಣುವುದಿಲ್ಲ. ಸೂಕ್ಷ್ಮ ಪರಿಸರ ತಾಣಗಳ ಮೇಲೆ ಮನುಷ್ಯನ ಹೆಜ್ಜೆಗುರುತು ಪ್ರಕೃತಿಗೆ ಎಷ್ಟೊಂದು ಮಾರಕವಾಗಬಲ್ಲದು ಎಂಬುದಕ್ಕೆ, ಕೊಡಗಿನ ಬೆಟ್ಟಗಳನ್ನು ಕಡಿದು 'ಹೋಂ ಸ್ಟೇ'ಗಳನ್ನಾಗಿ ಪರಿವರ್ತಿಸಿರುವುದರ ಅಪಾಯ ನಮ್ಮ ಕಣ್ಣೆದುರಿಗಿದೆ. ಮುಳ್ಳಯ್ಯನಗಿರಿಯಲ್ಲಿ ಅರಳಿದ ನೀಲಿ ಕುರಂಜಿ ಹೂವುಗಳ ಗಿಡಗಳನ್ನು ಬುಡಸಮೇತ ಕಿತ್ತು ಕಾರಿನೊಳಕ್ಕೆ ತುಂಬಿಕೊಂಡು ಹೊರಟ ಮನುಷ್ಯನ ಲಾಲಸೆಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಕಂಡು, ಕಂಗಾಲಾಗಿದ್ದೇವೆ. ಕುರಂಜಿ ಹೂವರಳಿದ ಬೆಟ್ಟದಲ್ಲಿ, ವಾರಾಂತ್ಯದಲ್ಲಿ ಕಾರುಗಳಿಂದಾಗುವ ಟ್ರಾಫಿಕ್ ಜಾಮ್ ನೋಡಿದರೆ, ಪರಿಸ್ಥಿತಿ ಎಲ್ಲಿಗೆ ಮುಟ್ಟಿದೆ ಎಂಬುದು ಅರ್ಥವಾಗಬಹುದು.

ಸುಮಾರು ಅರವತ್ತೆಂಟು ಸಾವಿರದಷ್ಟು ಜನಸಂಖ್ಯೆಯನ್ನಷ್ಟೇ ಹೊಂದಿರುವ, ದಕ್ಷಿಣ ಭಾರತದ ತೀರಪ್ರದೇಶದ 'ಲಕ್ಷದ್ವೀಪ'ವೆಂಬ ನಡುಗಡ್ಡೆ ಇದ್ದಕ್ಕಿದ್ದಂತೆ ಜಗತ್ತಿನ ಕಣ್ಣಿಗೆ ಬಿದ್ದಿದೆ. ಸೀಮಿತ ಪ್ರವಾಸಿಗರಿಗೆ ಮಾತ್ರ ಅನುಕೂಲಕರವಾಗಿರುವ ಈ ಪ್ರದೇಶ ತನ್ನ ಈ ಜನಪ್ರಿಯತೆಯಿಂದ 'ಪ್ರವಾಸಿಗರ ಪ್ರವಾಹ'ದಿಂದ ಅಪಾಯ ಎದುರಿಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಪಶ್ಚಿಮಘಟ್ಟದಂತೆಯೇ ಈ ತೀರದ ನಡುಗಡ್ಡೆಯಲ್ಲಿರುವ ಅಪರೂಪದ ಹವಳದ ದಂಡೆ, ಡಾಲ್ಫಿನ್, ಆಕ್ಟೋಪಸ್‌ನಂತಹ ಜೀವವೈವಿಧ್ಯ ಹಾಗೂ ಸ್ಥಳೀಯರ ಸಾಮಾಜಿಕ, ಸಾಂಸ್ಕೃತಿಕ ಅಸ್ಮಿತೆ, ಅನನ್ಯತೆಯನ್ನು ಕಾಪಾಡುವುದು ಕೂಡ ನಮ್ಮ ಮುಂದಿರುವ ದೊಡ್ಡ ಸವಾಲು.

ಯಾವುದೇ ಒಂದು ಸೂಕ್ಷ್ಮ ಪರಿಸರದಲ್ಲಿ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ಮುನ್ನ, ಪರಿಸರಸ್ನೇಹಿಯಾದ ಸ್ಥಳೀಯ ಬುಡಕಟ್ಟುಗಳ ಬದುಕಿಗೆ ಧಕ್ಕೆಯಾಗದಂತೆ ಯೋಜನೆಗಳನ್ನು ರೂಪಿಸುವುದು ಅವಶ್ಯ. ಬರೀ ಮೋಜು ಮಸ್ತಿಗೆಂದೇ ಬರುವ ತೀರದಾಚೆಯ ಪ್ರವಾಸಿಗರ ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯೂ ಇಂತಹ ತಾಣಗಳ ಸೊಬಗು ಕಾಯ್ದುಕೊಳ್ಳುವಲ್ಲಿ ಮುಖ್ಯವಾಗುತ್ತದೆ.

ವಾಚಕರ ವಾಣಿ

ಮುಹೂರ್ತ ಪದಕ್ಕೆ ಅಪಾರ್ಥ ಏಕೆ?

ಕೆಲವು ಸುದ್ದಿ ಮಾಧ್ಯಮಗಳು ಸುದ್ದಿಗೆ ರೋಚಕತೆ ತುಂಬುವ ಸಲುವಾಗಿ 'ಮುಹೂರ್ತ' ಎಂಬ ಪದವನ್ನು ಅಪರಾಧ ಕೃತ್ಯಗಳ ವಿವರಣೆಗೆ ಬಳಸುತ್ತಿವೆ. ಅನೈತಿಕ ಸಂಬಂಧಕ್ಕೆ ಅಡ್ಡಿಯಾದ ಗಂಡನಿಗೆ ಮುಹೂರ್ತ ಇಟ್ಟ ಪತ್ನಿ, ಪರಪುರುಷನ ಸಹವಾಸದಲ್ಲಿದ್ದ ಹೆಂಡತಿಗೆ ಮುಹೂರ್ತ ಇಟ್ಟ ಗಂಡ... ಹೀಗೆ ವಿವಿಧ ಬಗೆಯ ದುರ್ಘಟನೆಗಳನ್ನು ವಿವರಿಸಲು ಈ ಪದ ಬಳಕೆಯಾಗುತ್ತಿದೆ. ಶುಭಕಾರ್ಯಗಳಿಗೆ ಬಳಕೆಯಾಗುತ್ತಿದ್ದ ಮುಹೂರ್ತ ಪದವನ್ನು ಇಂತಹ ಪ್ರಕರಣಗಳಿಗೆ ಬಳಸುವಂತಹ ಪರಿಪಾಟ ನಿಲ್ಲಲಿ. 'ಮುಹೂರ್ತ' ತನ್ನ ಶ್ರೇಷ್ಠತೆಯನ್ನು ಉಳಿಸಿಕೊಳ್ಳಲಿ.

ಮಲ್ಲಿಕಾರ್ಜುನ, ಸುರಧೇನುಪುರ

ಯುವ ರೈತರಿಗೆ ನಾನಾ ಕಾಟ...

'ಯುವ ರೈತರಿಗೆ ಬೇಕು ಸಂಗಾತಿ' ಎಂಬ ಲೇಖನ (ಪ್ರ.ವಾ., ಜ. 14), ಸಮಯೋಚಿತವಾಗಿದೆ. ಮುಖ್ಯವಾಗಿ, ನಮ್ಮ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ನಗರ ಪ್ರದೇಶದ ಬಗೆಗಿರುವ ಆಕರ್ಷಣೆ, ತಮ್ಮ ಹೊಲ, ಗದ್ದೆ, ತೋಟಗಳಿಗೆ ಹೋಗಿ ಬರುವಂತಹ ಮನಃಸ್ಥಿತಿ ಅವರಿಗೆ ಇಲ್ಲದಿರುವುದು, ಕಠಿಣ ಪರಿಶ್ರಮಕ್ಕೆ ಮೈ ಬಗ್ಗದಿರುವುದು, ಯುವ ರೈತರನ್ನು ಮದುವೆ ಮಾಡಿಕೊಂಡರೆ ಹಳ್ಳಿಯ ಜೀವನವೇ ಗತಿಯಾಗುತ್ತದೆ, ಮುಂದೆ ಭವಿಷ್ಯವೇ ಇಲ್ಲ ಎಂಬ ತಪ್ಪುಕಲ್ಪನೆ ಹಾಗೂ ಕೂಡು ಕುಟುಂಬದಲ್ಲಿ ಅತ್ತೆ, ಮಾವನನ್ನು ನೋಡಿಕೊಳ್ಳಬೇಕಲ್ಲ ಎಂಬ ಚಿಂತೆ, ನಗರ ಪ್ರದೇಶದಲ್ಲಿ ಯಾವುದಾದರೂ ಸಣ್ಣಪುಟ್ಟ ಕೆಲಸದಲ್ಲಿರುವ ಹುಡುಗನನ್ನು ಮದುವೆ ಮಾಡಿಕೊಂಡರೂ ಸುಖಕರ ಜೀವನ ನಡೆಸಬಹುದೆಂಬ ಭ್ರಮೆ, ಆಧುನಿಕವಾದ ರೀತಿಯಲ್ಲಿ ಸ್ವಚ್ಛಂದವಾಗಿ ಬದುಕಬೇಕೆಂದು ಕನಸು ಕಾಣುವುದು ಇಂತಹ ಸ್ಥಿತಿಗೆ ಪ್ರಮುಖ ಕಾರಣಗಳಾಗಿವೆ.

ಇನ್ನು ಗ್ರಾಮೀಣ ಪ್ರದೇಶದ ರೈತರ ಸ್ಥಿತಿ ಹೇಗಿದೆ ಎಂದರೆ, 25 ಎಕರೆ ಜಮೀನು ಇದ್ದರೂ ಖಚಿತ ಆದಾಯದ ನಿರೀಕ್ಷೆ ಇಲ್ಲದಿರುವುದು, ಪ್ರಕೃತಿ ವಿಕೋಪ, ಕೃಷಿ ಕಾರ್ಮಿಕರ ಕೊರತೆ, ವರ್ಷದ 365 ದಿನವೂ ವ್ಯವಸಾಯ-ದಲ್ಲೇ ನಿರತವಾಗಿರಬೇಕಾದ ಅನಿವಾರ್ಯ, ಕೃಷಿಯು ಆದಾಯ ತರುವ ಮೂಲವಾಗಿಲ್ಲದಿರುವುದು, ಹಳ್ಳಿಗಳಲ್ಲಿರುವ ಕೆಟ್ಟ ರಾಜಕಾರಣ, ಅಸೂಯೆಯಂತಹ ಕಾರಣಗಳಿಂದ ಹೆಣ್ಣುಮಕ್ಕಳ ಪೋಷಕರು ತಮ್ಮ ಮಕ್ಕಳನ್ನು ರೈತರಿಗೆ ಮದುವೆ ಮಾಡಿಕೊಡಲು ಹಿಂಜರಿಯುತ್ತಾರೆ. 'ನಾವು ಅನುಭವಿಸಿದ ಕಷ್ಟ ಸಾಕು, ನಮ್ಮ ಮಕ್ಕಳಾದರೂ ಸುಖವಾಗಿರಲಿ' ಎಂದುಕೊಂಡು, ಯಾವುದಾದರೂ ಸಣ್ಣಪುಟ್ಟ ಕೆಲಸ, ಕಡೆಗೆ ಫ್ಯಾಕ್ಟರಿಗಳಲ್ಲಿ ವಾಚ್‌ಮ್ಯಾನ್ ಕೆಲಸ ಮಾಡಿಕೊಂಡಿದ್ದರೂ ಸರಿ ನಗರದ ಹುಡುಗನಿಗೇ ಕೊಟ್ಟು ಮದುವೆ ಮಾಡುತ್ತಾರೆ.

ಇನ್ನು, ಹಳ್ಳಿಗಳಲ್ಲಿ ಅಂತರ್ಜಾತಿ ವಿವಾಹ ಸುಲಭವಲ್ಲ. ಒಂದು ವೇಳೆ ಮಾಡಿಕೊಂಡರೆ ಊರಿನಿಂದಲೇ ಬಹಿಷ್ಕಾರಕ್ಕೆ ಒಳಗಾಗುವ ಭಯ. ಇಂತಹ ಕಾರಣಗಳಿಂದ ಗ್ರಾಮೀಣ ಪ್ರದೇಶದ ರೈತರು ಸಹ ತಮ್ಮ ಹೆಣ್ಣುಮಕ್ಕಳನ್ನು ಯುವ ರೈತರಿಗೆ ಮದುವೆ ಮಾಡಿಕೊಡುವುದಿಲ್ಲ. ನಮ್ಮ ಊರಿನಲ್ಲೇ (ಬೂಕನಕೆರೆ, ಕೆ.ಆರ್.ಪೇಟೆ ತಾಲ್ಲೂಕು) 40 ವರ್ಷ ತುಂಬಿದ ಸುಮಾರು 50ರಿಂದ 70 ಮಂದಿ ಯುವ ರೈತರಿದ್ದಾರೆ. ಅವರಿಗೆ ಕಂಕಣಭಾಗ್ಯ ಕೂಡಿಬರುವುದು ಯಾವಾಗ?

ಬೂಕನಕೆರೆ ವಿಜೇಂದ್ರ, ಮೈಸೂರು

ತತ್ವಪದ ಪ್ರಾಧಿಕಾರ: ಕಲ್ಯಾಣ ಕರ್ನಾಟಕಕ್ಕೆ ಆದ್ಯತೆಯಿರಲಿ

ತತ್ವಪದ ಅಧ್ಯಯನ ಸಂಬಂಧ ಪ್ರಾಧಿಕಾರ ರಚನೆಯಾಗಲಿ ಎಂದು ಮೀನಾಕ್ಷಿ ಬಾಳಿ ಅವರು ಅಭಿಪ್ರಾಯ-ಪಟ್ಟಿರುವುದು (ವಾ.ವಾ., ಜ. 11) ಸ್ವಾಗತಾರ್ಹ. ಕನ್ನಡ ಸಾಹಿತ್ಯ ಚರಿತ್ರೆಕಾರರು 'ಕತ್ತಲೆಯುಗ' ಎಂದು ಕರೆದ ಕಾಲಘಟ್ಟದಲ್ಲಿ ಹುಟ್ಟಿ ಲೋಕಕ್ಕೆಲ್ಲ ಹೊಸಬೆಳಕು ದೊರಕಿಸಿದ್ದು ತತ್ವಪದ ಸಾಹಿತ್ಯ. ತತ್ವಪದಗಳು ಇಂದಿಗೂ ಗ್ರಾಮ್ಯಜನ್ಯ ಹಾಡುಗಬ್ಬವೇ ಆಗಿರುವುದು ನಿತ್ಯಸತ್ಯ. ಹಾಗೆ ನೋಡಿದರೆ, ಸೂತಕವೆಂದು ಭಾವಿಸಲಾದ ಹೆಣದ ಸಮಕ್ಷಮದಲ್ಲಿ ತತ್ವಪದಗಳ ಭಜನೆ ನಡೆಯುತ್ತದೆ. ಕಡಕೋಳ ಮಡಿವಾಳಪ್ಪ ಅವರ ಮಠದಲ್ಲಿ ಅಮಾವಾಸ್ಯೆಯ ರಾತ್ರಿಗಳಲ್ಲಿ ಅಹೋರಾತ್ರಿ ಭಜನೆ ನಡೆಯುತ್ತಾ ಸಾಂಸ್ಕೃತಿಕ ಎಚ್ಚರಕ್ಕೆ ಸಾಕ್ಷಿಯಾಗುತ್ತದೆ.

ವಚನ ಸಾಹಿತ್ಯೋತ್ತರ ತತ್ವಪದಗಳದ್ದು ಬಹುದೊಡ್ಡ ಜನಸಂಸ್ಕೃತಿ ಚಳವಳಿ. ಜಾತಿ, ಮತ, ಧರ್ಮಗಳ ಗೋಡೆಗಳನ್ನು ಉರುಳಿಸಿದ ಹಿರಿಮೆ ತತ್ವಪದಗಳದ್ದು. ಸರ್ವ ಜನಾಂಗದ ಶಾಂತಿ, ಸಾಮರಸ್ಯದ ಸೌಹಾರ್ದ ಪರಂಪರೆಯನ್ನು ನಿರ್ಮಿಸಿದ ತತ್ವಪದ ಸಾಹಿತ್ಯವು ಪ್ರಧಾನ ಸಂಸ್ಕೃತಿಗೆ ಸೇರಬೇಕಾಗಿತ್ತು. ಕಾವ್ಯ ಮೀಮಾಂಸಕರು ಅದನ್ನು ಅಧೀನ ಸಂಸ್ಕೃತಿಯಾಗಿಯೂ ಕಾಣಲಿಲ್ಲ. ಆದರೆ ಲೋಕ ಮೀಮಾಂಸೆಯಲ್ಲಿ ಇಂದಿಗೂ ತತ್ವಪದಗಳಿಗೆ ಅನನ್ಯ ಸ್ಥಾನಮಾನ ಇದೆ. ಕರ್ನಾಟಕದಲ್ಲಿ ಎಲ್ಲಾ ಜಾತಿ, ಧರ್ಮಕ್ಕೆ ಸೇರಿದ ಐನೂರಕ್ಕೂ ಹೆಚ್ಚು ಮಂದಿ ತತ್ವಪದಕಾರರು ಬಾಳಿ ಬದುಕಿದ್ದಾರೆ. ಕಲ್ಯಾಣ ಕರ್ನಾಟಕದಲ್ಲಿ ಅಜಮಾಸು ನೂರಕ್ಕೂ ಹೆಚ್ಚು ಮಂದಿ ತತ್ವಪದಕಾರರು ಆಗಿಹೋಗಿದ್ದಾರೆ. ಈ ಪ್ರಯುಕ್ತ, ಕಲ್ಯಾಣ ಕರ್ನಾಟಕದ ಕಲಬುರಗಿ ಪ್ರಾಂತ್ಯದಲ್ಲಿ ಸರ್ಕಾರ 'ತತ್ವಪದಗಳ ಅಧ್ಯಯನ ಮತ್ತು ಸಂಶೋಧನಾ ಪ್ರಾಧಿಕಾರ' ಸ್ಥಾಪಿಸಲಿ. ಮೇಲಾಗಿ, ಕಲ್ಯಾಣ ಕರ್ನಾಟಕದ ಒಂದು ಜಿಲ್ಲೆಯಲ್ಲೂ ಯಾವೊಂದು ಸಾಂಸ್ಕೃತಿಕ ಪ್ರತಿಷ್ಠಾನವೂ ಇದುವರೆಗೆ ಸ್ಥಾಪನೆಯಾಗಿಲ್ಲ ಎಂಬುದು ಇಲ್ಲಿ ಪ್ರಸ್ತಾಪಯೋಗ್ಯ.

ಮಲ್ಲಿಕಾರ್ಜುನ ಕಡಕೋಳ, ದಾವಣಗೆರೆ

ಉದ್ಯೋಗ ನೇಮಕಾತಿ ಎಂಬ ಶಾಶ್ವತ ಪರಿಹಾರ

ನೇಮಕಾತಿ ಪ್ರಕ್ರಿಯೆಗಳು ನನೆಗುದಿಗೆ ಬಿದ್ದಿರುವುದರಿಂದ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳು ಚಿಂತೆಗೀಡಾಗಿದ್ದಾರೆ. ಅವರ ವಯೋಮಿತಿ ಮೀರುತ್ತಿದೆ. ಹಣಕಾಸು ಹೊಂದಿಸಿ ಅಧ್ಯಯನ ಮಾಡಲು ತುಂಬಾ ಕಷ್ಟವಾಗುತ್ತಿದೆ. ಮಾನಸಿಕವಾಗಿ, ದೈಹಿಕವಾಗಿ ಅವರು ಕುಗ್ಗುವಂತಾಗಿದೆ. ಕುಟುಂಬಗಳಿಗೆ ಹೊರೆಯಾಗುತ್ತಿದೆ. ಖಾಲಿ ಇರುವ ಹುದ್ದೆ ಭರ್ತಿ ಯಾವಾಗ ಎಂದು ಅವರು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಕೆಲವು ನೇಮಕಾತಿ ಪರೀಕ್ಷೆಗಳಲ್ಲಿ ಅಕ್ರಮ ಕಂಡುಬಂದಿರುವುದರಿಂದ ಈ ಪರೀಕ್ಷೆಗಳ ಬಗೆಗಿನ ವಿಶ್ವಾಸಾರ್ಹತೆ ಕಡಿಮೆಯಾಗಿದೆ. ಪ್ರತಿದಿನ ಕುಟುಂಬದವರ ಪ್ರಶ್ನೆಗೆ ಉತ್ತರಿಸಲಾಗದೆ ಅವರು ಚಿಂತಿತರಾಗುವಂತೆ ಆಗಿದೆ.

ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗಬೇಕೆಂದರೆ, ಖಾಲಿ ಇರುವ ಹುದ್ದೆಗಳನ್ನು ಸರ್ಕಾರ ಭರ್ತಿ ಮಾಡಬೇಕು. ನೇಮಕಾತಿ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವುದರಿಂದ ಎಷ್ಟೋ ಕುಟುಂಬಗಳು ನೆಮ್ಮದಿ ಕಾಣುವಂತೆ ಆಗುತ್ತದೆ. ಎಂತಹುದೇ ಯೋಜನೆಗಳು ಜಾರಿಗೆ ಬಂದರೂ ಶಾಶ್ವತ ಯೋಜನೆಯೆಂದರೆ ಉದ್ಯೋಗ ಕಲ್ಪಿಸುವುದು. ಇದನ್ನು ಸರ್ಕಾರ ಮನಗಾಣಬೇಕು.

ಚೆಲುವರಾಜು ಕೆ., ಧನಗೆರೆ, ಕೊಳ್ಳೇಗಾಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹವಾಮಾನ ಇಲಾಖೆಗೆ 150



ಪ್ರಜಾವಾಣಿ ವಾರ್ತೆ

ಹವಾಮಾನ ಮುನ್ಸೂಚನೆಯನ್ನು ನೀಡುತ್ತಾ, ಹವಾಮಾನ ಸಂಶೋಧನೆಯಲ್ಲಿ ಮುಂದಡಿ ಇಡುತ್ತಾ ಬಂದಿರುವ ಭಾರತೀಯ ಹವಾಮಾನ ಇಲಾಖೆಯು ಜನರ ಜೀವವನ್ನು ಉಳಿಸುವ ಸಾಧನದಂತೆ ಕೆಲಸ ಮಾಡುತ್ತಲೇ ಬಂದಿದೆ... ಪ್ರಧಾನಿ ನರೇಂದ್ರ ಮೋದಿ ತಮ್ಮ 'ಎಕ್ಸ್' ಖಾತೆಯಲ್ಲಿ ಸೋಮವಾರ ಹಂಚಿಕೊಂಡಿರುವ ಪೋಸ್ಟ್ ಇದು.

1875ರಲ್ಲಿ ಕೋಲ್ಕತ್ತಾದಲ್ಲಿ ಆರಂಭವಾದ ಇಲಾಖೆಯು 149 ವರ್ಷಗಳಿಂದಲೂ ಭಾರತೀಯರ ಜೀವ–ಜೀವನೋಪಾಯವನ್ನು ಕಾಪಾಡುವ ಕೆಲಸದಲ್ಲಿ ನಿರತವಾಗಿದೆ. ಚಂಡಮಾರುತ, ಬರ, ಪ್ರವಾಹ, ಮಳೆ ಯಾವಾಗ, ಎಷ್ಟು ಪ್ರಮಾಣದಲ್ಲಿ ಬರುತ್ತದೆ, ಬಿಸಿಗಾಳಿ ಬೀಸುವ ಮುನ್ಸೂಚನೆ, ರೈತರು ಯಾವಾಗ ಬಿತ್ತಬೇಕು, ಬೆಳೆ ಯಾವಾಗ ಕಟಾವು ಮಾಡಬೇಕು... ಹೀಗೆ ಜನರ ಜೀವನವನ್ನು ನೇರವಾಗಿ ಪ್ರಭಾವಿಸಬಲ್ಲ ಎಲ್ಲ ವಿಚಾರಗಳ ಮಾಹಿತಿಯನ್ನು ಇಲಾಖೆಯು ಮುಂಚಿತವಾಗಿ ಜನರಿಗೆ ನೀಡುತ್ತದೆ. ಇಂಥ ಇಲಾಖೆಯು ಈಗ 150ನೇ ವರ್ಷದ ಸಂಭ್ರಮದಲ್ಲಿದೆ.

1970ರಲ್ಲಿ ಅಪ್ಪಳಿಸಿದ ಭೋಲಾ ಚಂಡಮಾರುತವು ಬಾಂಗ್ಲಾದೇಶದ ಸುಮಾರು 3 ಲಕ್ಷ ಜೀವಗಳನ್ನು ತನ್ನ ಸೆಳೆತಕ್ಕೆ ತೆಗೆದುಕೊಂಡಿತ್ತು. ಇದೇ ವರ್ಷ ಆಂಧ್ರಪ್ರದೇಶದಲ್ಲಿ ಸುಮಾರು 10 ಸಾವಿರ ಜನರು ಹಾಗೂ 1971ರಲ್ಲಿ ಒಡಿಶಾದಲ್ಲಿ 10 ಸಾವಿರ ಮಂದಿ ಮೃತಪಟ್ಟಿದ್ದರು. ಈ ಅವಗಢಗಳ ಬಳಿಕವೇ ಚಂಡಮಾರುತ ಪತ್ತೆ ಹಚ್ಚುವ, ತ್ವರಿತವಾಗಿ ಎಚ್ಚರಿಕೆ ಸಂದೇಶ ನೀಡುವ ಕಾರ್ಯಕ್ಕೆ ಚಾಲನೆ ದೊರೆಯಿತು. ಅಲ್ಲಿಂದ ಇಲ್ಲಿಯವರೆಗೆ ತಾಂತ್ರಿಕ ಅಭಿವೃದ್ಧಿಯೊಂದಿಗೆ ಇಲಾಖೆಯು ಪ್ರತಿ ವರ್ಷವೂ ಚಂಡಮಾರುತದ ನಿಖರ ಮುನ್ಸೂಚನೆಯನ್ನು ನೀಡುತ್ತ ಜನರ ಜೀವವನ್ನು ಉಳಿಸುತ್ತಿದೆ.

2013ರಲ್ಲಿ ಒಡಿಶಾಕ್ಕೆ ಫೈಲಿನ್ ಚಂಡಮಾರುತವು ಬಂದಪ್ಪಳಿಸಿತ್ತು. ಹಿಂದಿನ 14 ವರ್ಷಗಳಲ್ಲೇ ಇಂಥ ಚಂಡಮಾರುತವು ಎಂದಿಗೂ ಬೀಸಿರಲಿಲ್ಲ. ಸುಮಾರು 10 ಲಕ್ಷ ಜನರನ್ನು ಸ್ಥಳಾಂತರಿಸಲಾಗಿತ್ತು. ಈ ಚಂಡಮಾರುತದ ಬಗ್ಗೆ ಭಾರತೀಯ ಹವಾಮಾನ ಇಲಾಖೆಯು ಅತ್ಯಂತ ನಿಖರವಾದ ಮುನ್ಸೂಚನೆ ನೀಡಿತ್ತು. ಈ ಚಂಡಮಾರುತ ಮುನ್ಸೂಚನೆಯನ್ನು ಬೇರೆ ಯಾವ ದೇಶಕ್ಕಿಂತಲೂ ಭಾರತವೇ ಹೆಚ್ಚು ನಿಖರವಾಗಿ ಹೇಳಿತ್ತು. ಇದರಿಂದಾಗಿ ಇಲಾಖೆಯು ವಿಶ್ವದಾದ್ಯಂತ ಪ್ರಸಿದ್ಧಿ ಗಳಿಸಿತ್ತು.

ಆಧುನೀಕರಣ: ಮುನ್ಸೂಚನೆಗಳನ್ನು ನೀಡಲು ಮಾಹಿತಿ ಸಂಗ್ರಹ ಅಗತ್ಯ. ಈ ಮಾಹಿತಿ ಸಂಗ್ರಹ ಪ್ರಕ್ರಿಯೆಯು ತಂತ್ರಜ್ಞಾನ ಅಭಿವೃದ್ಧಿಗೊಂಡಂತೆ ಆಧುನೀಕರಣಗೊಳ್ಳುತ್ತಾ ಸಾಗಿದೆ. ಇದೇ ಹಂತದಲ್ಲಿ, ಜನರಿಗೆ ಮಾಹಿತಿ ನೀಡುವ ಪ್ರಕ್ರಿಯೆಯೂ ಆಧುನಿಕಗೊಳ್ಳುತ್ತಾ ಸಾಗಿದೆ.

1982ರಲ್ಲಿ ಇಸ್ರೊ ಉಡಾವಣೆ ಮಾಡಿದ ಇನ್‌ಸ್ಯಾಟ್ ಹೆಸರಿನ ಸರಣಿ ಉಪಗ್ರಹಗಳು ದೇಶದ ಸಂವಹನ ಕ್ಷೇತ್ರವನ್ನು ಬಲಗೊಳಿಸಿದವು. ಇದು ಹವಾಮಾನ ಇಲಾಖೆಯ ಕಾರ್ಯದಲ್ಲಿಯೂ ಮುಖ್ಯ ಪಾತ್ರವಹಿಸಿತು. ಭೂಮಿಯ ವಾತಾವರಣ ಅಧ್ಯಯನಕ್ಕೆ ಈ ಸರಣಿ ಉಪಗ್ರಹಗಳು ಮಹತ್ವದ ಪಾತ್ರವಹಿಸಿದವು. ಹವಾಮಾನ ಮುನ್ಸೂಚನೆ ನೀಡಲು ಸಹಕಾರಿಯಾಗಲೆಂದೇ ಕಲ್ಪನಾ ಉಪಗ್ರಹವನ್ನು ಇಸ್ರೊ 2002ರಲ್ಲಿ ಉಡಾವಣೆ ಮಾಡಿತು. ಹೀಗೆ ತಂತ್ರಜ್ಞಾನ, ವಿಜ್ಞಾನ ಅಭಿವೃದ್ಧಿಗೊಳ್ಳುತ್ತಾ ಹವಾಮಾನ ಇಲಾಖೆಯು ಜನರ ಜೀವವನ್ನು ಉಳಿಸುವ, ದೇಶದ ಅಭಿವೃದ್ಧಿಗೆ ಪೂರಕವಾಗಿರುವ ಹವಾಮಾನ ಮುನ್ಸೂಚನೆಯನ್ನು ನೀಡುತ್ತಿದೆ.

ಕಡಿಮೆ ಅನುದಾನ

ಭಾರತೀಯ ಹವಾಮಾನ ಇಲಾಖೆಯು 150ನೇ ವರ್ಷಕ್ಕೆ ಕಾಲಿಟ್ಟಿದೆ ನಿಜ. ಮಹತ್ವದ ಕೆಲಸಗಳನ್ನು ಮಾಡುತ್ತಿದೆ. ಹಾಗಿದ್ದರೂ ಇಲಾಖೆಯು ಕೇಳಿದಷ್ಟು ಅನುದಾನವನ್ನು ಕೇಂದ್ರ ಸರ್ಕಾರವು ನೀಡುತ್ತಿಲ್ಲ. ಕಳೆದ 10 ವರ್ಷಗಳಲ್ಲಿ ಇಲಾಖೆ ಕೇಳಿದ್ದಕ್ಕಿಂತ ಕಡಿಮೆ ಮೊತ್ತವನ್ನೇ ಸರ್ಕಾರ ಬಿಡುಗಡೆ ಮಾಡಿದೆ.

ಹವಾಮಾನ ಇಲಾಖೆಯು ಕೇಳುವ ಅನುದಾನದ ಮೊತ್ತಕ್ಕೂ ಸರ್ಕಾರವು ಬಜೆಟ್‌ನಲ್ಲಿ ಈ ಇಲಾಖೆಗೆ ಅನುದಾನವನ್ನು ಮೀಸಲಿಡುವುದಕ್ಕೂ, ಕೊನೆಯಲ್ಲಿ ಸರ್ಕಾರವು ಈ ಇಲಾಖೆಗೆ ಹಣವನ್ನು ಬಿಡುಗಡೆ ಮಾಡುವುದಕ್ಕೂ ದೊಡ್ಡ ಪ್ರಮಾಣದ ವ್ಯತ್ಯಾಸ ಕಂಡುಬರುತ್ತಿದೆ.

2014–15ನೇ ಆರ್ಥಿಕ ವರ್ಷದಲ್ಲಿ ಮಾತ್ರವೇ ಇಲಾಖೆ ಕೇಳಿದಷ್ಟು ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಆ ನಂತರದ ವರ್ಷಗಳಲ್ಲಿ ಇಲಾಖೆ ಕೇಳಿರುವುದರಲ್ಲಿ ಅರ್ಧಕ್ಕಿಂತಲೂ ಕಡಿಮೆ ಮೊತ್ತದ ಹಣವನ್ನು ಬಿಡುಗಡೆ ಮಾಡಲಾಗಿದೆ. 2017–18ನೇ ಆರ್ಥಿಕ ವರ್ಷದಲ್ಲಂತೂ ಇಲಾಖೆ ಕೇಳಿದ್ದರಲ್ಲಿ ಶೇ 62.08ರಷ್ಟು ಕಡಿಮೆ ಮೊತ್ತದ ಹಣವನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದೆ.

(ಕೋಟಿಗಳಲ್ಲಿ)

ವರ್ಷ	ಇಲಾಖೆ ಕೇಳಿದ್ದು	ಬಜೆಟ್‌ನಲ್ಲಿ ಸರ್ಕಾರ ಘೋಷಿಸಿದ್ದು	ವಾಸ್ತವದಲ್ಲಿ ಸರ್ಕಾರ ನೀಡಿದ ಮೊತ್ತ	ಇಲಾಖೆ ಕೇಳಿದ್ದು ಹಾಗೂ ವಾಸ್ತವದಲ್ಲಿ ಬಿಡುಗಡೆಯಾದ ಅನುದಾನದ ಮಧ್ಯದ ವ್ಯತ್ಯಾಸ
2014-15	₹527.80	₹661.63	₹508.02	-3.74%
2015-16	₹639.39	₹751.43	₹299.49	-53.16%
2016-17	₹787.16	₹349.21	₹352.89	-55.16%
2017-18	₹943.78	₹379.38	₹357.82	-62.08%
2018-19	₹869.45	₹384.45	₹371.71	-57.24%
2019-20	₹918.55	₹423.55	₹416.85	-54.61%
2020-21	₹947.44	₹443.44	₹415.44	-56.15%
2021-22	₹964.97	₹442.72	₹438.40	-54.56%

ಇಲಾಖೆಯ ಕಿರು ಹಿನ್ನೋಟ

1877: ಕೋಲ್ಕತ್ತಾದ ಅಲಿಪುರದಲ್ಲಿ ಭೂಕಂಪ ಅಧ್ಯಯನಕ್ಕಾಗಿ ಮೊದಲ ವೀಕ್ಷಣಾಲಯವನ್ನು ಸ್ಥಾಪಿಸಲಾಯಿತು. ಆ ಮೂಲಕ ಭೂಕಂಪ ಅಧ್ಯಯನ ಚಟುವಟಿಕೆಗಳು ಆರಂಭವಾದವು

1886: ಬಂದರು ಮೂಲಕ ಎಚ್ಚರಿಕೆ ಸಂದೇಶ ರವಾನೆ ವ್ಯವಸ್ಥೆಯನ್ನು ದೇಶದಾದ್ಯಂತದ ಬಂದರುಗಳಿಗೆ ವಿಸ್ತರಿಸಲಾಯಿತು. 1865ರಿಂದ ಕೋಲ್ಕತ್ತಾ ಬಂದರಿನಿಂದ ಮಾತ್ರವೇ ಎಚ್ಚರಿಕೆ ಸಂದೇಶ ರವಾನೆಯಾಗುತ್ತಿತ್ತು

1890: ಮಳೆ ನೋಂದಣಿ ಪ್ರಾಧಿಕಾರ ಸ್ಥಾಪನೆ. ಜೊತೆಗೆ, ದೇಶದಾದ್ಯಂತ ಒಂದೇ ರೀತಿಯ ಮಳೆ ಮಾಪಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಯಿತು

1921: ಶಿಮ್ಲಾದಿಂದ ಮೊದಲ ಬಾರಿಗೆ ವಾಯುಯಾನ ಮುನ್ಸೂಚನೆ ನೀಡಲಾಯಿತು

1912: ರೇಡಿಯೊ ತಂತ್ರಜ್ಞಾನವನ್ನು ಬಳಸಿ ಹಡಗುಗಳ ಮೂಲಕ ದೇಶದ ವಿವಿಧ ಭಾಗಗಳ ಮಾಹಿತಿಗಳನ್ನು ಪಡೆದುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಲಾಯಿತು. ಹೀಗೆ ಪಡೆದುಕೊಂಡ ಮಾಹಿತಿಯನ್ನು ಒಗ್ಗೂಡಿಸಿ, ತಕ್ಕ ಎಚ್ಚರಿಕೆ ಸಂದೇಶವನ್ನು ಕರಾಚಿ ಮತ್ತು ಮುಂಬೈನ ಕರಾವಳಿ ರೇಡಿಯೊ ಕೇಂದ್ರಗಳ ಮೂಲಕ ಪ್ರಚಾರ ಮಾಡಲಾಯಿತು

1929: ತಂತುರಹಿತ ಹವಾಮಾನ ಮುನ್ಸೂಚನೆ ಸಂದೇಶಗಳ ರವಾನೆ ಆರಂಭವಾಯಿತು

1936: ಆಲ್ ಇಂಡಿಯಾ ರೇಡಿಯೊ ಮೂಲಕ ಪ್ರಥಮ ಬಾರಿಗೆ ಹವಾಮಾನ ಮುನ್ಸೂಚನೆ ವಾರ್ತೆಯನ್ನು ನೀಡಲು ಆರಂಭಿಸಲಾಯಿತು

1945: ಪ್ರಾದೇಶಿಕ ಹವಾಮಾನ ಇಲಾಖೆ ಕೇಂದ್ರಗಳ ಮೂಲಕ ಮೊದಲ ಬಾರಿಗೆ ರೈತರಿಗಾಗಿಯೇ ಹವಾಮಾನ ಮುನ್ಸೂಚನೆಯನ್ನು ನೀಡಲಾಯಿತು

1963: ಅಮೆರಿಕದ ಉಪಗ್ರಹಗಳ ಮೂಲಕ ಚಿತ್ರಗಳನ್ನು ಪಡೆದುಕೊಂಡು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆಗಳನ್ನು ನೀಡಲು ಶುರುಮಾಡಿತು. ಇದೇ ವರ್ಷದಲ್ಲಿ ಪ್ರವಾಹದ ಮುನ್ಸೂಚನೆ ಪಡೆದುಕೊಳ್ಳಲು ಚಂಡಮಾರುತ ವಿಶ್ಲೇಷಣಾ ಘಟಕ ಸ್ಥಾಪನೆಯಾಯಿತು

1970: ಚಂಡಮಾರುತ ಪತ್ತೆ ರೇಡಾರ್ ಅನ್ನು ವಿಶಾಕಪಟ್ಟಣದಲ್ಲಿ ಸ್ಥಾಪಿಸಲಾಯಿತು

1972: ಚಂಡಮಾರುತ ಎಚ್ಚರಿಕೆ ಸಂಶೋಧನೆ ಕೇಂದ್ರದ ಸ್ಥಾಪನೆ

1989: ಪ್ರವಾಹ, ಬರ, ಮಳೆ ಸೇರಿದಂತೆ ವಿವಿಧ ಹವಾಮಾನ ಸಂಬಂಧಿತ ಮುನ್ಸೂಚನೆಗಳನ್ನು ನೀಡುವ ಸಲುವಾಗಿ ಜಿಲ್ಲಾ ಮಟ್ಟದಲ್ಲಿ ಮಳೆ ಕುರಿತ ಮುನ್ಸೂಚನೆ ನೀಡುವ ಕಾರ್ಯವನ್ನು ಆರಂಭಿಸಲಾಯಿತು

2000: ವಿಸ್ಯಾಟ್ ದತ್ತಾಂಶ ವಿನಿಮಯ ಕೇಂದ್ರ ವ್ಯವಸ್ಥೆಯ ಮೂಲಕ ಸಂವಹನ ಆರಂಭಿಸಲಾಯಿತು

ಆಧಾರ: ಭಾರತೀಯ ಹವಾಮಾನ ಇಲಾಖೆಯ ವರದಿಗಳು, ಪಿಟಿಐ, ವಿವಿಧ ವರ್ಷಗಳ ಬಜೆಟ್ ವರದಿಗಳು

ಇಲಾಖೆಯ ಹೆಚ್ಚುಗಾರಿಕೆ

200	806	1,382	83	63
ಅಗ್ರೊ ಅಟೊಮೇಟೆಡ್ ವೆದರ್ ಸ್ಟೇಷನ್	ಸ್ವಯಂಚಾಲಿತ ಹವಾಮಾನ ಕೇಂದ್ರಗಳು	ಸ್ವಯಂಚಾಲಿತ ಮಳೆ ಮಾಪಕಗಳು	ಸಿಡಿಲು ಸೆನ್ಸರ್‌ಗಳು	ಪೈಲಟ್ ಬಲೂನ್‌ಗಳು

- ಇನ್‌ಸ್ಯಾಟ್ ಉಪಗ್ರಹವು 3ಡಿ ಹಾಗೂ 3ಡಿಆರ್ ರೂಪದ ಚಿತ್ರಗಳನ್ನು ಪತ್ರಿ 15 ನಿಮಿಷಗಳಿಗೊಮ್ಮೆ ನೀಡುತ್ತಿದೆ
- ಉಪಗ್ರಹದಿಂದ ಪಡೆದುಕೊಂಡ ಮಾಹಿತಿಗಳನ್ನು ವಿಶ್ಲೇಷಿಸಿ, ಪ್ರತಿಕೂಲ ಹವಾಮಾನ ಕುರಿತು ತ್ವರಿತವಾಗಿ ಮುನ್ನೆಚ್ಚರಿಕೆ ನೀಡುವ ಸಾಮರ್ಥ್ಯ
- ಚಂಡಮಾರುತದ ಸ್ವರೂಪವನ್ನು ಪ್ರತಿ ಆರು ನಿಮಿಷದಲ್ಲಿ ತಿಳಿದುಕೊಳ್ಳುವ ಕಾರ್ಯವನ್ನು ಇಲಾಖೆಯು ಮಾಡುತ್ತಿದೆ
- ಎಲ್ಲ ರೀತಿಯ ಪ್ರತಿಕೂಲ ಹವಾಮಾನವನ್ನು ಹೆಚ್ಚು ನಿಖರವಾಗಿ ಪತ್ತೆಹಚ್ಚುವ ಸಾಮರ್ಥ್ಯವು ಅಧಿಕಗೊಂಡಿದೆ. 2014ಕ್ಕೆ ಹೋಲಿಸಿದರೆ, ಈ ಸಾಮರ್ಥ್ಯ ಶೇ 50ರಷ್ಟು ಹೆಚ್ಚಾಗಿದೆ
- ಚಂಡಮಾರುತವು ಯಾವ ಪ್ರದೇಶಕ್ಕೆ ಬಂದು ಅಪ್ಪಳಿಸಲಿದೆ ಎನ್ನುವ ನಿಖರ ಮುನ್ಸೂಚನೆಯನ್ನು ಇಲಾಖೆ ನೀಡುತ್ತಿದೆ. ಹೆಚ್ಚಿನ ಪ್ರಕರಣಗಳಲ್ಲಿ ಈ ಮುನ್ಸೂಚನೆಯ ಮಾಹಿತಿಯು ತಪ್ಪಾಗಿಲ್ಲ
- ಮಳೆ ಮುನ್ಸೂಚನೆಯನ್ನು 24 ಗಂಟೆಗಳ ಮೊದಲು ನೀಡಲಾಗುತ್ತಿದೆ. ಮುನ್ಸೂಚನೆಯ ನಿಖರತೆಯು ಶೇ 80ರಷ್ಟಿದೆ
- 2023ರಲ್ಲಿ ಬಿಸಿಗಾಳಿ ನಿರ್ವಹಣಾ ಯೋಜನೆಯು ಜಾರಿಯಾಯಿತು. ಈ ಯೋಜನೆ ಅಡಿಯಲ್ಲಿ ಇಲಾಖೆಯು ಆರೋಗ್ಯ ಕ್ಷೇತ್ರಕ್ಕೂ ಸಹಾಯ ಮಾಡಲು ಆರಂಭಿಸಿತು. ಬಿಸಿಗಾಳಿ ಕುರಿತು ಮುನ್ಸೂಚನೆಯನ್ನು ಇಲಾಖೆಯು ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನೀಡಲು ಪ್ರಾರಂಭಿಸಿತು. ಮಲೇರಿಯಾ ಹಾಗೂ ಡೆಂಘಿ ಕಾಯಿಲೆಗಳ ಬಗ್ಗೆಯೂ ಇಲಾಖೆಯು ಮಾರ್ಗದರ್ಶನಗಳನ್ನು ನೀಡುತ್ತಿದೆ
- ಗ್ರಾಮ ಮಟ್ಟದಲ್ಲಿಯೂ ಹವಾಮಾನ ಮುನ್ಸೂಚನೆಗಳನ್ನು ನೀಡುವ ಯೋಜನೆ 'ಮೌಸಂ ಗ್ರಾಮ್' ಅನ್ನು ಇಲಾಖೆ ಆರಂಭಿಸಿದೆ

'ರಂಗ ಸಮುದ್ರ'ದಿಂದ ಬಂದ ರಘು

ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಅಭಿನಯಿಸಿರುವ 'ರಂಗ ಸಮುದ್ರ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ರಾಘವೇಂದ್ರ ರಾಜಕುಮಾರ್ ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ರಾಜಕುಮಾರ್ ಅಸ್ಕಿ ನಿರ್ದೇಶನದ ಚಿತ್ರಕ್ಕೆ ಹೊಯ್ಸಳ ಕೊಣನೂರು ಬಂಡವಾಳ ಹೂಡಿದ್ದಾರೆ. 'ಜನಪದ ಸೊಗಡಿನ ಈ ಸಿನಿಮಾ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಚಿತ್ರೀಕರಣಗೊಂಡಿದೆ. ಪುನೀತ್ ರಾಜಕುಮಾರ್ ಅವರು ಈ ಚಿತ್ರದಲ್ಲಿ ನಟಿಸಬೇಕಿತ್ತು, ಆದರೆ ಆಗಲಿಲ್ಲ. ಈಗ ಅದೇ ಮನೆಯ ರಾಘವೇಂದ್ರ ರಾಜಕುಮಾರ್ ಅವರು ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಜ.19ರಂದು ಚಿತ್ರ ಬಿಡುಗಡೆಯಾಗುತ್ತಿದೆ' ಎಂದರು ರಂಗಾಯಣ ರಘು.

''ರಂಗ ಸಮುದ್ರ' ಊರಿನ ಹೆಸರು. ಈ ಚಿತ್ರವನ್ನು ಮೊದಲು ನೋಡಿದವರು ಪವರ್ ಸ್ಟಾರ್ ಪುನೀತ್ ರಾಜಕುಮಾರ್. ಚಿತ್ರವನ್ನು ನೋಡಿ, ಅವರು ಜಿಲ್ಲಾಧಿಕಾರಿ ಪಾತ್ರದಲ್ಲಿ(ಅತಿಥಿ ಪಾತ್ರದಲ್ಲಿ) ನಟಿಸುವುದಾಗಿ ಹೇಳಿದ್ದರು. ಆದರೆ ವಿಧಿಯಾಟದಿಂದ ಅದು ಆಗಲಿಲ್ಲ'' ಎಂದು ನಿರ್ದೇಶಕ ರಾಜಕುಮಾರ್ ಅಸ್ಕಿ ಹೇಳಿದರು.



ರಂಗಾಯಣ ರಘು, ರಾಘವೇಂದ್ರ ರಾಜಕುಮಾರ್

ತೆರೆಗೆ ಬರಲು ಸಜ್ಜಾದ 'ಮಂಡ್ಯ ಹೈದ'

ಅಭಯ್ ಚಂದ್ರಶೇಖರ್, ಭೂಮಿಕಾ ಜೋಡಿಯಾಗಿ ನಟಿಸಿರುವ 'ಮಂಡ್ಯ ಹೈದ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ವಿ.ಶ್ರೀಕಾಂತ್ ಆ್ಯಕ್ಷನ್-ಕಟ್ ಹೇಳಿದ್ದು, ಚಂದ್ರಶೇಖರ್ ಚಿತ್ರವನ್ನು ನಿರ್ಮಿಸಿದ್ದಾರೆ. 'ಮಂಡ್ಯ ಹೈದನೊಬ್ಬ ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ಏನೇನೆಲ್ಲ ಸಾಹಸ ಮಾಡಿದ ಎಂಬುದನ್ನು ಹೇಳುವ ಚಿತ್ರವಿದು. ಸೆನ್ಸಾರ್ ಪ್ರಕ್ರಿಯೆ ಮುಗಿದಿದ್ದು, ಯು/ಎ ಪ್ರಮಾಣ ಪತ್ರ ಲಭಿಸಿದೆ. ಶೀಘ್ರದಲ್ಲಿ ಬಿಡುಗಡೆ ದಿನಾಂಕ ಘೋಷಿಸುತ್ತೇವೆ' ಎಂದಿದ್ದಾರೆ ನಿರ್ದೇಶಕ ವಿ.ಶ್ರೀಕಾಂತ್. ಚಿತ್ರದಲ್ಲಿ ಐದು ಹಾಡುಗಳಿದ್ದು, ಸುರೇಂದ್ರನಾಥ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಛಾಯಾಚಿತ್ರಗ್ರಾಹಕರಾಗಿ ಮನುಗೌಡ ಕೆಲಸ ಮಾಡಿದ್ದಾರೆ. ಬಲ ರಾಜವಾಡಿ, ಸುನಂದ ಹಾಗೂ ನಿರ್ಮಾಪಕ ಚಂದ್ರಶೇಖರ್ ಮುಂತಾದವರು ತಾರಾಬಳಗದಲ್ಲಿದ್ದಾರೆ.



ಅಭಯ್ ಚಂದ್ರಶೇಖರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಬೆಳೆಯುವ ಚೈತನ್ಯ

ನುಡಿ ಬೆಳಗು

ಪಿ. ಚಂದ್ರಿಕಾ

ಮಗ ದೊಡ್ಡ ವ್ಯಕ್ತಿಯಾಗಬೇಕು ಎಂಬುದು ಪ್ರತಿಯೊಬ್ಬ ತಂದೆ ತಾಯಿಯ ಆಸೆ. ಹಾಗೇ ಒಬ್ಬ ತಂದೆಗೆ ತನ್ನ ಮಗ ದೊಡ್ಡ ಇಂಜಿನಿಯರೋ, ಡಾಕ್ಟರೋ ಆಗಬೇಕು ಎಂದು ಬಯಸಿದ್ದ. ಆದರೆ ಮಗನಿಗೆ ಅದ್ಯಾವುದರಲ್ಲೂ ಆಸಕ್ತಿ ಇಲ್ಲ, ಅವನಿಗೆ ಚಿತ್ರ ಕಲೆಯಲ್ಲಿ ಆಸಕ್ತಿ. ತಂದೆಗೆ ಮಗ ಚಿತ್ರ ಬರೆದು ಏನು ಸಾಧಿಸುತ್ತಾನೆ ಎನ್ನುವ ಅಸಡ್ಡೆ. ಈ ತಿಕ್ಕಾಟದಲ್ಲಿ ಮಗ ಮಂಕಾಗುತ್ತಾ ಬಂದ. ಓದುವುದನ್ನು ನಿಲ್ಲಿಸಿದ. ಸ್ಕೂಲಿಂದ ದಿನಾ ಅವನ ಮೇಲೆ ತಕರಾರುಗಳು ಬರತೊಡಗಿದವು. ಆ ವರ್ಷ ಮಗ ಫೇಲಾಗಿಯೂ ಬಿಟ್ಟ. ಇದನ್ನು ತಾಳಿಕೊಳ್ಳಲು ತಂದೆಗೆ ಸಾಧ್ಯವೇ ಆಗಲಿಲ್ಲ. ಮಗನಿಗೆ 'ನನ್ನ ಮರ್ಯಾದೆಯನ್ನು ಕಳೆದ ನೀನು ಇನ್ನಾವತ್ತೂ ನನ್ನ ಮಾತನಾಡಿಸಬೇಡ' ಎಂದುಬಿಟ್ಟ. ದುಃಖಗೊಂಡ ಮಗ ಇನ್ನಷ್ಟು ಖಿನ್ನನಾದ.

ಒಮ್ಮೆ ಹುಡುಗನ ಅಜ್ಜ ಮಾತಾಡಿಸಿಕೊಂಡು ಹೋಗಲು ಮನೆಗೆ ಬಂದ. ಅವನಿಗೆ ಮನೆಯ ಸ್ಥಿತಿ ಎಲ್ಲವೂ ಅರ್ಥವಾಯಿತು. ಹೇಗಾದರೂ ಮಾಡಿ ಇದನ್ನೆಲ್ಲಾ ಸರಿಪಡಿಸಬೇಕೆನ್ನುವ ಉದ್ದೇಶದಿಂದ ಮಗನನ್ನು ಕೂರಿಸಿಕೊಂಡು ಮಾತನಾಡತೊಡಗಿದ. 'ಮಗನೇ ನಿನ್ನ ಕಾಳಜಿ ನನಗೆ ಅರ್ಥವಾಗುತ್ತದೆ. ನನ್ನ ಮಗ ದೊಡ್ಡವನಾಗಬೇಕೆಂದು ನಾನು ಹೇಗೆ ಆಸೆ ಪಟ್ಟೆನೋ ನೀನೂ ಹಾಗೇ ನಿನ್ನ ಮಗನ ಬಗ್ಗೆ ಆಸೆ ಪಡುತ್ತಿದ್ದೀಯ. ತಪ್ಪಲ್ಲ, ಆದರೆ ನಿನಗೆ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ನೀನು ಬುದ್ಧಿವಂತ ಅದಕ್ಕೆ ನೀನು ಉತ್ತರ ನೀಡಬಲ್ಲೆ' ಎನ್ನುತ್ತಾನೆ. ಅಪ್ಪ ತನ್ನನ್ನು ಏನು ಕೇಳುತ್ತಾನೆ ಎನ್ನುವ ಕುತೂಹಲ ಮಗನದಾದರೆ, ಮೊಮ್ಮಗನಿಗೆ ಅಪ್ಪನ ಉತ್ತರ ಏನಿರಬಹುದು ಎನ್ನುವ ಕುತೂಹಲ.

ಅಜ್ಜ 'ಕಾಡಿನಲ್ಲಿ ಎಲ್ಲ ಗಿಡಗಳೂ ಒಂದೇ ಬಗೆಯಲ್ಲಿರುತ್ತವೆಯೇ?' ಎನ್ನುತ್ತಾನೆ. ಆಗ ಮಗ ಹೆಮ್ಮೆಯಿಂದ ಪ್ರಕೃತಿಯಲ್ಲಿ ಎಲ್ಲ ಬಗೆಯದ್ದೂ ಇರುತ್ತದೆ. ಕೆಲವು ಎತ್ತರಕ್ಕೆ ಬೆಳೆಯುವ ಗುಣವಿದ್ದರೆ ಕೆಲವಕ್ಕೆ ಅಗಲಕ್ಕೆ ಹರಡುವ ಗುಣವಿರುತ್ತದೆ. ಎಲ್ಲವನ್ನೂ ಎತ್ತರಕ್ಕೆ ಇಟ್ಟರೆ ಚಿಕ್ಕ ಪುಟ್ಟ ಜಿಂಕೆ ಮೊಲಗಳಂಥ ಪ್ರಾಣಿಗಳು ಎಲ್ಲಿ ಹೋಗುತ್ತವೆ' ಎನ್ನುತ್ತಾನೆ. 'ಅಲ್ಲವೇ ಇಷ್ಟೆಲ್ಲಾ ಅರ್ಥ ಮಾಡಿಕೊಂಡ ನೀನು ಯಾಕೆ ನಿನ್ನ ಮಗನ ವಿಷಯಕ್ಕೆ ರಂಪಾಟ ಮಾಡುತ್ತಿದ್ದೀಯ?' ಎನ್ನುತ್ತಾನೆ ಅಜ್ಜ. ಅವನ ಮಾತಿಗೆ, 'ಮನುಷ್ಯನೇ ಬೇರೆ ಪ್ರಕೃತಿಯೇ ಬೇರೆ' ಎನ್ನುತ್ತಾನೆ ಮಗ.

ಅದನ್ನು ಕೇಳಿ ನಗುವ ಅಜ್ಜ, 'ಅಲ್ಲಪ್ಪ ಎಲ್ಲರೂ ಇಂಜಿನಿಯರ್, ಡಾಕ್ಟರ್ ಆಗಬೇಕೆಂದರೆ ಹೇಗೆ? ಚಿಂತನೆ ಮಾಡುವವರು, ರಾಜಕಾರಣಿಗಳು, ಕಲಾವಿದರು, ಶ್ರಮಜೀವಿಗಳು, ರೈತರು ಇಲ್ಲದಿದ್ದರೆ ನಮ್ಮ ಸಮಾಜ ಇದೆಯೇ? ಓದು ಅವರವರಿಗೆ ಬಿಟ್ಟಿದ್ದು, ಆಸಕ್ತಿ ಇರುವ ವಿಷಯವನ್ನು ಓದಬೇಕಲ್ಲವೆ? ನಿನ್ನ ಮಗ ದೊಡ್ಡ ಮರ ಆಗಿ ಎತ್ತರಕ್ಕೆ ಬೆಳೆಯಬೇಕು ಎನ್ನುವುದು ನಿನ್ನ ಆಸೆ. ಆದರೆ ಅವನಲ್ಲಿ ಹಬ್ಬುವ ಗುಣವಿದೆ. ಅವನು ಸಮಾಜದ ಸ್ಥಿತಿಗತಿಗಳನ್ನು ತಿಳಿಸಿಕೊಡಬಲ್ಲ ಕಲಾವಿದನಾಗ ಬಯಸಿದ್ದಾನೆ. ಇದೂ ದೊಡ್ಡದೇ ಅಲ್ಲವೆ? ಇವತ್ತಿಗೂ ರವಿವರ್ಮ, ಡಾವಿಂಚಿಯಂಥ ಕಲಾವಿದರನ್ನು ಜಗತ್ತು ನೆನಪಿಸಿಕೊಳ್ಳದೇ? ನಿನ್ನ ಮಗನದ್ದೂ ಬೆಳವಣಿಗೆಯೇ ಅಲ್ಲವೆ? ಮಕ್ಕಳ ಮೇಲೆ ನಮ್ಮ ಮನಸ್ಸಿನಲ್ಲಿದ್ದದ್ದನ್ನು ಹೇರಬಾರದು. ಅವರನ್ನು ಸ್ವತಂತ್ರವಾಗಿ ಬಿಡಬೇಕು' ಎನ್ನುತ್ತಾನೆ. ಅಪ್ಪನ ಮಾತುಗಳನ್ನು ಕೇಳಿದ ಮಗ ತಪ್ಪನ್ನು ಅರ್ಥ ಮಾಡಿಕೊಂಡು ಇನ್ನೆಂದಿಗೂ ಮಗನ ಆಸಕ್ತಿಗೆ ಅಡ್ಡಗಾಲು ಹಾಕಲಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜನವರಿ 16, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ಷಷ್ಠಿ ಗಂ. 23-58 ನಕ್ಷತ್ರ: ಉತ್ತರಾಭಾದ್ರ ಗಂ. 28-38 ಯೋಗ: ಪರಿಘ ಗಂ. 20-01 ಕರಣ: ಕೌಲವ ಗಂ. 13-05, ಮಕರ ಮಾಸದ 01 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 2.

ರಾಹುಕಾಲ : ಮಧ್ಯಾಹ್ನ 03-00 – 04-30

ಸೂರ್ಯೋದಯ : 07-01 ಸೂರ್ಯಾಸ್ತ : 06-19

ಮುಸ್ಲಿಂ ದಿನಾಂಕ : 04 ರಜಬ್

ಅದೃಷ್ಟ ಸಂಖ್ಯೆ : 11, 3

ಮೇಷ: ದೇವರ ಕೃಪೆಯಿಂದ ಎಲ್ಲ ಕೆಲಸಗಳು ನೆರವೇರಿ ಅಡೆತಡೆಗಳು ನಿರ್ಮೂಲವಾಗುವುದು. ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಮೇಲೆ ಅಧಿಕವಾದ ಶ್ರಮವಹಿಸಿ. ಕಪ್ಪು ವಸ್ತ್ರ ಈ ದಿನ ಶುಭವನ್ನು ಉಂಟುಮಾಡಲಿದೆ.

ವೃಷಭ: ಅಗತ್ಯವಾದ ಕೆಲಸ ನಿರ್ವಹಿಸುವ ಬಗ್ಗೆ ಏಕಾಗ್ರತೆ ವಹಿಸುವುದು ಉತ್ತಮ. ತಂದೆಯವರ ಮಾತಿನಂತೆ ನಡೆಯುವುದು ಬಾಳಿಗೆ ಶ್ರೇಯಸ್ಕರ. ಪ್ರಯಾಣದಲ್ಲಿ ಜಾಗ್ರತೆ ವಹಿಸಿರಿ.

ಮಿಥುನ: ಸ್ವಂತ ಉದ್ಯೋಗ ಘಟಕವನ್ನು ಹೊಂದಿದ್ದರೆ ಕಾರ್ಮಿಕರ ಉತ್ತಮವಾದ ಬೆಂಬಲ ಲಭ್ಯವಾಗಲಿದೆ. ತಾಂತ್ರಿಕ ಪದವೀಧರರಿಗೆ ಹೆಚ್ಚಿನ ಬೇಡಿಕೆ ಇದ್ದು, ಒಳ್ಳೆಯ ಅವಕಾಶಗಳು ಒದಗಿ ಬರಲಿವೆ.

ಕರ್ಕಾಟಕ: ಔಷಧಿ ವ್ಯಾಪಾರಿಗಳಿಗೆ ಆದಾಯದ ಇನ್ನೊಂದು ಮೂಲವು ಸಿಗುವಂತಾಗುವುದು. ಕಷ್ಟವನ್ನು ಎದುರಿಸುವ ಧೈರ್ಯವನ್ನು ತಂದುಕೊಳ್ಳಿರಿ. ಒಳಾಂಗಣ ವಿನ್ಯಾಸಗಾರರಿಗೆ ಹೆಚ್ಚಿನ ಬೇಡಿಕೆ ಬರಲಿದೆ.

ಸಿಂಹ: ಸಜ್ಜನರ ಸಹವಾಸ, ಸನ್ಮಾರ್ಗದ ಬುದ್ಧಿಯನ್ನು ಕಾಪಾಡಿಕೊಳ್ಳುವುದು ಉತ್ತಮ. ವಿದೇಶದಲ್ಲಿನ ಶಿಕ್ಷಣಾವಕಾಶವನ್ನು ಪಡೆದುಕೊಳ್ಳುವ ಅವಕಾಶ ನಿಮ್ಮದಾಗುವುದು. ಸಾಲ ತೆಗೆದುಕೊಳ್ಳುವ ನಿರ್ಧಾರ ಸರಿಯಲ್ಲ.

ಕನ್ಯಾ: ಕುಟುಂಬದಲ್ಲಿ ಹಿರಿಯರ ಆರೋಗ್ಯ ದಿನದಿಂದ ದಿನಕ್ಕೆ ಉತ್ತಮಗೊಳ್ಳುವುದರಿಂದ ಮನಸ್ಸಿಗೆ ನೆಮ್ಮದಿ. ನೀವೆಣಿಸಿದ ರೀತಿಯಲ್ಲೇ ವೈವಾಹಿಕ ಜೀವನದ ದಾರಿ ಪ್ರಾರಂಭವಾಗಲಿದೆ. ಶೀತದಿಂದ ಬಳಲುವಂತಾಗಬಹುದು.

ತುಲಾ: ಎಂಜಿನಿಯರಿಂಗ್ ಕೆಲಸಗಾರರು ತಮ್ಮ ಕಾರ್ಯದಲ್ಲಿ ಜಾಣ ನೀತಿಯನ್ನು ಅನುಸರಿಸುವುದರಿಂದ ವ್ಯವಹಾರದಲ್ಲಿ ಪ್ರಶಂಸೆ ಹಾಗೂ ಯಶಸ್ಸನ್ನು ಕಾಣುವರು. ಒತ್ತಡಗಳನ್ನು ಮಕ್ಕಳ ಮೇಲೆ ಹೇರಬೇಡಿ.

ವೃಶ್ಚಿಕ: ವಿದೇಶಿ ವ್ಯಾಪಾರದಲ್ಲಿ ಜಾಸ್ತಿ ಬಂಡವಾಳವನ್ನು ಹೂಡುವುದು ಸರಿಯಲ್ಲ. ಹಿತಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ ಜಯ ಸಿಗುವುದು ಖಂಡಿತ. ಕಾರ್ಯತಂತ್ರಗಳಿಗೆ ಎದುರಾಳಿಯ ಸೋಲು ನಿಶ್ಚಿತವಾಗುವುದು.

ಧನು: ಹರಿತವಾದ ವಸ್ತುಗಳಿಂದ ಅನಾಹುತಗಳಾಗುವ ಸಂಭವವಿದೆ ಎಚ್ಚರಿಕೆಯಿಂದ ಇರುವುದು ಉತ್ತಮ. ಮಾತಿನಲ್ಲಿ ಬಿಗು ಮತ್ತು ಗಾಂಭೀರ್ಯ ಇಟ್ಟುಕೊಳ್ಳುವುದು ಗೌರವವನ್ನು ಹಾಗೂ ಪ್ರತಿಷ್ಠೆಯನ್ನು ಹೆಚ್ಚಿಸುತ್ತದೆ.

ಮಕರ: ಕನಸುಗಳಿಗೆ ಹಿರಿಯರ ಬೆಂಬಲ ಒದಗಿ ಬರಲಿದೆ. ಸಂಗಾತಿಯ ಅಭಿಪ್ರಾಯಗಳಿಗೂ ಮನ್ನಣೆ ನೀಡಿ. ಮದುವೆಯಂಥ ಶುಭ ಸಮಾರಂಭಗಳಿಗಾಗಿ ಜವಳಿ ವ್ಯಾಪಾರ ಮಾಡಲು ಸೂಕ್ತ ಕಾಲವಲ್ಲ.

ಕುಂಭ: ಕೃಷಿಕರು ಈಗಿನ ಕಾಲಕ್ಕೆ ತಕ್ಕಂತೆ ಯಂತ್ರೋಪಕರಣಗಳ ಬಳಕೆಯನ್ನು ಮಾಡಿಕೊಳ್ಳುವ ಬಗ್ಗೆ ಹೆಚ್ಚಿನ ಗಮನಹರಿಸಿ. ರೇಷ್ಮೆಯ ಉತ್ಪಾದಕರು ಆದಾಯದಲ್ಲಿ ಗಣನೀಯವಾದ ಸುಧಾರಣೆಯನ್ನು ಕಾಣುವಿರಿ.

ಮೀನ: ಉದ್ಯೋಗದ ಅನಿವಾರ್ಯತೆಗಳನ್ನು ಬಿಟ್ಟು ದೇಹದ ಆರೋಗ್ಯದ ಬಗೆಗಿನ ಕಾಳಜಿ ವಹಿಸುವುದು ಒಳ್ಳೆಯದು. ಸಮಯಕ್ಕೆ ಸರಿಯಾದ ಆಹಾರ ಸೇವನೆಯಿಂದಾಗಿ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು.

ಪದಬಂಧ 5562

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೇಗನೆ ಆರಂಭಿಸಿದ ವ್ಯವಸಾಯ! (3)
3.ಭಟ್ಟ ತೊಟ್ಟಿದ್ದ ಅಂಗಿಯನ್ನು ಹೊಗಳುವವ! (3)
5.ಸಂಖ್ಯೆಯಿಂದಲೇ ತೋರಿಸಿದ ಗುರುತು (3)
6.ವನದಲ್ಲಿ ನೀಡಿದ ಮಾತು (3)
8.ನವರತ್ನಗಳಲ್ಲಿ ಅತ್ಯಂತ ಬೆಲೆಯುಳ್ಳದ್ದು (2)
9.ಕುಲದಲ್ಲಿ ಮೋಸವೇ? (3)
10.ಪರಂಪರೆಯಲ್ಲಿನ ಕೋಲಾಹಲ (2)
13.ಮಟ ಮಟ ಮಧ್ಯಾಹ್ನ ಕಾಣಿಸಿದ ಮಂಗ (3)
15.ಪ್ರತಿಪಕ್ಷದಲ್ಲಿದ್ದಾಗ ಕಣ್ಣಿಗೆ ಕಾಣುವಂಥದ್ದು! (3)
16.ಜನರ ಅಡಿಯಲ್ಲಿರುವ ವಂದರಿ! (3)
17.ಧೀರನ ಮೈಯಿಂದ ಹರಿಯುತ್ತಿರುವ ರಕ್ತ (3)

ಮೇಲಿಂದ ಕೆಳಕ್ಕೆ

1.ಆ ಘಟನೆಯಲ್ಲಾದ ಪೆಟ್ಟು (3)
2.ಬಡ ಬಡ ಮಾತಾಡುತ್ತಿರುವವನು ದರಿದ್ರದವ (3)
3.ವನದ ಕೊನೆಗಿರುವ ಮನೆ (3)
4.ಗಿರಕಿ ಹೊಡೆಯುತ್ತಿರುವ ಗ್ರಾಹಕ (3)
5.ಭವನದಲ್ಲಾದ ಹುಟ್ಟು (3)
7.ಚಪ್ಪರದಲ್ಲಿರುವ ಚನ್ನಿಗನಿಗೆ ವಿಶೇಷಾಸಕ್ತಿ! (3)
9.ನ್ಯಾಯವಲ್ಲದ ತರ್ಕ (3)
11.ಪಕ್ಷದಲ್ಲಿ ದೃಷ್ಟಿಗೆ ದೂರವಾದುದು ಇದೆ! (3)
12.ಜಾಣನ ಮನೆಯಲ್ಲಿರುವ ಬಿದಿರಿನ ಗೂಡೆ (3)
13.ಮಡಿವಂತ ಏರಿದ ಉಪ್ಪರಿಗೆ (3)
14.ಗುರುಗುಟ್ಟುತ್ತಿರುವ ಗಂಡುಕುರಿ (3)
15.ವರ ನೀಡಿದ್ದು ಅನಾವಶ್ಯಕ ವಿವರಣೆ (3)



5561ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಶು 3.ಕಾಡತೂಸು
5.ಆಶುಕವಿ 7.ಅಜೀರ್ಣ
8.ಸ್ವಹಸ್ತಾಕ್ಷರ 11.ಪರಾತ
12.ಕಸವರ 15.ವಿದೂಷಕ
16.ಬುನಾದಿ

ಮೇಲಿಂದ ಕೆಳಕ್ಕೆ:
2.ಶುನಕ 3.ಕಾಡು
4.ಸುವರ್ಣ 5.ಆಮೆ
6.ವಿರಹ 7.ಅಧರ
8.ಸ್ವಗತ 9.ಕ್ಷಣಿಕ
10.ನರ 11.ಪದವಿ
13.ಸಬೂಬು 14.ಕಾಕ

ಸುಡೊಕು 5947

	8			5				
1			6		4		7	3
	5			7			2	
5		8	9					
	1					7	5	2
4		7			6		8	
2		5		9			3	
	6		3		5	2		7
3		9		6			4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5946 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಷೇರುಪೇಟೆ ವಹಿವಾಟು 759



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,894
ಇಂದಿನ ಅಂತ್ಯ	22,097
▲	202
ದಿನದ ಗರಿಷ್ಠ	22,115

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹905 (905)
ಸೂರ್ಯಕಾಂತಿ (ರಿಫೈನ್ಡ್)	₹930 (930)
ಪಾಮೋಲಿನ್	₹844 (845)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹236-438
ದ್ವಿತಳಿ (ಬಿ.ವಿ)	₹222-563

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹155
ಆರ್‌ಎಸ್‌ಎಸ್-5	₹149
ಗುಡ್ ಲಾಟ್	₹132

ವಿನಿಮಯ ದರ

$ ಡಾಲರ್	82.86
£ ಪೌಂಡ್	105.60
€ ಯುರೊ	90.82
¥ ಯೆನ್ (100ಕ್ಕೆ)	57

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹13900
ಎಸಿ	₹7840
ಆರ್‌ಪಿ	₹11000
ಆರ್‌ಸಿ	₹7020

73 ಸಾವಿರ ದಾಟಿದ ಸೆನ್ಸೆಕ್ಸ್

ಷೇರು ಹೂಡಿಕೆದಾರರ ಸಂಪತ್ತು ₹9.68 ಲಕ್ಷ ಕೋಟಿ ವೃದ್ಧಿ

ಮುಂಬೈ (ಪಿಟಿಐ): ಐ.ಟಿ ಷೇರುಗಳ ನಾಗಾಲೋಟದಿಂದಾಗಿ ಸೋಮವಾರ ಮುಂಬೈ ಷೇರು ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಮೊದಲ ಬಾರಿಗೆ 73 ಸಾವಿರದ ಗಡಿ ದಾಟಿದೆ. ನಿಫ್ಟಿ 22 ಸಾವಿರ ದಾಟಿದೆ.

ಐ.ಟಿ, ರಿಲಯನ್ಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರುಗಳು ಮಾರುಕಟ್ಟೆಯು ಹೊಸ ದಾಖಲೆ ಬರೆಯಲು ನೆರವಾದವು.

ಸೆನ್ಸೆಕ್ಸ್ 759 ಅಂಶ ಏರಿಕೆಯಾಗಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 73,327ರಲ್ಲಿ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 833 ಅಂಶ ಏರಿಕೆಯಾಗಿ 73,402 ಅಂಶಕ್ಕೆ ತಲುಪಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 202 ಅಂಶ ಏರಿಕೆಯಾಗಿ, 22,097ರಲ್ಲಿ ಕೊನೆಗೊಂಡಿತು. ವಹಿವಾಟಿನ ವೇಳೆ 221 ಅಂಶ ಹೆಚ್ಚಳವಾಗಿ 22,115ಕ್ಕೆ ತಲುಪಿತ್ತು.

ಐದು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹9.68 ಲಕ್ಷ ಕೋಟಿಯಷ್ಟು ವೃದ್ಧಿಸಿದೆ.

ಇನ್ಫೊಸಿಸ್, ಟಿಸಿಎಸ್, ವಿಪ್ರೊ ಮತ್ತು ಎಚ್‌ಸಿಎಲ್ ಟೆಕ್‌ನ ಮೂರನೇ ತ್ರೈಮಾಸಿಕದ ಫಲಿತಾಂಶವು ಸೂಚ್ಯಂಕ

ಗಳ ಏರಿಕೆಗೆ ಸಹಕಾರಿಯಾಗಿದೆ. ಎಚ್‌ಸಿಎಲ್ ಟೆಕ್ನಾಲಜೀಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್, ಟೆಕ್ ಮಹೀಂದ್ರ, ಭಾರ್ತಿ ಏರ್‌ಟೆಲ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಗಳಿಕೆ ಕಂಡಿವೆ.

ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ಲಾರ್ಸೆನ್ ಆ್ಯಂಡ್ ಟೂಬ್ರೊ, ಟಾಟಾ ಮೋಟರ್ಸ್, ಟಾಟಾ ಸ್ಟೀಲ್ ಮತ್ತು ಆಕ್ಸಿಸ್ ಬ್ಯಾಂಕ್ ನಷ್ಟ ದಾಖಲಿಸಿವೆ. ಬ್ರೆಂಟ್ ಕಚ್ಚಾ ತೈಲ ಶೇ 0.29ರಷ್ಟು ಇಳಿಕೆಯಾಗಿ ಬ್ಯಾರೆಲ್‌ಗೆ 78.06 ಡಾಲರ್ ಆಗಿದೆ.

ಎಚ್‌ಸಿಎಲ್ ಟೆಕ್ ಷೇರು ಏರಿಕೆ: 2023ರ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ಲಾಭ ಹೆಚ್ಚಾಗಿದೆ. ಇದರಿಂದ ಕಂಪನಿಯ ಷೇರು ಮೌಲ್ಯವು ಶೇ 3ರಷ್ಟು ಏರಿಕೆ ಆಗಿದೆ. ಕಂಪನಿಯು

ಲಾಭ ಕಂಡ ಕಂಪನಿಗಳು (ಶೇಕಡಾವಾರು)	
6.26	ವಿಪ್ರೊ
4.52	ಒಎನ್‌ಜಿಸಿ
3.08	ಎಚ್‌ಸಿಎಲ್ ಟೆಕ್
2.44	ಇನ್ಫೊಸಿಸ್
2.42	ಭಾರ್ತಿ ಏರ್‌ಟೆಲ್

ನಷ್ಟ ಕಂಡ ಕಂಪನಿಗಳು (ಶೇಕಡಾವಾರು)	
-3.63	ಎಚ್‌ಡಿಎಫ್‌ಸಿ ಲೈಫ್
-2.39	ಬಜಾಜ್ ಫೈನಾನ್ಸ್
-1.27	ಹಿಂಡಾಲ್ಕೊ
-1.18	ಬಜಾಜ್ ಫಿನ್‌ಸರ್ವ್
-1.00	ಐಷರ್ ಮೋಟರ್ಸ್

ಒಂದೇ ದಿನ ₹12,130 ಕೋಟಿ ಗಳಿಸಿದ್ದು, ಮಾರುಕಟ್ಟೆ ಬಂಡವಾಳ ₹4.30 ಲಕ್ಷ ಕೋಟಿಗೆ ಮುಟ್ಟಿದೆ.

ರೂಪಾಯಿಗೆ ಬಲ: ದೇಶೀಯ ಷೇರು ಮಾರುಕಟ್ಟೆಯಲ್ಲಿನ ಏರಿಕೆಯಿಂದಾಗಿ ಡಾಲರ್ ಎದುರು ರೂಪಾಯಿಯ ಮೌಲ್ಯವು 9 ಪೈಸೆ ಏರಿಕೆಯಾಗಿ, 82.86ಕ್ಕೆ ವಿನಿಮಯಗೊಂಡಿದೆ. ಮಾರುಕಟ್ಟೆ ಆರಂಭವಾದಾಗ ರೂಪಾಯಿ 82.77 ಆಗಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಗ್ರಾಹಕರಿಗೆ ತಟ್ಟಿದ ಆಹಾರ ಪದಾರ್ಥಗಳ ಬೆಲೆ ಏರಿಕೆ ಬಿಸಿ: ತಯಾರಿಕಾ ಉತ್ಪನ್ನಗಳ ದರ ಹೆಚ್ಚಳ

ಸಗಟು ಹಣದುಬ್ಬರ 9 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): 2023ರ ಡಿಸೆಂಬರ್‌ನಲ್ಲಿ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಶೇ 0.73ಕ್ಕೆ ಏರಿಕೆಯಾಗಿದ್ದು, ಒಂಬತ್ತು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಆಹಾರ ಪದಾರ್ಥಗಳ ದರ ಹೆಚ್ಚಳವಾಗಿರುವುದೇ ಹಣದುಬ್ಬರದ ಏರಿಕೆಗೆ ಕಾರಣವಾಗಿದೆ. ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಸ್ಥಿರವಾಗಿದ್ದ ಹಣದುಬ್ಬರವು ನವೆಂಬರ್‌ನಲ್ಲಿ ಶೇ 0.26ಕ್ಕೆ ಏರಿಕೆಯಾಗುವ ಮೂಲಕ ಎಂಟು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿತ್ತು.

ಡಿಸೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ಶೇ5.69ರಷ್ಟು ಏರಿಕೆಯಾಗಿದ್ದು, ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಹಣದುಬ್ಬರ ಏರಿಕೆ ಯಾಗುತ್ತಿರುವ ಬೆನ್ನಲ್ಲೇ ಭಾರತೀಯ ರಿಸರ್ವ್ ಬ್ಯಾಂಕ್, ರೆಪೊ ದರ ಹೆಚ್ಚಿಸಲು ಮುಂದಾಗಬಹುದೇ ಎಂಬ ಚರ್ಚೆ ಶುರುವಾಗಿದೆ.

ಒಂದು ವೇಳೆ ರೆಪೊ ದರ ಹೆಚ್ಚಿಸಿದರೆ ಸಾಲಗಳ ಮೇಲಿನ ಬಡ್ಡಿದರ ಹೆಚ್ಚಳವಾಗಲಿದೆ. ಈಗಾಗಲೇ, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಗ್ರಾಹಕರಿಗೆ ಗೃಹ ಸಾಲದ ಇಎಂಐ ಹೊರೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಆಹಾರ ಪದಾರ್ಥಗಳು, ಯಂತ್ರೋಪಕರಣಗಳು, ಸಾರಿಗೆ ಉಪಕರಣ, ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್ ಮತ್ತು ಆಪ್ಟಿಕಲ್ ಉಪಕರಣಗಳ ದರ ಹೆಚ್ಚಳವೇ ಹಣದುಬ್ಬರ ಏರಿಕೆಗೆ ಕಾರಣವಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

ಹಣದುಬ್ಬರ ಏರಿಕೆಯಲ್ಲಿ ಭತ್ತ, ಬೇಳೆಕಾಳು, ತರಕಾರಿಗಳ ಪಾಲು ದೊಡ್ಡದಿದೆ. ಆಗಸ್ಟ್‌ನಿಂದ ಈರುಳ್ಳಿ ಬೆಲೆ ಏರಿಕೆಯು ಎರಡಂಕಿಯಲ್ಲಿಯೇ ಇದೆ. ಆಲೂಗೆಡ್ಡೆ ಬೆಲೆ ಮಾತ್ರ ಇಳಿಕೆಯಾಗಿದೆ. ಇಂಧನ ಮತ್ತು ವಿದ್ಯುತ್ ಸೂಚ್ಯಂಕದಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ನವೆಂಬರ್‌ನಲ್ಲಿ ಶೇ (–) 4.61ರಷ್ಟು ಇದ್ದಿದ್ದು ಶೇ (–) 2.41ರಷ್ಟು ಇಳಿಕೆ ಆಗಿದೆ. ಆದರೆ, ತಯಾರಿಕಾ ಉತ್ಪನ್ನಗಳ ಬೆಲೆಯು ಶೇ (–)0.64ರಿಂದ ಶೇ (–) 0.71ರಷ್ಟು ಏರಿಕೆ ಆಗಿದೆ. ಡಿಸೆಂಬರ್‌ನಲ್ಲಿ ನಡೆದ ಆರ್‌ಬಿಐನ ಹಣಕಾಸು ನೀತಿ ಸಭೆಯು (ಎಂಪಿಸಿ) ನವೆಂಬರ್‌ನಲ್ಲಿ ಆಹಾರ ಪದಾರ್ಥಗಳ ದರ ಏರಿಕೆಯಾಗಿದ್ದ ಬಗ್ಗೆ ಚರ್ಚಿಸಿತ್ತು. ಡಿಸೆಂಬರ್‌ನಲ್ಲೂ ಬೆಲೆ ಏರಿಕೆಯಾಗಲಿದೆ ಎಂದು ಅಂದಾಜಿಸಿತ್ತು. ಹಾಗಾಗಿ, ಸಮಿತಿಯು ರೆಪೊ ದರವನ್ನು ಶೇ 6.5ರಲ್ಲಿಯೇ ಉಳಿಸಿಕೊಂಡಿತ್ತು.

‘ಪ್ರಸಕ್ತ ಹಣಕಾಸು ವರ್ಷದಲ್ಲಿ ಸಗಟು ಹಣದುಬ್ಬರ ಶೇ1ರ ಮಿತಿಯಲ್ಲಿಯೇ ಇರಲಿದೆ. ಆದಾಗ್ಯೂ, ಖಾರೀಫ್ ಅವಧಿಯಲ್ಲಿನ ಕೊಯ್ಲು, ರಾಬಿ ಕಾಲದ ಬಿತ್ತನೆ, ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಮುಂಬರುವ ದಿನಗಳಲ್ಲಿ ಸಗಟು ಹಣದುಬ್ಬರ ಮತ್ತಷ್ಟು ಏರಿಕೆ ಕಾಣಬಹುದು ಎಂದು ಕೇರ್‌ಎಡ್ಜ್‌ನ ಮುಖ್ಯ ಆರ್ಥಿಕ ತಜ್ಞೆ ರಜನಿ ಸಿನ್ಹಾ ತಿಳಿಸಿದ್ದಾರೆ.

ಸಗಟು ಹಣದುಬ್ಬರ (2023ರ ಡಿಸೆಂಬರ್– ಶೇಕಡಾವಾರು)



%	ನವೆಂಬರ್	ಡಿಸೆಂಬರ್ (2023)
ಭತ್ತ	10.44	10.54
ಧಾನ್ಯ	21.64	19.60
ತರಕಾರಿ	10.44	26.30
ಈರುಳ್ಳಿ	101.24	91.77
ಪೆಟ್ರೋಲ್	0.69	1.09
ಪಾನೀಯ	2.01	2.09
ಚರ್ಮ ಉತ್ಪನ್ನಗಳು	0.90	1.56

(ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಮಾಹಿತಿ)

ವೋಲ್ವೊ ಕಾರಿನ ಬೆಲೆ ಶೇ 2ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ವೋಲ್ವೊ ಕಾರ್ ಇಂಡಿಯಾ ತನ್ನ ಸಾಂಪ್ರದಾಯಿಕ ಎಂಜಿನ್ ವಾಹನಗಳ ಬೆಲೆಯನ್ನು ಶೇ 2ರಷ್ಟು ಹೆಚ್ಚಿಸಿದೆ.

ಆದರೆ, ವಿದ್ಯುತ್ ಚಾಲಿತ ವಾಹನಗಳ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂದು ಸೋಮವಾರ ಕಂಪನಿ ತಿಳಿಸಿದೆ.

ಎಕ್ಸ್‌ಸಿ60, ಎಸ್‌90 ಮತ್ತು ಎಕ್ಸ್‌ಸಿ90 ವಾಹನದ ಬೆಲೆಯು ಕ್ರಮವಾಗಿ ₹68.9 ಲಕ್ಷ, ₹68.25 ಲಕ್ಷ ಮತ್ತು ₹1 ಕೋಟಿವರೆಗೆ ಇದೆ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

15-01-2024

ಜಾವಾ 70/80(ಹೊಸ)	12100-12200
ಜಾವಾ 80/90(ಹೊಸ)	11500-11600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	870 (870)
ಪಾಮ್ ವಾರದ ಡೆಲಿವರಿ	842 (843)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,500 (62,350)
ಬೆಳ್ಳಿ ಕೆ.ಜಿ 72,150 (71,850)

ಆವರಣದಲ್ಲಿ ಶನಿವಾರದ ಧಾರಣೆ

ಆಕ್ಸ್‌ಫ್ಯಾಮ್‌ನಿಂದ ಸಂಪತ್ತಿನ ಅಸಮಾನ ಹಂಚಿಕೆ ವರದಿ ಬಿಡುಗಡೆ

ಬಡತನ ನಿರ್ಮೂಲನೆಗೆ 2 ಶತಮಾನ ಬೇಕು

ದಾವೋಸ್ (ಪಿಟಿಐ): ‘ವಿಶ್ವದ ಐವರು ಉದ್ಯಮಿಗಳ ಸಂಪತ್ತು 2020ರಿಂದ ದ್ವಿಗುಣಗೊಂಡಿದೆ. ಮುಂದಿನ ಹತ್ತು ವರ್ಷಗಳಲ್ಲಿ ಜಗತ್ತು ತನ್ನ ಮೊದಲ ಲಕ್ಷ ಕೋಟ್ಯಧಿಪತಿಯನ್ನು (ಟ್ರಿಲಿಯನೇರ್) ಕಾಣಲಿದೆ. ಆದರೆ, ಜಗತ್ತಿನ ಬಡತನದ ನಿರ್ಮೂಲನೆಗೆ ಇನ್ನೂ 229 ವರ್ಷಗಳು ಬೇಕಿದೆ...’

–ಇದು ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) ದಾವೋಸ್ ಶೃಂಗದ ಮೊದಲ ದಿನವಾದ ಸೋಮವಾರ ಸಂಪತ್ತಿನ ಅಸಮಾನ ಹಂಚಿಕೆ ಕುರಿತು ಆಕ್ಸ್‌ಫ್ಯಾಮ್ ಸಂಸ್ಥೆ ಬಿಡುಗಡೆಗೊಳಿಸಿರುವ ವಾರ್ಷಿಕ ಸಮೀಕ್ಷೆಯ ಸಾರ.

ವಿಶ್ವದ ಅತಿದೊಡ್ಡ ಹತ್ತು ಕಂಪನಿಗಳ ಪೈಕಿ ಏಳು ಕಂಪನಿಗಳ ಸಿಇಒ ಅಥವಾ ಪ್ರಮುಖ ಷೇರುದಾರರು ಕೋಟ್ಯಧಿಪತಿಗಳಾಗಿದ್ದಾರೆ ಎಂದು ಹೇಳಿದೆ.

ವಿಶ್ವದ ಪ್ರಮುಖ 148 ಕಂಪನಿಗಳು ₹149 ಲಕ್ಷ ಕೋಟಿ ಲಾಭ ಗಳಿಸಿವೆ. ಮೂರು ವರ್ಷಗಳ ಅವಧಿಯಲ್ಲಿ ಅವು ಸರಾಸರಿ ಶೇ 52ರಷ್ಟು ಆದಾಯ ಗಳಿಸಿವೆ. ಶ್ರೀಮಂತ ಹೂಡಿಕೆದಾರರಿಗೆ ದೊಡ್ಡ ಇಡುಗಂಟು ಸಿಕ್ಕಿದೆ. ಆದರೆ, ಕಂಪನಿಗಳಲ್ಲಿ ಲಕ್ಷಾಂತರ ಉದ್ಯೋಗಿಗಳು ಸಂಬಳದ ಕಡಿತ ಎದುರಿಸಿದ್ದಾರೆ ಎಂದು ವಿವರಿಸಿದೆ.

ಸಾರ್ವಜನಿಕ ಸೇವೆಯ ಮೂಲಕ ಕಾರ್ಪೊರೇಟ್ ಕಂಪನಿಗಳ ನಿಯಂತ್ರಣ ಮತ್ತು ಏಕಸ್ವಾಮ್ಯವನ್ನು ಬದಿಗೊತ್ತಬೇಕಿದೆ. ಸಂಪತ್ತು ಮತ್ತು ಹೆಚ್ಚುವರಿ ತೆರಿಗೆಯ ಲಾಭ ಹಂಚಿಕೆ ಮಾಡುವಂತಹ ಹೊಸ ಯುಗದ ಉದಯವಾಗಬೇಕಿದೆ ಎಂದು ಪ್ರತಿಪಾದಿಸಿದೆ.

ಅಸಮಾನತೆ ಎಂಬುದು ಆಕಸ್ಮಿಕವಲ್ಲ. ಆದರೆ, ಕೋಟ್ಯಧಿಪತಿಗಳಿಗೆ ಅವರ ಕಂಪನಿಗಳಿಂದ ಬಂಡವಾಳ ಹರಿದುಬರುತ್ತಿದೆ

ಅಮಿತಾಭ್ ಬೆಹರ್, ಹಂಗಾಮಿ ಕಾರ್ಯನಿರ್ವಾಹಕ ನಿರ್ದೇಶಕ, ಆಕ್ಸ್‌ಫ್ಯಾಮ್ ಇಂಟರ್‌ನ್ಯಾಷನಲ್

ಗಂಟೆಗೆ ₹116 ಕೋಟಿ ಗಳಿಕೆ

2020ರಿಂದ ವಿಶ್ವದ ಐವರು ಉದ್ಯಮಿಗಳ ಆಸ್ತಿಯು ₹33 ಲಕ್ಷ ಕೋಟಿಯಿಂದ ₹72 ಲಕ್ಷ ಕೋಟಿಗೆ ಏರಿಕೆಯಾಗಿದೆ. ಈ ಉದ್ಯಮಿಗಳು ಒಂದು ಗಂಟೆಯಲ್ಲಿ ₹116 ಕೋಟಿ ಆದಾಯಗಳಿಸಿದ್ದಾರೆ. ಆದರೆ, ಒಂದು ದಶಕದ ಅವಧಿಯಲ್ಲಿ 5 ಶತಕೋಟಿ ಜನರು ಬಡವರಾಗಿದ್ದಾರೆ. ಬಡವರು ಮತ್ತು ಸಿರಿವಂತರ ನಡುವೆ ದಿನೇ ದಿನೇ ಅಂತರ ಹೆಚ್ಚುತ್ತಿದೆ ಎಂದು ವರದಿ ಹೇಳಿದೆ.

ವಿಶ್ವದ ಅತಿದೊಡ್ಡ 7 ಕಂಪನಿಗಳ ಮಾರುಕಟ್ಟೆ ಬಂಡವಾಳವು ₹845 ಲಕ್ಷ ಕೋಟಿ ಆಗಿದೆ. ಇದು ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕ ದೇಶಗಳ ಜಿಡಿಪಿಗೆ ಸಮನಾಗಿದೆ ಎಂದು ವಿವರಿಸಿದೆ.

ಆದರೆ, ಒಂದು ದಶಕದ ಅವಧಿಯಲ್ಲಿ ಜಗತ್ತಿನಲ್ಲಿ ನೂರು ಕೋಟಿ ಜನರು ಸಾಂಕ್ರಾಮಿಕ ರೋಗ ಸೇರಿದಂತೆ ಹಣದುಬ್ಬರ, ಯುದ್ಧದಿಂದಾಗಿ ಆರ್ಥಿಕ ದುಃಸ್ಥಿತಿ ಎದುರಿಸಿರುವುದನ್ನು ನೋಡಿದ್ದೇವೆ. ಆದರೆ, ಕೋಟ್ಯಧಿಪತಿಗಳ ಅದೃಷ್ಟಕ್ಕೆ ಯಾವುದೇ ಭಂಗ ಎದುರಾಗಿಲ್ಲ ಎಂದಿದೆ.

ಜಗತ್ತಿನ ಶೇ 21ರಷ್ಟು ಜನಸಂಖ್ಯೆ ಹೊಂದಿರುವ ಹೊರತಾಗಿಯೂ ವಿಶ್ವದ ಉತ್ತರದಲ್ಲಿರುವ ಸಿರಿವಂತ ರಾಷ್ಟ್ರಗಳು ಜಾಗತಿಕಸಂಪತ್ತಿನಶೇ69ರಷ್ಟು ಪಾಲನ್ನು ಹೊಂದಿವೆ. ಅಲ್ಲದೇ,ಈ ಭಾಗವು ವಿಶ್ವದ ಶೇ74ಷ್ಟು ಕೋಟ್ಯಧಿಪತಿಗಳ ಸಂಪತ್ತಿನ ನೆಲೆಯೂ ಆಗಿದೆ.

ಭಾರತದಲ್ಲಿ ಉಗ್ರಾಣ ಸ್ಥಾಪನೆಗೆ ಬೋಯಿಂಗ್ ಕಂಪನಿ ನಿರ್ಧಾರ

ಮುಂಬೈ (ಪಿಟಿಐ): ಅಮೆರಿಕದ ವಿಮಾನ ತಯಾರಿಕಾ ಕಂಪನಿ ಬೋಯಿಂಗ್ ಉತ್ತರಪ್ರದೇಶದ ಖುರ್ಜಾದಲ್ಲಿ ದಾಸ್ತಾನು ಘಟಕ ಸ್ಥಾಪಿಸುವುದಾಗಿ ಘೋಷಿಸಿದೆ. ಕಂಪನಿಯು ಭಾರತದಲ್ಲಿ ತೆರೆಯುತ್ತಿರುವ ತನ್ನ ಮೊದಲ ಉಗ್ರಾಣ ಇದಾಗಿದೆ.

ಸರಕು ಸಾಗಣೆ ಸೇವೆ ಒದಗಿಸುವ ಡಿಬಿ ಶೆಂಕರ್ ಸಂಸ್ಥೆಯ ಸಹಭಾಗಿತ್ವದಡಿ ಸುಮಾರು 36 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಘಟಕ ತೆರೆಯಲಾಗುತ್ತಿದೆ. ಇದು ದೇಶೀಯಮಟ್ಟದಲ್ಲಿ ಬೋಯಿಂಗ್ ವಿಮಾನಗಳಿಗೆ ಸಂಬಂಧಿಸಿದ ಅಗತ್ಯ ಪರಿಕರಗಳ ಪೂರೈಕೆಗೆ ನೆರವಾಗಲಿದೆ ಎಂದು ಕಂಪನಿ ತಿಳಿಸಿದೆ. ಸದ್ಯ ಜಾಗತಿಕ ಮಟ್ಟದಲ್ಲಿ ಬೋಯಿಂಗ್ ಉಪಕರಣಗಳನ್ನು ವಿತರಿಸುವ ಏಳು ದಾಸ್ತಾನು ಘಟಕಗಳಿವೆ. ಭಾರತದಲ್ಲಿ ತೆರೆಯುತ್ತಿರುವುದು ಎಂಟನೇ ಘಟಕವಾಗಿದೆ.

24.8 ಕೋಟಿ ಜನ ಬಡತನದಿಂದ ಹೊರಕ್ಕೆ

ನವದೆಹಲಿ (ಪಿಟಿಐ): ದೇಶದಲ್ಲಿ 2013–14ರಿಂದ 2022–23ರ ಅವಧಿಯಲ್ಲಿ 24.8 ಕೋಟಿ ಜನರು ಬಹು ಆಯಾಮಗಳ ಬಡತನದಿಂದ ಹೊರಬಂದಿದ್ದಾರೆ ಎಂದು ನೀತಿ ಆಯೋಗದ ವರದಿ ಹೇಳಿದೆ.

ರಾಷ್ಟ್ರೀಯ ಬಹು ಆಯಾಮಗಳ ಬಡತನ ಸೂಚ್ಯಂಕ (ಎಂಪಿಐ) ಆಧಾರಿತ ವರದಿ ಪ್ರಕಾರ ದೇಶದಲ್ಲಿ 2013–14ರಲ್ಲಿ ಶೇ29.17ರಷ್ಟಿದ್ದ ಬಡತನ ಪ್ರಮಾಣವು 2022–23ರಲ್ಲಿ ಶೇ11.28ರಷ್ಟಕ್ಕೆ ಇಳಿಕೆಯಾಗಿದೆ. ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶ ಬಡವರ ಸಂಖ್ಯೆಯು ತೀವ್ರಗತಿಯಲ್ಲಿ ಕಡಿಮೆಯಾಗಿದೆ ಎಂದು ವಿವರಿಸಿದೆ.

‘ಇದು ನಮ್ಮ ಬದ್ಧತೆಗೆ ಹಿಡಿದ ಕನ್ನಡಿಯಾಗಿದೆ. ಪ್ರತಿಯೊಬ್ಬ ಭಾರತೀಯ ಪ್ರಜೆಯ ಭವಿಷ್ಯವನ್ನು ಉತ್ತಮಪಡಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಿದ್ದಾರೆ.

ಲಖನೌದ ಪರೇಡ್ ಮೈದಾನದಲ್ಲಿ ಸೋಮವಾರ ನಡೆದ ಸೇನಾ ದಿನಾಚರಣೆಯಲ್ಲಿ ಯೋಧರು ಆಕರ್ಷಕ ಪಥ ಸಂಚಲನ ನಡೆಸಿದರು –ಪಿಟಿಐ ಚಿತ್ರ

ಕೆವೈಸಿ ಅಪೂರ್ಣ ಫಾಸ್ಟ್ಯಾಗ್ ನಿಷ್ಕ್ರಿಯ

ಒಂದನೇ ಪುಟದಿಂದ...

ಬಳಕೆದಾರರು ತಮ್ಮ ಇತ್ತೀಚಿನ ಫಾಸ್ಟ್ಯಾಗ್‌ನ ಕೆವೈಸಿ ಪೂರ್ಣಗೊಂಡಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ಆರ್‌ಬಿಐ ಮಾರ್ಗಸೂಚಿಗಳ ಪ್ರಕಾರ, ಕೆವೈಸಿ ನವೀಕರಿಸಿಕೊಳ್ಳಬೇಕು. ಫಾಸ್ಟ್ಯಾಗ್ ಬಳಕೆದಾರರು ತಮ್ಮ ಬ್ಯಾಂಕ್‌ಗಳ ಮೂಲಕ ಈ ಹಿಂದೆ ಪಡೆದಿದ್ದ ಎಲ್ಲ ಫಾಸ್ಟ್ಯಾಗ್‌ಗಳನ್ನು ಬಿಟ್ಟು, ‘ಒಂದು ವಾಹನ, ಒಂದು ಫಾಸ್ಟ್ಯಾಗ್’ ಉಪಕ್ರಮವನ್ನು ಅನುಸರಿಸಬೇಕು ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಈ ಹಿಂದೆ ನೀಡಲಾಗಿರುವ ಎಲ್ಲ ಫಾಸ್ಟ್ಯಾಗ್‌ಗಳು ಕಪ್ಪುಪಟ್ಟಿಗೆ ಸೇರಿಸುವುದರಿಂದ ಅವುಗಳನ್ನು ಜ.31ರ ನಂತರ ನಿಷ್ಕ್ರಿಯಗೊಳಿಸಲಾಗುತ್ತದೆ. ಇತ್ತೀಚಿನ ಫ್ಯಾಸ್ಟ್ಯಾಗ್‌ಗಳ ಖಾತೆ ಮಾತ್ರ ಸಕ್ರಿಯವಾಗಿರಲಿದೆ. ಬಳಕೆದಾರರು ಹೆಚ್ಚಿನ ಮಾಹಿತಿಗೆ ಹತ್ತಿರದ ಟೋಲ್ ಪ್ಲಾಜಾಗಳು ಅಥವಾ ಆಯಾ ವಿತರಕ ಬ್ಯಾಂಕ್‌ಗಳ ಟೋಲ್-ಫ್ರೀ ಗ್ರಾಹಕ ಸೇವಾ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಎನ್‌ಎಚ್‌ಎಐ ತಿಳಿಸಿದೆ.

ಫಾಸ್ಟ್ಯಾಗ್‌ನಿಂದ ದೇಶದಲ್ಲಿ ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ವ್ಯವಸ್ಥೆಯಲ್ಲಿ ಕ್ರಾಂತಿಯಾಗಿದೆ. ಪ್ರಸ್ತುತ 8 ಕೋಟಿಗೂ ಹೆಚ್ಚು ಬಳಕೆದಾರರರು ಫಾಸ್ಟ್ಯಾಗ್ ಬಳಸುತ್ತಿದ್ದಾರೆ. ಆದರೆ, ಫಾಸ್ಟ್ಯಾಗ್‌ಗಳನ್ನು ಕೆಲವೊಮ್ಮೆ ಉದ್ದೇಶಪೂರ್ವಕವಾಗಿಯೇ ವಾಹನದ ವಿಂಡ್‌ಸ್ಕ್ರೀನ್‌ನಲ್ಲಿ ಅಳವಡಿಸಿಕೊಳ್ಳುತ್ತಿಲ್ಲ. ಇದರಿಂದಾಗಿ ಟೋಲ್ ಪ್ಲಾಜಾಗಳಲ್ಲಿ ಅನಗತ್ಯ ವಿಳಂಬವಾಗುತ್ತದೆ. ರಾಷ್ಟ್ರೀಯ ಹೆದ್ದಾರಿ ಸಹ ಬಳಕೆದಾರರಿಗೂ ಅನನುಕೂಲ ಆಗುತ್ತದೆ. ಇದನ್ನು ತಪ್ಪಿಸಬೇಕಿದೆ ಎಂದು ಅದು ಹೇಳಿದೆ.

ಚುನಾವಣೆಯಲ್ಲಿ ಗೆಲುವು: ಮೋದಿ, ಪುಟಿನ್ ಹಾರೈಕೆ

ಮಾಸ್ಕೊ(ರಾಯಿಟರ್ಸ್): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೋಮವಾರ ದೂರವಾಣಿ ಕರೆ ಮಾಡಿ, ಉಕ್ರೇನ್ ಬಿಕ್ಕಟ್ಟು ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿದ್ದಾರೆ ಎಂದು ಅಧ್ಯಕ್ಷರ ನಿವಾಸ ಕ್ರೆಮ್ಲಿನ್ ಪ್ರಕಟಣೆ ತಿಳಿಸಿದೆ.



ಪುಟಿನ್

‘ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ಅವರು ಗೆಲುವು ಸಾಧಿಸಲಿ ಎಂಬುದಾಗಿ ಪುಟಿನ್ ಆಶಿಸಿದರು. ಅದೇ ರೀತಿ ಅಧ್ಯಕ್ಷೀಯ ಚುನಾವಣೆಯಲ್ಲಿ ಪುಟಿನ್ ಅವರಿಗೆ ಗೆಲುವಾಗಲಿ ಎಂದು ಮೋದಿ ಹಾರೈಸಿದರು’ ಎಂದೂ ಪ್ರಕಟಣೆ ತಿಳಿಸಿದೆ.

‘ಉಭಯ ದೇಶಗಳಿಗೆ ಲಾಭದಾಯಕವಾಗುವಂತೆ ದ್ವಿಪಕ್ಷೀಯ ಬಾಂಧವ್ಯ ವೃದ್ಧಿಸಬೇಕು’ ಎಂಬ ಬಗ್ಗೆ ಮಾತುಕತೆ ನಡೆಸಿದರು. ಉಕ್ರೇನ್‌ನೊಂದಿಗೆ ನಡೆಯುತ್ತಿರುವ ಯುದ್ಧ ಕೂಡ, ಉಭಯ ನಾಯಕರ ನಡುವಿನ ಚರ್ಚೆ ಸಂದರ್ಭದಲ್ಲಿ ಪ್ರಸ್ತಾಪವಾಯಿತು’ ಎಂದು ಕ್ರೆಮ್ಲಿನ್ ಜಾಲತಾಣದಲ್ಲಿ ಹೇಳಲಾಗಿದೆ.

ವೈಕುಂಠ ಸಮಾರಾಧನೆ



ಶ್ರೀ ಟಿ. ಕೃಷ್ಣಾರೆಡ್ಡಿ, ಜಮೀನ್ದಾರರು
(ಲೇಟ್. ಶ್ರೀಮತಿ ಮುನಿಯಮ್ಮ ಮತ್ತು ಶ್ರೀ ತಿಮ್ಮರೆಡ್ಡಿಯವರ ಜೇಷ್ಠ ಪುತ್ರ)
ಇವರು ದಿನಾಂಕ: 07.01.2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ: 17.01.2024 ರಂದು ಬುಧವಾರ ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಮೃತರ ಸ್ವಗೃಹ, ಪಣತ್ತೂರು, ಬೆಂಗಳೂರು–560087 ಇಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು: ಧರ್ಮಪತ್ನಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಪಣತ್ತೂರು. ಮೊಬೈಲ್: 9731270709, 9341096695

IN FOND REMEMBRANCE
10th Death Anniversary

H.KARIYAPPA, B.E
(Electronics)
Addnl. Gen Manager (Rtd) BEL
Founder Trustee & Chairman of Triveni Group of Educational Institutions, Bangalore
Ex. President of BEL Employees House Building Co-operative Society.
Left for Heavenly abode on 16-01-2014
"Time may pass, but you will remain in our hearts. We stand for fulfilling your dreams"
By: B. Savithramma (Wife), Monika (Daughter), Manjunath (Son) & family Members

ಸವಿನೆನಪು

ಕೆ.ಬೊಬ್ಬಣ್ಣ ರೆಡ್ಡಿ



ಬಾಲಮ್ಮ & ಬಿ. ಅಣ್ಣಯ್ಯ ರೆಡ್ಡಿ

ಶ್ರೀಮತಿ ಸುನಿತಾ.ವಿ.

ಎ. ಜಯರಾಮ ರೆಡ್ಡಿ

ಎ. ನಾರಾಯಣ ರೆಡ್ಡಿ

ಸದಾ ನಿಮ್ಮೆಲ್ಲರ ನೆನಪಿನಲ್ಲಿರುವ
ವಿ.ಬಿ.ಸಿ.
ಕುಟುಂಬವರ್ಗದವರು
ಕೋಡಿಹಳ್ಳಿ, ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

✓ ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9035492999/ 9663563555

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

15.03.2024 04.04.2024 16.04.2024 17.05.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 05.03.2024 12.04.2024 ದುಬೈ,ಅಬುದಾಬಿ 5 ದಿನಗಳು. 06.03.2024 12.04.2024 05.05.2024 ಭೂತಾನ್ 8 ದಿನಗಳು. 15.03.2024 15.04.2024 21.05.2024 ನೇಪಾಳ 9 ದಿನಗಳು. 06.03.2024 04.04.2024 ಶ್ರೀಲಂಕಾ 7 ದಿನಗಳು. 02.04.2024 03.05.2024 26.05.2024 ಅಸ್ಸಾಂ,ಮೇಘಾಲಯ 9 ದಿನಗಳು. 15.03.2024 29.03.2024 16.04.2024 ಕಾಶಿ,ಗಯಾ,ಅಯೋಧ್ಯಾ 8 ದಿನಗಳು. 14.03.2024 12.04.2024 ಗುಜರಾತ್ 8 ದಿನಗಳು. 15.03.2024 26.03.2024 ರಾಜಸ್ಥಾನ್ 10 ದಿನಗಳು. 12.04.2024 06.05.2024 ಕಾಶ್ಮೀರ್,ವೈಷ್ಣೊದೇವಿ 6/8 ದಿನಗಳು. 05.04.2024 25.04.2024 14.05.2024 ಶಿಮ್ಲಾ,ಕುಲುಮನಾಲಿ 7 ದಿನಗಳು. 12.03.2024 05.04.2024 ಮಧ್ಯಪ್ರದೇಶ 10 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು.03 9448402248 7022547922

15/02/2024ರಿಂದ ಮಧುರೈ, ರಾಮೇಶ್ವರ,ನವಗ್ರಹ ಹಾಗೂ ವಾಸವಿಪೆನ್ನಗೊಂಡ, ಪಂಚರಾಮ ಕ್ಷೇತ್ರ. 14/03/2024ರಿಂದ 16ದಿನಗಳ ಮುಕ್ತಿನಾಥ್, ಪೋಕ್ರಾ,ಕಾಶಿ,ಅಯೋಧ್ಯ, ಚಾರುಧಾಮ್,ವೈಷ್ಣೋದೇವಿ, ಕಾಶ್ಮಿರ ಯಾತ್ರೆಗಳಿಗೆ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್, ಮಿನರ್ವ ಸರ್ಕಲ್. ಬೆಂಗಳೂರು-04. 8105657052/ 9480182865.

Pilgrimage Tours

★ವಿಮಾನದಲ್ಲಿ★ 14.02.2024, 10.03.2024 6ದಿನಗಳು ಕಾಶಿ,ಪ್ರಯಾಗ, ಗಯಾ ಅಯೋಧ್ಯೆ. 10.04.2024 16ದಿನಗಳು ನೇಪಾಳ, ಮುಕ್ತಿನಾಥ,ಜನಕಪುರಿ. ಆರ್.ಗಾಂಧಿ ಟೂರ್ಸ್. 9945445809/ 9902433500

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/1 ಪುರಿ ಜಗನ್ನಾಥ್, ಭುನೇಶ್ವರ. 25/01 ಶಿರಡಿ,3ಜ್ಯೋತಿರ್ಲಿಂಗ. 25/1 ಹೈದರಬಾದ್ 5 ದಿನಗಳು. 9591017782, 9964527782

ಭವಿಷ್ಯ

Astrology

★ಮಹಾಮಾಂತ್ರಿಕ ಜ್ಯೋತಿಷ್ಯ★ ವಿದ್ವಾನ್.ಗುರು ಶ್ರೀ.ದೇವಾನಂದ್ ರವರಿಂದ ಅಂಡ,ಪಿಂಡ,ಬ್ರಹ್ಮಾಂಡದ 100008 ಅತೀಂದ್ರಿಯ 888 ಚಾರಣಮಾರಣ ಸಂಮೋಹನ ಸ್ತಂಭನ,ವಶೀಕರಣ,ಉಚ್ಛಾಟನಾ ಕ್ರಿಯಾಕರ್ಮಗಳಿಂದ ಸಂಸಾರಿಕ ವೈಯಕ್ತಿಕ,ಆರ್ಥಿಕ,ಆರೋಗ್ಯ ಸಂಬಂಧಿಕ ಕರ್ಮಗಳ ಇಂದೇ ಪರಿಹಾರಕ್ಕೆ ಸಂಪರ್ಕಿಸಿ:9845005009

ಪ್ರಜಾವಾಣಿ ಕ್ಲಾಸಿಫೈಡ್ಸ್ ರಿಯಲ್ ಎಸ್ಟೇಟ್ ಪ್ರತಿಯೊಬ್ಬರಿಗೂ ಉಪಯುಕ್ತ
ನೀವು ನಿಮ್ಮ ಮನೆ/ಸೈಟ್ ಮಾರಾಟ/ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
#1 ಇಲ್ಲಿ ಜಾಹೀರಾತು ನೀಡಿರಿ
ಬುಕ್ ಮಾಡಿ
www.dhclassifieds.com
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ!
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560
+91 9886213331
080- 45557163/164

ರಾಮ ಮಂದಿರ– ಜನವರಿ 23ರಿಂದ ಭಕ್ತರು, ಸಾರ್ವಜನಿಕರಿಗೆ ಮುಕ್ತ: ಟ್ರಸ್ಟ್ ಕಾರ್ಯದರ್ಶಿ ಚಂಪತ್ ರಾಯ್

ಅಯೋಧ್ಯೆ: ಧಾರ್ಮಿಕ ವಿಧಿ ಇಂದಿನಿಂದ

ಪ್ರಜಾವಾಣಿ ವಾರ್ತೆ/ ಪಿಟಿಐ

ಅಯೋಧ್ಯೆ/ಲಖನೌ: ಅಯೋಧ್ಯೆಯಲ್ಲಿ ಜನವರಿ 22ರಂದು ನಡೆಯಲಿರುವ ರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಗೆ ಪೂರ್ವಭಾವಿಯಾಗಿ ವಿವಿಧ ಧಾರ್ಮಿಕ ವಿಧಿಗಳಿಗೆ ಮಂಗಳವಾರ ಚಾಲನೆ ಸಿಗಲಿದೆ.

'ಪ್ರಾಣ ಪ್ರತಿಷ್ಠಾಪನೆಗೆ ಪೂರ್ವಭಾವಿ ಆಚರಣೆಗಳು ಭಾನುವಾರ ದವರೆಗೆ ಮುಂದುವರಿಯಲಿವೆ. ವಿಶೇಷ ಪೂಜೆಗಳನ್ನೂ ಇದು ಒಳಗೊಂಡಿರಲಿದೆ' ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಕಾರ್ಯದರ್ಶಿ ಚಂಪತ್ ರಾಯ್ ಸೋಮವಾರ ತಿಳಿಸಿದರು.

ಕೆಲವು ಧಾರ್ಮಿಕ ವಿಧಿಗಳಿಗೆ ಮಕರ ಸಂಕ್ರಾಂತಿಯ ದಿನವಾದ ಸೋಮವಾರವೇ ಚಾಲನೆ ಲಭಿಸಿದೆ ಎಂದು ಟ್ರಸ್ಟ್‌ನ ಅಧಿಕಾರಿಗಳು ಹೇಳಿದರು. 11 ಮಂದಿ 'ಯಜಮಾನರು' (ಪುರೋಹಿತರು ಯಾರ ಪರವಾಗಿ ಧಾರ್ಮಿಕ ಆಚರಣೆ ಅಥವಾ ಯಜ್ಞವನ್ನು ನಡೆಸುವರೋ ಅವರು) ವೈದಿಕ ಸಂಪ್ರದಾಯಗಳಿಗೆ ಅನುಗುಣವಾಗಿ ಎಂಟು ದಿನಗಳ ಧಾರ್ಮಿಕ ವಿಧಿಗಳನ್ನು ಅಯೋಧ್ಯೆಯಲ್ಲಿ ಸೋಮವಾರ ಆರಂಭಿಸಿದರು.

'ಧಾರ್ಮಿಕ ವಿಧಿಗಳಲ್ಲಿ ದೋಷನಿವಾರಣೆ, ಗೋದಾನ ಮತ್ತು ಪುಣ್ಯ ಸ್ನಾನವೂ ಸೇರಿದೆ. ಧಾರ್ಮಿಕ ಆಚರಣೆ ಕೈಗೊಂಡಿರುವ ಎಲ್ಲರೂ ಮುಂದಿನ ಎಂಟು ದಿನಗಳ ಕಾಲ ರಾಮ ಜಪ ಮಾಡಲಿದ್ದಾರೆ. ಎಲ್ಲ ಆಚರಣೆಗಳು ಜನವರಿ 22ರಂದು ಕೊನೆಗೊಳ್ಳಲಿವೆ' ಎಂದು ರಾಯ್ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್, ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಮತ್ತು ಟ್ರಸ್ಟ್ ಅಧ್ಯಕ್ಷ ಮಹಂತ ನೃತ್ಯ ಗೋಪಾಲ ದಾಸ್ ಅವರು ಪ್ರಾಣ ಪ್ರತಿಷ್ಠಾಪನೆ ಸಮಯದಲ್ಲಿ ಗರ್ಭಗುಡಿಯೊಳಗೆ ಇರಲಿದ್ದಾರೆ ಎಂದು ಮಾಹಿತಿ ನೀಡಿದರು.

'ಜನವರಿ 23ರಿಂದ ಭಕ್ತರು, ಸಾರ್ವಜನಿಕರಿಗೆ ರಾಮಮಂದಿರಕ್ಕೆ ಭೇಟಿ ನೀಡಲು ಅವಕಾಶ ಕಲ್ಪಿಸಲಾಗುವುದು' ಎಂದು ತಿಳಿಸಿದರು.

ಎಂಜಿನಿಯರುಗಳು ಒಳಗೊಂಡಂತೆ ರಾಮ ಮಂದಿರ ನಿರ್ಮಾಣದಲ್ಲಿ ಭಾಗಿಯಾಗಿರುವ ಸುಮಾರು 500 ಮಂದಿ, ಟ್ರಸ್ಟ್‌ನ ಎಲ್ಲ ಸದಸ್ಯರು ಮತ್ತು ಸುಮಾರು 150 ಪಂಥಗಳ ಸ್ವಾಮೀಜಿಗಳು ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಪ್ರಾಣ ಪ್ರತಿಷ್ಠಾಪನಾ ದಿನ ಸಮೀಪಿಸುತ್ತಿರುವುದರಿಂದ ಅಯೋಧ್ಯೆಯಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆಯುವ ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕಾಗಿ ಬ್ರಹ್ಮಕುಂಡದಿಂದ ಸಂಗ್ರಹಿಸಲಾದ ಗಂಗಾಜಲದ 'ಕಲಶ ಯಾತ್ರೆ'ಗೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಹರಿದ್ವಾರದಲ್ಲಿ ಸೋಮವಾರ ಚಾಲನೆ ನೀಡಿದರು –ಪಿಟಿಐ ಚಿತ್ರ

₹14.5 ಕೋಟಿ ಮೌಲ್ಯದ ನಿವೇಶನ ಖರೀದಿಸಿದ ಅಮಿತಾಭ್

ನವದೆಹಲಿ (ಪಿಟಿಐ): ಬಾಲಿವುಡ್ ನಟ ಅಮಿತಾಭ್ ಬಚ್ಚನ್ ಅವರು ಅಯೋಧ್ಯೆಯಲ್ಲಿ ₹14.5 ಕೋಟಿ ಮೌಲ್ಯದ 10 ಸಾವಿರ ಚದರ ಅಡಿ ನಿವೇಶನ ಖರೀದಿಸಿದ್ದಾರೆ.

ಅಯೋಧ್ಯೆಯಲ್ಲಿ ಕೈಗೊಂಡಿರುವ 'ದಿ ಸರಯೂ' ಯೋಜನೆಯ ವ್ಯಾಪ್ತಿಯಲ್ಲಿ ಈ ನಿವೇಶನ ಖರೀದಿಸಲಾಗಿದೆ. ಮುಂಬೈ ಮೂಲದ 'ಹೌಸ್ ಆಫ್ ಅಭಿನಂದನ್ ಲೋಧಾ' ರಿಯಲ್ ಎಸ್ಟೇಟ್ ಕಂಪನಿ ಯೋಜನೆಯನ್ನು ಅಭಿವೃದ್ಧಿಪಡಿಸಲಿದೆ. ಅಮಿತಾಭ್ ಅವರು ನಿವೇಶನ ಖರೀದಿಸಿರುವುದನ್ನು ಲೋಧಾ ಕಂಪನಿ ದೃಢಪಡಿಸಿದೆ.

'ಅಯೋಧ್ಯೆಗೆ ನನ್ನ ಹೃದಯದಲ್ಲಿ ವಿಶೇಷ ಸ್ಥಾನವಿದೆ. ಜಾಗತಿಕ ಆಧ್ಯಾತ್ಮಿಕ ರಾಜಧಾನಿ ಎನಿಸಿರುವ ಈ ನಗರದಲ್ಲಿ ನನ್ನ ಮನೆ ನಿರ್ಮಿಸುವುದನ್ನು ಎದುರು ನೋಡುತ್ತಿದ್ದೇನೆ' ಎಂದು ಅಮಿತಾಭ್ ಹೇಳಿದ್ದಾರೆ.

'ದಿ ಸರಯೂ' ಯೋಜನೆ ಒಟ್ಟು 45 ಎಕರೆ ಪ್ರದೇಶದಲ್ಲಿ ತಲೆಎತ್ತಲಿದೆ. ಸರಯೂ ನದಿ ದಡದಲ್ಲಿ ಹೋಟೆಲ್ ನಿರ್ಮಾಣವೂ ಈ ಯೋಜನೆಯಲ್ಲಿ ಸೇರಿದೆ.

- ಪ್ರಾಣ ಪ್ರತಿಷ್ಠಾಪನಾ ಸಮಾರಂಭಕ್ಕೆ ಟ್ರಸ್ಟ್‌ನಿಂದ 7 ಸಾವಿರಕ್ಕೂ ಅಧಿಕ ಗಣ್ಯರಿಗೆ ಆಹ್ವಾನ
- ಕ್ರಿಕೆಟಿಗರಾದ ಸಚಿನ್ ತೆಂಡೂಲ್ಕರ್, ವಿರಾಟ್ ಕೊಹ್ಲಿ, ಬಾಲಿವುಡ್ ನಟ ಅಮಿತಾಭ್ ಬಚ್ಚನ್, ಉದ್ಯಮಿಗಳಾದ ಮುಕೇಶ್ ಅಂಬಾನಿ ಮತ್ತು ಗೌತಮ್ ಅದಾನಿ ಅವರಿಗೆ ಆಹ್ವಾನ ನೀಡಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.
- ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ, ಆರ್ಚರಿ ಸ್ಪರ್ಧಿ ದೀಪಿಕಾ ಕುಮಾರಿ ಮತ್ತು ಗಾಯಕ ಮುಕುಂದ್ ನಾಯಕ್ ಅವರು ಜಾರ್ಖಂಡ್ ರಾಜ್ಯದಿಂದ ಆಹ್ವಾನಿತರಾದ 16 ಗಣ್ಯರಲ್ಲಿ ಸೇರಿದ್ದಾರೆ.

ಧರ್ಮಸ್ಥಳದಿಂದ ಅಯೋಧ್ಯೆಗೆ ಬೆಳ್ಳಿ ಪೂಜಾ ಪರಿಕರ

ಪ್ರಜಾವಾಣಿ ವಾರ್ತೆ

ಉಡುಪಿ: ಅಯೋಧ್ಯೆಯಲ್ಲಿ ಶ್ರೀರಾಮನ ನಿತ್ಯಪೂಜೆಗಾಗಿ ಧರ್ಮಸ್ಥಳ ಕ್ಷೇತ್ರದ ವತಿಯಿಂದ ಬೆಳ್ಳಿಯ ಪರಿಕರಗಳನ್ನು ಸಮರ್ಪಿಸಲಾಯಿತು.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಕಳಿಸಿಕೊಟ್ಟ ಪೂಜಾ ಪರಿಕರಗಳನ್ನು ಅವರ ಸಹೋದರ ಹರ್ಷೇಂದ್ರ ಕುಮಾರ್ ಅವರು, ಅಯೋಧ್ಯೆ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ವಿಶ್ವಸ್ಥರಾಗಿರುವ ವಿಶ್ವಪ್ರಸನ್ನತೀರ್ಥ ಶ್ರೀಗಳಿಗೆ ಇಲ್ಲಿಯ ಪೇಜಾವರ ಮಠದಲ್ಲಿ ಸೋಮವಾರ ಹಸ್ತಾಂತರಿಸಿದರು. ರಾಮನ ಪೂಜೆಗೆ ಬಳಕೆಯಾಗುವ ಬೆಳ್ಳಿ ಬಿಂದಿಗೆ (ಕಲಶ), ಅಭಿಷೇಕ ಶಂಖ, ತಟ್ಟೆ, ಲೋಟಗಳು, ಆರತಿ, ರಜತ ಬೀಸಣಿಗೆ, ಗಂಟೆ, ಅಭಿಷೇಕ ತೀರ್ಥಪಾತ್ರೆಯನ್ನೊಳಗೊಂಡ ಪರಿಕರಗಳನ್ನು ನೀಡಲಾಯಿತು.

ಪೂಜಾ ಪರಿಕರಗಳನ್ನು ಸ್ವೀಕರಿಸಿದ ಪೇಜಾವರ ಶ್ರೀ, 'ಶ್ರೀರಾಮ ಮತ್ತು ಶಿವನ ಅನ್ಯೋನ್ಯತೆಯ ಬಗ್ಗೆ ಪುರಾಣಗಳಲ್ಲಿ ಉಲ್ಲೇಖವಿದೆ. ವಿಷ್ಣು ಸಹಸ್ರನಾಮಕ್ಕೆ ಸಮನಾದ ಶ್ರೀರಾಮ ನಾಮವನ್ನು ಸ್ವತಃ ಶಿವನೇ ಸತಿಯಾದ ಪಾರ್ವತಿಗೆ ಉಪದೇಶಿಸಿದ್ದಾನೆ. ಪ್ರಸಿದ್ಧ ಶಿವನ ಕ್ಷೇತ್ರವಾದ ಧರ್ಮಸ್ಥಳ ಕ್ಷೇತ್ರಕ್ಕೂ ಅಯೋಧ್ಯೆ ಶ್ರೀರಾಮನ ಸನ್ನಿಧಿಗೂ ಅವಿನಾಭಾವ ಸಂಬಂಧವಿದ್ದು ಇದು ಮತ್ತಷ್ಟು ವೃದ್ಧಿಯಾಗಲಿ' ಎಂದು ಆಶಿಸಿದರು.

ಧರ್ಮಸ್ಥಳದ ಪ್ರಧಾನ ಅರ್ಚಕ ರಾಮಕೃಷ್ಣ ಕಲ್ಲೂರಾಯ, ಮಣೆಗಾರ ವಸಂತ ಮಂಜಿತ್ತಾಯ, ಪರೀಕ ಸೌಖ್ಯವನ ಪ್ರಕೃತಿ ಚಿಕಿತ್ಸೆ ಆಸ್ಪತ್ರೆಯ ವ್ಯವಸ್ಥಾಪಕ ಪ್ರವೀಣ ಕುಮಾರ್, ಪ್ರದೀಪ ಕುಮಾರ್ ಕಲ್ಕೂರ, ಯಕ್ಷಗಾನ ಕಲಾರಂಗದ ಮಾಜಿ ಅಧ್ಯಕ್ಷ ಗಣೇಶ ರಾವ್, ಪೇಜಾವರ ಮಠದ ವ್ಯವಸ್ಥಾಪಕ ಸುಬ್ರಹ್ಮಣ್ಯ ಭಟ್, ವಾಸುದೇವ ಭಟ್ ಇದ್ದರು.

ಧರ್ಮಸ್ಥಳ ಕ್ಷೇತ್ರದ ವತಿಯಿಂದ ಸೋಮವಾರ ಅಯೋಧ್ಯೆಯಲ್ಲಿ ಶ್ರೀರಾಮನ ನಿತ್ಯಪೂಜೆಗಾಗಿ ಬೆಳ್ಳಿಯ ಪರಿಕರಗಳನ್ನು ಸಮರ್ಪಿಸಲಾಯಿತು

ರಾಮ ಮಂದಿರ ಅಪೂರ್ಣ ಎನ್ನಲು ಸಾಧ್ಯವಿಲ್ಲ: ಜಗ್ಗಿ ವಾಸುದೇವ್

ಚಿಕ್ಕಬಳ್ಳಾಪುರ: 'ರಾಮ ಮಂದಿರ ಜನರ ಭಕ್ತಿಯ ಪ್ರತಿರೂಪ. ಅದನ್ನು ಅಪೂರ್ಣ ಎನ್ನಲು ಸಾಧ್ಯವಿಲ್ಲ' ಎಂದು ಇಶಾ ಯೋಗ ಕೇಂದ್ರದ ಸದ್ಗುರು ಜಗ್ಗಿ ವಾಸುದೇವ್ ತಿಳಿಸಿದರು.

ತಾಲ್ಲೂಕಿನ ಆವಲಗುರ್ಕಿಯ ಇಶಾ ಯೋಗಕೇಂದ್ರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವಾಲಯ ಎನ್ನುವುದು ಎಂದಿಗೂ ಅಪೂರ್ಣವಲ್ಲ. ದೇವಾಲಯದಲ್ಲಿ ನಿರಂತರವಾಗಿ ಒಂದಿಲ್ಲಾ ಒಂದು ಅಭಿವೃದ್ಧಿ ಕೆಲಸವನ್ನು ಭಕ್ತರು ಮಾಡುತ್ತಿರುತ್ತಾರೆ. ಇದು ಭಕ್ತನ ಪ್ರವೃತ್ತಿ ಎಂದು ಸಮರ್ಥಿಸಿಕೊಂಡರು.

9.33 ಕೋಟಿ ಸಸಿ: ಕಾವೇರಿ ಕೂಗು ಅಭಿಯಾನದಲ್ಲಿ ರೈತರು 9.33 ಕೋಟಿ ಸಸಿ ನೆಟ್ಟಿದ್ದಾರೆ. ಇದಕ್ಕೆ ಇಸ್ರೊ ಸಹಕಾರದಲ್ಲಿ ಜಿಯೊ ಟ್ಯಾಗ್ ಮಾಡಲಾಗಿದೆ. ಯಾವ ಸಸಿ ಎಷ್ಟು ಬೆಳೆಯುತ್ತಿದೆ ಎನ್ನುವ ಮಾಹಿತಿಯನ್ನು ಇಸ್ರೊ ನೀಡುತ್ತಿದೆ ಎಂದರು.

'ನಮೋ ಸ್ಕೈ ಡೈವಿಂಗ್ಸ್' ತಂಡದ ಸದಸ್ಯರು ಬ್ಯಾಂಕಾಕ್‌ನಲ್ಲಿ 'ಜೈ ಶ್ರೀರಾಮ್' ಎಂಬ ಬ್ಯಾನರ್ ಹಿಡಿದು ಸ್ಕೈ ಡೈವಿಂಗ್ ಮಾಡಿದರು

ಶ್ರೀರಾಮ ಭಕ್ತರಿಂದ ಸ್ಕೈ ಡೈವಿಂಗ್

ಪ್ರಜಾವಾಣಿ ವಾರ್ತೆ

ವಿಜಯಪುರ: ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದ 'ನಮೋ ಸ್ಕೈ ಡೈವಿಂಗ್' ತಂಡದ ಸದಸ್ಯರು ಬ್ಯಾಂಕಾಕ್‌ನಲ್ಲಿ 'ಜೈ ಶ್ರೀರಾಮ್' ಘೋಷಣೆಯೊಂದಿಗೆ ಸ್ಕೈಡೈವಿಂಗ್ ಮಾಡಿದರು.

ತಂಡದ ಸದಸ್ಯರಾದ ವಿಜಯಪುರದ ರಾಜಶೇಖರ ಮುತ್ತಿನಪೆಂಡಿಮಠ, ಬೆಂಗಳೂರಿನ ರಾಹುಲ್ ಡಾಕ್ರೆ, ಅನುಭವ ಅಗರವಾಲ್ ಮತ್ತು ಮಹಾರಾಷ್ಟ್ರದ ಹಿಮಾಂಶು ಸಾಬಳೆ ಅವರು 'ಜೈ ಶ್ರೀರಾಮ್' ಎಂದು ಬರೆದಿರುವ ಹಾಗೂ ಅಯೋಧ್ಯೆಯ ನೂತನ ಶ್ರೀರಾಮ ಮಂದಿರದ ಚಿತ್ರ ಇರುವ ಬ್ಯಾನರ್ ಕೈಯಲ್ಲಿ ಹಿಡಿದು 13 ಸಾವಿರ ಅಡಿ ಎತ್ತರದಿಂದ ಸುರಕ್ಷಿತವಾಗಿ ಸ್ಕೈ ಡೈವಿಂಗ್ ಮಾಡಿದರು.

ಕೋರ್ಟ್ ಮೆಟ್ಟಿಲೇರಿದ ಬಣಗಳು

ಸ್ಪೀಕರ್ ನಾರ್ವೇಕರ್ ಆದೇಶದ ಕುರಿತು ಅಸಮಾಧಾನ

ನವದೆಹಲಿ/ಮುಂಬೈ (ಪಿಟಿಐ): ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಪಕ್ಷವೇ 'ನಿಜವಾದ ಶಿವಸೇನಾ' ಎಂದು ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಶಿವಸೇನಾ (ಯುಬಿಟಿ) ಬಣವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಶಿಂದೆ ಸೇರಿದಂತೆ ಅವರ ಬಣದ 16 ಶಾಸಕರನ್ನು ಅನರ್ಹಗೊಳಿಸಬೇಕು ಎಂಬ ಮನವಿಯನ್ನು ಸ್ಪೀಕರ್ ನಾರ್ವೇಕರ್ ಅವರು ತಳ್ಳಿಹಾಕಿದ್ದರು. ಅಷ್ಟೇ ಅಲ್ಲ, ಠಾಕ್ರೆ ಬಣದ ಶಾಸಕರನ್ನು ಅನರ್ಹಗೊಳಿಸಬೇಕು ಎಂದು ಶಿಂದೆ ಬಣ ಇರಿಸಿದ್ದ ಕೋರಿಕೆಯನ್ನು ಕೂಡ ಅವರು ಪುರಸ್ಕರಿಸಿರಲಿಲ್ಲ.

ತಮ್ಮ ಪಕ್ಷದ ವಿರುದ್ಧವಾಗಿ ಸಾಗುವ ಶಾಸಕರನ್ನು ಅನರ್ಹಗೊಳಿಸುವ ಉದ್ದೇಶವನ್ನು ಸಂವಿಧಾನದ 10ನೆಯ ಪರಿಚ್ಛೇದವು ಹೊಂದಿದೆ. 'ಆದರೆ, ಬಹುಸಂಖ್ಯೆಯ ಶಾಸಕರನ್ನೇ ರಾಜಕೀಯ ಪಕ್ಷವೆಂದು ತೀರ್ಮಾನಿಸಿದರೆ, ನಿಜವಾದ ಪಕ್ಷದ ಸದಸ್ಯರು ಬಹುಸಂಖ್ಯೆಯ ಶಾಸಕರು ಹೇಳುವುದನ್ನು ಕೇಳುತ್ತ ಕೂರಬೇಕಾಗುತ್ತದೆ. ಇದು ಸಂವಿಧಾನಕ್ಕೆ ವಿರುದ್ಧವಾದದ್ದು, ಹೀಗಾಗಿ ಸ್ಪೀಕರ್ ನೀಡಿರುವ ಆದೇಶವನ್ನು ರದ್ದುಪಡಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಬಹುಸಂಖ್ಯೆಯ ಶಾಸಕರು ಇದ್ದ ಗುಂಪು ರಾಜಕೀಯ ಪಕ್ಷವನ್ನು ಪ್ರತಿನಿಧಿಸುತ್ತದೆ ಎಂದು ಹೇಳುವ ಮೂಲಕ ಸ್ಪೀಕರ್ ಅವರು, ಶಾಸಕಾಂಗ ಪಕ್ಷವನ್ನೇ ರಾಜಕೀಯ ಪಕ್ಷವೆಂದು ಕರೆದಿದ್ದಾರೆ. ಇದು ಸುಭಾಷ್ ದೇಸಾಯಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಹೇಳಿದ್ದ ನಿಯಮಗಳಿಗೆ ವಿರುದ್ಧವಾಗಿದೆ ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ಚುನಾವಣಾ ಆಯೋಗವು ಕೂಡ ಶಿಂದೆ ನೇತೃತ್ವದ ಬಣಕ್ಕೆ ಶಿವಸೇನಾ ಪಕ್ಷದ ಚಿಹ್ನೆಯನ್ನು ನೀಡಿದೆ.

ಶಿಂದೆ ಬಣದಿಂದ ಹೈಕೋರ್ಟ್‌ಗೆ ಅರ್ಜಿ: ಠಾಕ್ರೆ ಬಣದ 14 ಶಾಸಕರನ್ನು ಅನರ್ಹಗೊಳಿಸದೆ ಇರುವ ಸ್ಪೀಕರ್ ನಿಲುವನ್ನು ಪ್ರಶ್ನಿಸಿ ಶಿಂದೆ ಬಣವು ಬಾಂಬೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಈ ಅರ್ಜಿಯನ್ನು ಶುಕ್ರವಾರವೇ ಸಲ್ಲಿಸಲಾಗಿದೆ. ಸ್ಪೀಕರ್ ನೀಡಿರುವ ಆದೇಶವನ್ನು ರದ್ದುಪಡಿಸಬೇಕು, 14 ಶಾಸಕರನ್ನು ಅನರ್ಹಗೊಳಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಈ ಅರ್ಜಿಯನ್ನು ಜನವರಿ 22ರಂದು ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುತ್ತದೆ ಎಂಬ ಮಾಹಿತಿಯು ಹೈಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಇದೆ. 2022ರ ಜುಲೈ 4ರಂದು ನಡೆಯಲಿರುವ ವಿಶ್ವಾಸಮತ ಯಾಚನೆಯ ಸಂದರ್ಭದಲ್ಲಿ, ಶಿಂದೆ ನೇತೃತ್ವದ ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ಶಿವಸೇನಾ ಸದಸ್ಯರೆಲ್ಲರಿಗೂ ವಿಪ್ ನೀಡಲಾಗಿತ್ತು ಎಂದು ಪಕ್ಷದ ಮುಖ್ಯ ಸಚೇತಕ ಭರತ್ ಗೋಗಾವಲೆ ಸಲ್ಲಿಸಿರುವ ಅರ್ಜಿಯಲ್ಲಿ ಹೇಳಲಾಗಿದೆ.

ಆದರೆ, ಆದರೆ ಠಾಕ್ರೆ ಬಣದ 14 ಶಾಸಕರು ವಿಪ್ ಉಲ್ಲಂಘಿಸಿದರು, ತಮ್ಮ ನಡೆಯ ಮೂಲಕ ಶಿವಸೇನಾ ಪಕ್ಷದ ಸದಸ್ಯತ್ವವನ್ನು ಸ್ವಇಚ್ಛೆಯಿಂದ ತೊರೆದರು ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ. ಪಕ್ಷದ ಸದಸ್ಯತ್ವವನ್ನು ಬಿಟ್ಟುಕೊಟ್ಟಿದ್ದು ಮಾತ್ರವೇ ಅಲ್ಲದೆ, 14 ಶಾಸಕರು ಶಿವಸೇನಾ ವಿರುದ್ಧ ಮತ ಚಲಾಯಿಸಿದ್ದರು ಎಂಬ ಸಂಗತಿಯನ್ನು ಪರಿಗಣಿಸಲು ಸ್ಪೀಕರ್ ವಿಫಲರಾಗಿದ್ದಾರೆ ಎಂದು ಗೋಗಾವಲೆ ಅವರು ಅರ್ಜಿಯಲ್ಲಿ ಹೇಳಿದ್ದಾರೆ.

'ರಾಮನನ್ನು ನೋಡಿದಾಗೆಲ್ಲಾ ಅಣ್ಣನ ನೆನಪಮ್ಮ...'

ಒಂದನೇ ಪುಟದಿಂದ...

ಅರುಣ್ ಪತ್ನಿ ವಿಜೇತಾ, ಅಕ್ಕ ಚೇತನಾ, ಅಣ್ಣ ಸೂರ್ಯಪ್ರಕಾಶ್, ಚಿಕ್ಕಪ್ಪಂದಿರಾದ ಶಿವಶಂಕರ್, ನಾಗೇಶ್, ಸಹೋದರರರಾದ ಯಶ್ವಂತ್, ಸೌಮ್ಯಾ, ಗುರು, ಮಕ್ಕಳಾದ ಸಾನ್ವಿ, ವೇದಾಂತ್ ಸೇರಿದಂತೆ ಇಡೀ ಕುಟುಂಬದ ಸದಸ್ಯರೆಲ್ಲರಲ್ಲೂ ಸಂತಸ ಉಕ್ಕಿತ್ತು.

'ರಾಮನ ಮೂರ್ತಿ ಕೆತ್ತಲು ಕಳೆದ ವರ್ಷದ ಜೂನ್‌ನಲ್ಲಿ ಹೋದವ ಬಂದಿದ್ದು ಡಿಸೆಂಬರ್‌ನಲ್ಲಿ, ಮಕ್ಕಳನ್ನು ನೋಡಿಕೊಂಡು ಹೋದವನು ಮತ್ತೆ ಬಂದಿಲ್ಲ. ಅವನ ತಂದೆ, ತಾತನಂತೆಯೇ ಅವನಿಗೂ ಕೆಲಸದಲ್ಲಿ ಶ್ರದ್ಧಾಭಕ್ತಿ. ಕರೆ ಮಾಡಿದಾಗೆಲ್ಲ, 'ಗರ್ಭಗುಡಿಯಲ್ಲಿ ರಾಮ ಕೂರುವವರೆಗೂ ಬರುವುದಿಲ್ಲ ಎನ್ನುತ್ತಿದ್ದ' ಎಂದು ಸರಸ್ವತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕಂಕಣ ಕಟ್ಟಿ, ವಿಗ್ರಹ ಕೆತ್ತನೆ ಶುರು ಮಾಡಿದವ ದೊಡ್ಡ ತಪಸ್ಸನ್ನೇ ಮಾಡಿದ್ದಾನೆ. ಅಲ್ಲೆಲ್ಲ ಊಟ ಸರಿಹೋಗಲ್ಲ. ಅಡುಗೆ ಮಾಡಿಕೊಡಲು ನಾನು ಬರುತ್ತೇನೆಂದರೂ, ಅಮ್ಮ ನಿಮಗಿಲ್ಲಿ ಆರೋಗ್ಯ ಸರಿಹೋಗಲ್ಲ. ಚಳಿ–ಬಿಸಿಲು ಜಾಸ್ತಿಯೆಂದ. ಅಮ್ಮ ಸಂಕಟಪಡುತ್ತಾಳೆಂದು ಊಟ ಆಯಿತೆನ್ನುತ್ತಿದ್ದ. ಈಚೆಗೆ ಬಂದಾಗ ಹತ್ತು ಕೆ.ಜಿ ಇಳಿದುಹೋಗಿದ್ದ. ಅವನ ಶ್ರಮ ಈಗ ಫಲ ಕೊಟ್ಟಿದೆ' ಎಂದು ಧನ್ಯತಾ ಭಾವದಲ್ಲಿ ಮಿಂದರು.

'ಓಟ, ಆಟ ಎಲ್ಲ ಇಷ್ಟ. ವಾಲಿಬಾಲ್‌ನಲ್ಲೂ ಅವರ ಕೋಚ್, 'ಚೆನ್ನಾಗಿ ಆಡ್ತಾನೆ, ನಮ್ಮತ್ರ ಕಳಿಸಿಬಿಡಿ ಎಂದಿದ್ದರು. ಅವನು ಸರ್ಕಾರಿ ಕೆಲಸ ಮಾಡಬೇಕೆಂಬ ಅಭಿಲಾಷೆ ಇತ್ತು. ಆದರೆ, ತಂದೆಯ ಹಾದಿಯಲ್ಲೇ ಬೆಳೆದಿದ್ದಾನೆ. ಎಲ್ಲ ಹಿರೀಕರ ಆಶೀರ್ವಾದ. ಸುಭಾಷರ ಪ್ರತಿಮೆ ಉದ್ಘಾಟನೆಯಾದಾಗ ನನ್ನನ್ನು ಕರೆದೊಯ್ದಿದ್ದ. ಈ ಬಾರಿಯೂ ಅವಕಾಶ ಸಿಗಬಹುದೇನೋ' ಎಂದರು.

'ನಮ್ಮ ತಾತ ಬಸವಣ್ಣ ಶಿಲ್ಪಿ. 1962ರಲ್ಲಿ ಜವಾಹರಲಾಲ್ ನೆಹರೂ ಅವರಿಂದ ಪ್ರಶಸ್ತಿ ಸ್ವೀಕರಿಸಿದ್ದರು. 1984ರಲ್ಲಿ ರಾಷ್ಟ್ರೀಯ ಪ್ರಶಸ್ತಿಯೂ ದೊರೆತಿತ್ತು. ತಾತ– ಅಜ್ಜಿ ಹಾಗೂ ತಂದೆಯ ಆಶೀರ್ವಾದ ನಾವೆಲ್ಲ ಒಟ್ಟಿಗೇ ಇದ್ದೇವೆ. ಅರುಣ್ ಸಾಧನೆಯ ಹಿಂದೆ ಈ ಮನೆಯೂ ಇದೆ. ಬಿಡಿಬಿಡಿಯಾದರೆ ಶಕ್ತಿ ಕಡಿಮೆಯೆಂದು ತಂದೆ ಹೇಳುತ್ತಿದ್ದರು. ಅವರು ತೋರಿದ ದಾರಿಯಲ್ಲಿ ಸಾಗುತ್ತಿದ್ದೇವೆ' ಎಂದು ಸಹೋದರ ಸೂರ್ಯಪ್ರಕಾಶ್ ಅವರು ಹೇಳಿದರು.

'ಅರುಣ್ ಕೆತ್ತಿದ ಮೂರ್ತಿ ಆಯ್ಕೆಯಾಗಿರುವುದು ಮೈಸೂರಿಗಷ್ಟೇ ಅಲ್ಲ. ಕರ್ನಾಟಕದ ಹೆಮ್ಮೆ. ಮೂರ್ತಿಯನ್ನು ಕೆತ್ತುವ ಆರಂಭದಲ್ಲಿ ನೋಡಿದ್ದೇನೆ. ಅವನ ಕಲ್ಪನೆಯ ರಾಮ ಹೇಗೆ ಮೂಡಿಬಂದಿದ್ದಾನೆಂಬ ಕುತೂಹಲವಿದೆ. ಪ್ರತಿಷ್ಠಾಪನೆಯಾದ ನಂತರ ಅವಕಾಶ ಸಿಕ್ಕರೆ ಕಣ್ತುಂಬಿಕೊಳ್ಳುತ್ತೇವೆ' ಎಂದು ಅರುಣ್ ಭಾವ ಸುನಿಲ್ ಕುಮಾರ್ ಅವರು ಹೇಳಿದರು.

> **ಎಂಬಿಎ ಮುಗಿದ ಮೇಲೆ ಕೆಲಸಕ್ಕೆ ಹೋಗೆಂದರೂ ತಂದೆ ಹಾದಿಯಲ್ಲಿ ಸಾಗಿ ಮಗ ಅರುಣ್ ಈ ಸಾಧನೆ ಮಾಡಿದ್ದಾನೆ**
> **ಸರಸ್ವತಿ,** ಅರುಣ್ ಯೋಗಿರಾಜ್ ತಾಯಿ

> **ಸಂಕ್ರಾಂತಿಯಂದೇ ಅರುಣ್ ಅವರ ಮೂರ್ತಿ ಆಯ್ಕೆಯಾಗಿರುವುದು ನಮ್ಮ ಕುಟುಂಬವೆಂದೂ ಮರೆಯಲಾಗದ ಘಟನೆ**
> **ವಿಜೇತಾ,** ಅರುಣ್ ಪತ್ನಿ

ವಾಲಿಬಾಲ್, ಎಂಬಿಎ ಬಿಟ್ಟು ಶಿಲ್ಪಿಯಾದ ಅರುಣ್...

ಉತ್ತರಾಖಂಡದ ಕೇದಾರನಾಥದಲ್ಲಿ 2021ರಲ್ಲಿ ಅನಾವರಣಗೊಂಡ ಆದಿ ಶಂಕರಾಚಾರ್ಯರ ಪ್ರತಿಮೆಯು ಅರುಣ್ ಯೋಗಿರಾಜ್ ಅವರಿಗೆ ದೊಡ್ಡ ಹೆಸರು ತಂದುಕೊಟ್ಟಿತ್ತು. ನವದೆಹಲಿಯ ಕರ್ತವ್ಯಪಥದಲ್ಲಿ ಸ್ಥಾಪನೆಯಾದ ಸುಭಾಷ್ ಚಂದ್ರ ಬೋಸ್ ಪ್ರತಿಮೆಯಲ್ಲೂ ಅವರ ಕೈಚಳಕವಿದೆ. ಇದೀಗ ಅಯೋಧ್ಯೆಯ 'ಬಾಲರಾಮ' ಮೂಡಿದ್ದಾನೆ.

15 ವರ್ಷಗಳಿಂದ ಶಿಲ್ಪ ಕೆತ್ತನೆಯಲ್ಲಿ ತೊಡಗಿಕೊಂಡಿರುವ ಅರುಣ್, ಶಿಲ್ಪ ಕಲಾಕೃತಿಯ 5ನೇ ತಲೆಮಾರಿನವರು. ಚೌಡಪ್ಪ ಆಚಾರ್, ಬಸವಣ್ಣ ಆಚಾರ್, ಬಸವಣ್ಣ ಶಿಲ್ಪಿ, ಯೋಗಿರಾಜ್ ಶಿಲ್ಪಿ ಪ್ರಸಿದ್ಧ ಶಿಲ್ಪ ಕಲಾವಿದರು. ಅಪ್ಪ ಯೋಗಿರಾಜ್ ಕೊಡುತ್ತಿದ್ದ ಉಳಿಪೆಟ್ಟು ಕಂಡು ಬಾಲ್ಯದಲ್ಲಿ ಅರುಣ್ ಈ ವೃತ್ತಿಯತ್ತ ಆಕರ್ಷಿತರಾಗಿದ್ದರು.

ಅಂಬೇಡ್ಕರ್, ರಾಮಕೃಷ್ಣ ಪರಮಹಂಸ, ವಿಶ್ವೇಶ್ವರಯ್ಯ, ಜಯಚಾಮರಾಜ ಒಡೆಯರ್, ಶಿವಕುಮಾರ ಸ್ವಾಮೀಜಿ, ವಿಷ್ಣುವರ್ಧನ್ ಸೇರಿದಂತೆ ಹಲವರ ಪ್ರತಿಮೆ ನಿರ್ಮಿಸಿದ್ದಾರೆ. ಓದಿದ್ದು ಎಂಬಿಎ. ವಿದ್ಯಾಭ್ಯಾಸಕ್ಕೆ ತಕ್ಕಂತೆ ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸವೂ ಸಿಕ್ಕಿತ್ತು. ಆದರೆ, 'ಕಲ್ಲಿ'ನ ಸೆಳೆತಕ್ಕೆ ಮಾರು ಹೋದರು. ಕಲ್ಲಿಗೆ ಮೂರ್ತರೂಪ ಕೊಡುತ್ತಾ ಬದುಕು ಕಟ್ಟಿಕೊಂಡರು. ಅಗ್ರಹಾರದ ಗನ್‌ಹೌಸ್ ಪಕ್ಕದಲ್ಲಿ ಅರುಣ್ ಅವರ ಮನೆಯ ಆವರಣದಲ್ಲಿರುವ 'ವರ್ಕ್‌ಶಾಪ್'ನಿಂದ ಸದಾ ಶಿಲೆ ಕೆತ್ತುವ ಸದ್ದು ಬರುತ್ತಲೇ ಇರುತ್ತದೆ.

38 ವರ್ಷದ ಅರುಣ್ ಶಿಲ್ಪ ಕಲಾಕೃತಿ ರಚನೆ ಜತೆಗೆ ಕ್ಲೇ ಮಾಡೆಲಿಂಗ್, ಚಿತ್ರಕಲೆಯಲ್ಲೂ ನಿಪುಣರು. ಜತೆಗೆ ವಾಲಿಬಾಲ್ ಕ್ರೀಡೆಯಲ್ಲೂ ಮಿಂಚಿದ್ದಾರೆ. ಹಲವಾರು ಪ್ರಶಸ್ತಿಗಳು ಇವರ ಮುಡಿಗೇರಿವೆ.

ಅಯ್ಯಪ್ಪನ ದರ್ಶನ ಪಡೆದ ಸಾವಿರಾರು ಭಕ್ತರು

ಪತ್ತನಂತಿಟ್ಟ (ಕೇರಳ) (ಪಿಟಿಐ): ಮಕರವಿಳಕ್ಕು ಆಚರಣೆಯ (ಮಕರ ಸಂಕ್ರಾಂತಿ) ದಿನದಂದು ಸೋಮವಾರ ಇಲ್ಲಿನ ಅಯ್ಯಪ್ಪನ ಬೆಟ್ಟದ ದೇಗುಲದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮಾಲಾಧಾರಿ ಭಕ್ತರು ಹಲವಾರು ತಾಸು ಬೃಹತ್ ಸರತಿ ಸಾಲಿನಲ್ಲಿ ನಿಂತು ಅಯ್ಯಪ್ಪ ಸ್ವಾಮಿಯ ದರ್ಶನ ಪಡೆದು, ಪ್ರಾರ್ಥನೆ ಸಲ್ಲಿಸಿದರು.

ಸಾಂಪ್ರದಾಯಿಕ ಕಪ್ಪು ಬಟ್ಟೆ ಧರಿಸಿ, ತಲೆಯ ಮೇಲೆ ಇರುಮುಡಿ ಕಟ್ಟು ಹೊತ್ತು ಬಂದಿದ್ದ ವ್ರತಧಾರಿ ಭಕ್ತರ ದಂಡು ದೀಪಾರಾಧನೆಗಾಗಿ ದೇವಾಲಯದ ಸಂಕೀರ್ಣದಲ್ಲಿ ಮತ್ತು ಸುತ್ತಮುತ್ತ ಬೆಳಿಗ್ಗೆಯಿಂದಲೇ ಕಾಯುತ್ತಿತ್ತು. ಸುಮಾರು 85 ಕಿಲೋಮೀಟರ್ ದೂರದಲ್ಲಿರುವ ಪಂದಳಂ ಅರಮನೆಯಿಂದ ಎರಡು ದಿನಗಳ ಹಿಂದೆ ಆರಂಭವಾದ ವಿಧ್ಯುಕ್ತ ಮೆರವಣಿಗೆಯಲ್ಲಿ ದೀಪರಾಧನೆಗೆ ಕೆಲವೇ ಕ್ಷಣಗಳ ಮೊದಲು ತಿರುವಾಭರಣ (ಪವಿತ್ರ ಆಭರಣ) ಗಳನ್ನು ಇಲ್ಲಿಗೆ ತರಲಾಯಿತು. ಸಂಜೆ 6.45ರ ಸುಮಾರಿಗೆ ಅಯ್ಯಪ್ಪ ದೇವರ ಮೂರ್ತಿಯನ್ನು ಆಭರಣಗಳಿಂದ ಅಲಂಕರಿಸಿ, ದೀಪಾರಾಧನೆ ನಂತರ (ಆರತಿ) ದೇಗುಲದ ಬಾಗಿಲನ್ನು ಭಕ್ತರ ದರ್ಶನಕ್ಕೆ ತೆರೆಯಲಾಯಿತು. ಪುರಾಣದ ಪ್ರಕಾರ, ಅಯ್ಯಸ್ವಾಮಿ ಜನಿಸಿದ ಮತ್ತು ಬಾಲ್ಯ ಕಳೆದ ಪಂದಳಂ ಅರಮನೆಯಿಂದ ತಿರುವಾಭರಣವನ್ನು ತಂದು, ದೀಪಾರಾಧನೆಗೂ ಮುನ್ನ ಮೂರ್ತಿ ಅಲಂಕರಿಸಲಾಗುತ್ತದೆ.

ದೇಗುಲದ ಹೆಬ್ಬಾಗಿಲು ತೆರೆದಾಗ ಭಕ್ತಗಣದಿಂದ 'ಶರಣಂ ಅಯ್ಯಪ್ಪ' ಘೋಷಣೆ, ಅಯ್ಯಪ್ಪನ ಕುರಿತ ಕೀರ್ತನೆಗಳು ಮುಗಿಲುಮುಟ್ಟಿದವು.

ದೀಪಾರಾಧನೆಯ ಕೆಲವು ನಿಮಿಷಗಳ ನಂತರ, ದೇವಾಲಯದ ಸಂಕೀರ್ಣದಿಂದ 8 ಕಿಲೋಮೀಟರ್ ದೂರದಲ್ಲಿರುವ ಪೊನ್ನಂಬಲಮೇಡುವಿನ ಪೂರ್ವ ದಿಗಂತದಲ್ಲಿ, ಭಕ್ತರು ದೈವಿಕ ಜ್ಯೋತಿ ಎಂದೇ ಭಾವಿಸಿರುವ 'ಮಕರ ಜ್ಯೋತಿ' ಮಿನುಗಿದಾಗ 'ಶರಣಂ ಅಯ್ಯಪ್ಪ' ಘೋಷಣೆಗಳು ಮಾರ್ದನಿಸಿದವು.

ಕೇರಳದ ಪತ್ತನಂತಿಟ್ಟದ ಶಬರಿಮಲೆಯಲ್ಲಿ ಸೋಮವಾರ ಅಯ್ಯಪ್ಪ ಸ್ವಾಮಿ ಭಕ್ತಾದಿಗಳು ಮಕರ ಜ್ಯೋತಿಗೆ ಸಾಕ್ಷಿಯಾದರು – ಪಿಟಿಐ ಚಿತ್ರ

ಕಲ್ಯಾಣ ಯೋಜನೆಗಳು ಪ್ರತಿಯೊಬ್ಬರನ್ನು ತಲುಪಬೇಕು: ಮೋದಿ

ಗ್ರಾಮೀಣ ಆವಾಸ ಯೋಜನೆ: ₹540 ಕೋಟಿ ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನದ (ಪಿಎಂ– ಜನ್‌ಮನ್) ಅಡಿ ಗ್ರಾಮೀಣ ಆವಾಸ ಯೋಜನೆಯ ಮೊದಲ ಕಂತು ₹540 ಕೋಟಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಬಿಡುಗಡೆ ಮಾಡಿದರು. 1 ಲಕ್ಷ ಕುಟುಂಬಗಳು ಈ ಯೋಜನೆಯ ಫಲಾನುಭವಿಗಳು.

ಕಲ್ಯಾಣ ಯೋಜನೆಗಳು ಪ್ರತಿಯೊಬ್ಬರನ್ನೂ ತಲುಪಿದಾಗ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ. ದೇಶದ ಕುಗ್ರಾಮಗಳಿಗೂ ಕಲ್ಯಾಣ ಕಾರ್ಯಕ್ರಮಗಳು ತಲುಪಲಿವೆ ಎಂಬುದಾಗಿ ತಾವು ಗ್ಯಾರಂಟಿ ನೀಡುವುದಾಗಿ ಮೋದಿ ಅವರು ಈ ವೇಳೆ ಹೇಳಿದರು.

ಕಳೆದ 10 ವರ್ಷಗಳಲ್ಲಿ, ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ಹಲವು ಕಲ್ಯಾಣ ಕಾರ್ಯಕ್ರಮಗಳ ಬಜೆಟ್ ಮೊತ್ತವನ್ನು ಐದು ಪಟ್ಟು ಹೆಚ್ಚಿಸಲಾಗಿದೆ. ಆ ಸಮುದಾಯಕ್ಕೆ ಸೇರಿರುವ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನು ಎರಡೂವರೆ ಪಟ್ಟು ಹೆಚ್ಚಿಸಲಾಗಿದೆ ಎಂದು ಅವರು ತಿಳಿಸಿದರು.

ಪರಿಶಿಷ್ಟ ಪಂಗಡಗಳಿಗೆ ಸೇರಿದ ಮಕ್ಕಳಿಗಾಗಿ 500ಕ್ಕೂ ಹೆಚ್ಚು 'ಏಕಲವ್ಯ ಮಾದರಿ ಶಾಲೆ'ಗಳನ್ನು ನಿರ್ಮಿಸಲಾಗುತ್ತಿದೆ ಎಂದರು.

ಬುಡಕಟ್ಟು ಸಮುದಾಯಗಳ ಏಳಿಗೆ ವಿಚಾರವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಪಯುಕ್ತ ಸಲಹೆಗಳನ್ನು ನೀಡಿದ್ದಾಗಿ ಅವರು ಸ್ಮರಿಸಿದರು. 'ಮುರ್ಮು ಅವರು ಬುಡುಕಟ್ಟು ಸಮುದಾಯದ ಹಿನ್ನೆಲೆಯಿಂದ ಬಂದಿರುವವರು. ಆ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಹಲವಾರು ಬಾರಿ ಅವರು ನನ್ನೊಡನೆ ಚರ್ಚಿಸಿದ್ದಾರೆ' ಎಂದರು.

ಸಂವಾದ: ಕಾರ್ಯಕ್ರಮದಲ್ಲಿ ಅವರು ಪಿಎಂ– ಜನ್‌ಮನ್ ಯೋಜನೆಯ ಕೆಲವು ಫಲಾನುಭವಿಗಳ ಜೊತೆ ಸಂವಾದ ನಡೆಸಿದರು. ಸರ್ಕಾರದ ವಿವಿಧ ಯೋಜನೆಗಳಾದ ಅಡುಗೆ ಅನಿಲ ಸಂಪರ್ಕ, ವಿದ್ಯುತ್, ನಲ್ಲಿ ನೀರು, ವಸತಿಯಂಥ ಯೋಜನೆಗಳ ಪ್ರಯೋಜನ ಪಡೆದ ಬಳಿಕ ತಮ್ಮ ಜೀವನದಲ್ಲಿ ಆಗಿರುವ ಬದಲಾವಣೆ ಕುರಿತು ಫಲಾನುಭವಿಗಳು ಪ್ರಧಾನಿ ಜೊತೆ ಅನುಭವ ಹಂಚಿಕೊಂಡರು.

ನರೇಂದ್ರ ಮೋದಿ

'ಚುನಾವಣೆ ಸಮಯದಲ್ಲಿ ಮಾತ್ರ ಜಪ'

'ಪ್ರಧಾನಿ ನರೇಂದ್ರ ಮೋದಿ ಅವರು ಬುಡಕಟ್ಟು ಸಮುದಾಯಗಳನ್ನು ಚುನಾವಣೆ ಸಮಯದಲ್ಲಿ ಮಾತ್ರ ನೆನಪಿಸಿಕೊಳ್ಳುತ್ತಾರೆ. ಹಳೆಯ ಯೋಜನೆಗಳಿಗೆ ಹೊಸ ಹೆಸರು ಇರಿಸಿ ಜನರನ್ನು ವಂಚಿಸುತ್ತಿದ್ದಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಆರೋಪಿಸಿದ್ದಾರೆ.

'ಮೋದಿ ನೇತೃತ್ವದ ಸರ್ಕಾರಕ್ಕೆ ಮೂರು ಪ್ರಶ್ನೆಗಳನ್ನು ಕೇಳಲು ನಾವು ಬಯಸುತ್ತೇವೆ. 2013ಕ್ಕೆ ಹೋಲಿಸಿದರೆ ಬುಡಕಟ್ಟು ಸಮುದಾಯಗಳನ್ನು ಗುರಿಯಾಗಿಸಿಕೊಂಡು ಈಗ ನಡೆಯುತ್ತಿರುವ ಅಪರಾಧಗಳ ಪ್ರಮಾಣ ಶೇ 48.15ಕ್ಕೆ ಏಕೆ ಏರಿಕೆ ಆಗಿದೆ? ಅರಣ್ಯ ಹಕ್ಕುಗಳ ಕಾಯ್ದೆ–2006ನ್ನು ಜಾರಿಗೊಳಿಸಲು ಬಿಜೆಪಿಯ ಡಬಲ್ ಎಂಜಿನ್ ಸರ್ಕಾರಗಳು ಏಕೆ ಸಂಪೂರ್ಣವಾಗಿ ವಿಫಲವಾಗಿವೆ?' ಎಂದು ಅವರು 'ಎಕ್ಸ್' ವೇದಿಕೆಯಲ್ಲಿ ಬರೆದಿದ್ದಾರೆ.

'ಬುಡಕಟ್ಟು ಸಮುದಾಯಗಳ ನಿರ್ದಿಷ್ಟ ದುರ್ಬಲ ಪಂಗಡಗಳ ಅಭಿವೃದ್ಧಿ ಯೋಜನೆ ಅನುದಾನವನ್ನು ಸತತವಾಗಿ ಕಡಿತಗೊಳಿಸಿದ್ದು ಏಕೆ? 2018–19ರಲ್ಲಿ ₹250 ಕೋಟಿ ಇದ್ದ ಅನುದಾನವು 2022–23ನೇ ಸಾಲಿನಲ್ಲಿ ಕೇವಲ ₹6.48 ಕೋಟಿಗೆ ತಲುಪಿದ್ದು ಏಕೆ' ಎಂದು ಪ್ರಶ್ನಿಸಿದ್ದಾರೆ.

ಕೂಚ್ ಬಿಹಾರ್ ಟ್ರೋಫಿ: 79 ವರ್ಷಗಳಲ್ಲಿ ಮೊದಲ ಬಾರಿಗೆ ಚಾಂಪಿಯನ್

ಕರ್ನಾಟಕ 'ಪ್ರಖರ' ದಾಖಲೆ

ಶಿವಮೊಗ್ಗ/ಬೆಂಗಳೂರು: ಕರ್ನಾಟಕದ 19 ವರ್ಷದೊಳಗಿನವರ ತಂಡವು ಇದೇ ಮೊದಲ ಬಾರಿಗೆ ಕೂಚ್ ಬಿಹಾರ್ ಟ್ರೋಫಿ ಗೆದ್ದುಕೊಂಡಿತು. ಸಂಕ್ರಾಂತಿಯಂದು ಸಂಭ್ರಮದ ಹೊನಲು ಹರಿಸಿತು.

ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಮುಂಬೈ ಎದುರು ನಡೆದ ಫೈನಲ್ ಪಂದ್ಯದಲ್ಲಿ ಆತಿಥೇಯ ತಂಡದ ಆರಂಭಿಕ ಬ್ಯಾಟರ್ ಪ್ರಖರ್ ಚತುರ್ವೇದಿ ಅಜೇಯ 404 ರನ್ ಗಳಿಸಿ ಯುವರಾಜ್ ಸಿಂಗ್ ದಾಖಲೆ ಮುರಿದರು. ಈ ಟೂರ್ನಿಯ 79 ವರ್ಷಗಳ ಇತಿಹಾಸದಲ್ಲಿ ಕರ್ನಾಟಕ ತಂಡವು ಮೊದಲ ಬಾರಿ ಚಾಂಪಿಯನ್ ಆಯಿತು. ಡ್ರಾ ಆದ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿದ ಆತಿಥೇಯ ಪ್ರಶಸ್ತಿ ಮುಡಿಗೇರಿಸಿಕೊಂಡರು. 510 ರನ್‌ಗಳ ಮುನ್ನಡೆಯ ದಾಖಲೆಯನ್ನೂ ಬರೆಯಿತು.

ಪ್ರಖರ್ ಒಟ್ಟು 638 ಎಸೆತಗಳನ್ನು ಎದುರಿಸಿದರು. 46 ಬೌಂಡರಿ ಹಾಗೂ ಮೂರು ಸಿಕ್ಸರ್ ಹೊಡೆದರು. ತಂಡವು 8 ವಿಕೆಟ್‌ಗಳಿಗೆ 890 ರನ್‌ಗಳ ದಾಖಲೆಯ ಮೊತ್ತ ಪೇರಿಸಿತು. ಚಹಾ ವಿರಾಮಕ್ಕೆ ಮುನ್ನ ತಹೀರ್ ಮೋಹಿನ್ ಬೌಲಿಂಗ್‌ನಲ್ಲಿ ಸತತ 3 ಬೌಂಡರಿ ಬಾರಿಸಿದ ಪ್ರಖರ್ 400ರ ಗಡಿ ದಾಟಿದರು.

ಕರ್ನಾಟಕ ತಂಡಕ್ಕೆ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಹಾಗೂ ಮಾಜಿ ಸಚಿವ ಡಿ.ಎಚ್. ಶಂಕರಮೂರ್ತಿ ₹ 30 ಲಕ್ಷ ಚೆಕ್ ಹಾಗೂ ಟ್ರೋಫಿ ವಿತರಿಸಿದರು. ರನ್ನರ್ ಅಪ್ ಮುಂಬೈ ತಂಡ ₹ 15 ಲಕ್ಷ ಚೆಕ್, ಟ್ರೋಫಿ ಪಡೆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 113.5 ಓವರ್‌ಗಳಲ್ಲಿ 380. ಕರ್ನಾಟಕ: 223 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 890 (ಪ್ರಖರ್ ಚತುರ್ವೇದಿ ಔಟಾಗದೆ 404, ಎಸ್.ಯು. ಕಾರ್ತಿಕ್ 50, ಹರ್ಷಿಲ್ ಧರ್ಮಾನಿ 169, ಕೆ.ಪಿ. ಕಾರ್ತಿಕೇಯ 72, ಹಾರ್ದಿಕ್ ರಾಜ್ ಔಟಾಗದೆ 51, ಎಸ್. ಸಮರ್ಥ್ ಔಟಾಗದೆ 55) **ಫಲಿತಾಂಶ:** ಪಂದ್ಯ ಡ್ರಾ. ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿದ ಕರ್ನಾಟಕ ಚಾಂಪಿಯನ್.

ಕೂಚ್ ಬಿಹಾರ್ ಟ್ರೋಫಿಯೊಂದಿಗೆ ಸಂಭ್ರಮಿಸಿದ ಕರ್ನಾಟಕ ತಂಡ. ಪ್ರಜಾವಾಣಿ ಚಿತ್ರ: ಶಿವಮೊಗ್ಗ ನಾಗರಾಜ

ಯುವರಾಜ್ ದಾಖಲೆ ಮುರಿದ ಪ್ರಖರ್

ಪ್ರಖರ್ ಅಜೇಯ 404 ರನ್ ಗಳಿಸುವ ಮೂಲಕ ಭಾರತ ತಂಡದ ಮಾಜಿ ಆಟಗಾರ ಯುವರಾಜ್ ಸಿಂಗ್ 1999ರಲ್ಲಿ ನಿರ್ಮಿಸಿದ್ದ ದಾಖಲೆಯನ್ನು ಮುರಿದರು. 25 ವರ್ಷಗಳ ಹಿಂದೆ ನಡೆದಿದ್ದ ಕೂಚ್ ಬಿಹಾರ್ ಟ್ರೋಫಿ ಟೂರ್ನಿಯ ಫೈನಲ್ ಪಂದ್ಯದಲ್ಲಿ ಯುವಿ, ಬಿಹಾರ ವಿರುದ್ಧ 358 ರನ್ ಗಳಿಸಿದ್ದರು. ಅವರ ಆಟದ ಬಲದಿಂದ ಪಂಜಾಬ್ ತಂಡವು 772 ರನ್ ಗಳಿಸಿತ್ತು. ಆ ದಾಖಲೆಯನ್ನೂ ಕರ್ನಾಟಕ ತಂಡ ಇಲ್ಲಿ ಮುರಿಯಿತು.

ಯುವಿ ದಾಖಲೆ ಬರೆದ ಆ ಪಂದ್ಯದಲ್ಲಿ ಆಡಿದ್ದ ಬಿಹಾರ ತಂಡದಲ್ಲಿ ಮಹೇಂದ್ರಸಿಂಗ್ ಧೋನಿ ಕೂಡ ಇದ್ದರು. ಕೂಚ್ ಬಿಹಾರ್ ಟ್ರೋಫಿ ಟೂರ್ನಿಯ ಫೈನಲ್ ಪಂದ್ಯದಲ್ಲಿ 400ಕ್ಕೂ ಹೆಚ್ಚು ರನ್ ಗಳಿಸಿದ ಮೊದಲ ಬ್ಯಾಟರ್ ಅವರು. ಒಟ್ಟಾರೆ ಈ ವಿಭಾಗದಲ್ಲಿ ಎರಡನೆಯವರಾದರು. ದಶಕದ ಹಿಂದೆ ಮಹಾರಾಷ್ಟ್ರದ ವಿಜಯ್ ಝೋಲ್ (ಔಟಾಗದೆ 451) ಅಸ್ಸಾಂ ವಿರುದ್ಧ ದಾಖಲೆ ಬರೆದಿದ್ದರು.

ಸಂಕ್ರಾಂತಿಯಂದು ಕರ್ನಾಟಕಕ್ಕೆ ಸಿಹಿ ಕಹಿ

ಗೆಲುವು ಕೈಚೆಲ್ಲಿದ ಮಯಂಕ್ ಪಡೆ

ರಣಜಿ ಕ್ರಿಕೆಟ್: ಸಿದ್ಧಾರ್ಥ್ ದೇಸಾಯಿಗೆ 7 ವಿಕೆಟ್ • ಗುಜರಾತ್ ಜಯಭೇರಿ

ಅಹಮದಾಬಾದ್: ಸಂಕ್ರಾಂತಿ ಹಬ್ಬದ ದಿನ ನಾಡಿನ ಕ್ರಿಕೆಟ್ ಅಭಿಮಾನಿಗಳಿಗೆ ಮಯಂಕ್ ಅಗರವಾಲ್ ಬಳಗವು ಗೆಲುವಿನ ಸಿಹಿಯೂಟ ಬಡಿಸಲಿಲ್ಲ.

ಸೋಮವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಆತಿಥೇಯ ಗುಜರಾತ್ ತಂಡವು ಒಡ್ಡಿದ್ದ 110 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಕರ್ನಾಟಕ 6 ರನ್‌ಗಳಿಂದ ಸೋಲಿನ ಕಹಿಯುಂಡಿತು. 26.2 ಓವರ್‌ಗಳಲ್ಲಿ 103 ರನ್ ಗಳಿಸಲಷ್ಟೇ ತಂಡಕ್ಕೆ ಸಾಧ್ಯವಾಯಿತು.

ಚೆಂಡು ಬುಗುರಿಯಂತೆ ತಿರುಗುತ್ತಿದ್ದ ಪಿಚ್‌ನಲ್ಲಿ ಗುಜರಾತ್ ತಂಡದ ಎಡಗೈ ಸ್ಪಿನ್ನರ್ ಸಿದ್ಧಾರ್ಥ್ ದೇಸಾಯಿ (13-4-42-7) ಒಬ್ಬರೇ ಕರ್ನಾಟಕದ ಏಳು ಬ್ಯಾಟರ್‌ಗಳನ್ನು ಸ್ಪಿನ್ ಖೆಡ್ಡಾಕ್ಕೆ ಕೆಡವಿದರು. ಅಕ್ಷರಶಃ ಕರ್ನಾಟಕದ ಕೈಯಿಂದ ಗೆಲುವನ್ನು ಕಿತ್ತುಕೊಂಡರು. ಇನ್ನುಳಿದ ಮೂರು ವಿಕೆಟ್‌ಗಳನ್ನು ಚೊಚ್ಚಲ ಪಂದ್ಯವಾಡಿದ ಸ್ಪಿನ್ನರ್ ರಿಂಕೇಶ್ ವಘೇಲಾ ಕಬಳಿಸಿದರು.

ಆರಂಭಿಕರಾದ ಮಯಂಕ್ ಮತ್ತು ದೇವದತ್ತ ಪಡಿಕ್ಕಲ್ ಮೊದಲ ವಿಕೆಟ್ ಜೊತೆಯಾಟದಲ್ಲಿ ಕೇವಲ ಒಂಬತ್ತು ಓವರ್‌ಗಳಲ್ಲಿ 50 ರನ್‌ಗಳನ್ನು ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಆದರೆ ಹತ್ತನೇ ಓವರ್‌ನಲ್ಲಿ ದೇಸಾಯಿ ಎಸೆತದಲ್ಲಿ ಹಿಂಗರೇಜಾಗೆ ಕ್ಯಾಚಿತ್ತ ಮಯಂಕ್ ನಿರ್ಗಮಿಸಿದರು. ಇಲ್ಲಿಂದ ಮುಂದೆ ಪಂದ್ಯವು ನಾಟಕೀಯ ತಿರುವು ಪಡೆಯಿತು. ಕರ್ನಾಟಕದ ಉಳಿದ ಉಳಿದ ಒಂಬತ್ತು ವಿಕೆಟ್‌ಗಳು 53 ರನ್‌ಗಳ ಅಂತರದಲ್ಲಿ ಪತನವಾದವು. ಕ್ಲೋಸ್ ಇನ್ ಫೀಲ್ಡಿಂಗ್ ತಂತ್ರಗಾರಿಕೆಯನ್ನು ಗುಜರಾತ್ ಸಮರ್ಥವಾಗಿ ನಿಭಾಯಿಸಿತು.

ನಿಕಿನ್ ಜೋಸ್, ಮನೀಷ್ ಪಾಂಡೆ, ಪದಾರ್ಪಣೆ ಆಟಗಾರ ಸುಜಯ್ ಸತೇರಿ, ವೈಶಾಖ ವಿಜಯಕುಮಾರ್, ಅನಾರೋಗ್ಯದ ಕಾರಣ ಎಂಟನೇ ಕ್ರಮಾಂಕದಲ್ಲಿ ಆಡಿದ ಆರ್.ಸಮರ್ಥ್ ವೈಫಲ್ಯ ಅನುಭವಿಸಿದ್ದು ತಂಡದ ಸೋಲಿಗೆ ಕಾರಣ. ಬೌಲಿಂಗ್ ದಾಳಿಗೆ ತಕ್ಕ ಬ್ಯಾಟಿಂಗ್ ಕೌಶಲ ತೋರುವಲ್ಲಿ ಆಟಗಾರರು ವಿಫಲರಾದರು.

ಶುಭಾಂಗ್ ಭರವಸೆ: ಇದೆಲ್ಲದರ ನಡುವೆ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ಶುಭಾಂಗ್ ಹೆಗಡೆ (27; 37ಎ, 4X3, 6X1) ಗೆಲುವಿನ ಭರವಸೆ ಮೂಡಿಸಿದ್ದರು. ರೋಹಿತ್ ಕುಮಾರ್ ಒಂದೂ ರನ್ ಗಳಿಸಲಿಲ್ಲ. ಆದರೆ ಹತ್ತು ಎಸೆತ ಎದುರಿಸಿದರಲ್ಲದೇ ಶುಭಾಂಗ್‌ಗೆ ಉತ್ತಮ ಜೊತೆ ನೀಡಿದರು. ಎಂಟನೇ ವಿಕೆಟ್ ಜೊತೆಯಾಟದಲ್ಲಿ ಶುಭಾಂಗ್ ಜೊತೆಗೆ 15 ರನ್ ಸೇರಲು ಸಹಕರಿಸಿದರು. ಶುಭಾಂಗ್ ಒಂದು ಸಿಕ್ಸರ್ ಸಿಡಿಸಿದಾಗ ತಂಡದಲ್ಲಿ ಗೆಲುವಿನ ಆಸೆ ಚಿಗುರಿತ್ತು. ಆದರೆ, 23ನೇ ಓವರ್‌ನಲ್ಲಿ ವಘೇಲಾ ಎಸೆತವನ್ನು ಆಡುವ ಯತ್ನದಲ್ಲಿ ವಿಕೆಟ್‌ಕೀಪರ್ ಹೆಟ್ ಪಟೇಲ್‌ಗೆ ಕ್ಯಾಚ್ ಕೊಟ್ಟರು. ನಂತರದ ಓವರ್‌ನಲ್ಲಿ ರೋಹಿತ್ ಅವರೂ ದೇಸಾಯಿಗೆ ವಿಕೆಟ್ ಒಪ್ಪಿಸಿದರು.

ಪ್ರಸಿದ್ಧ ಸಿಕ್ಸರ್: ಬೌಲಿಂಗ್‌ನಲ್ಲಿ ಮಿಂಚಿದ್ದ ವಾಸುಕಿ ಕೌಶಿಕ್ ಮತ್ತು ಗಾಯಾಳು ಪ್ರಸಿದ್ಧಕೃಷ್ಣ ಅವರು ಕೊನೆಯ ಹಂತದಲ್ಲಿ ತಂಡವನ್ನು ಗೆಲುವಿನ ಸನಿಹ ತಂದಿದ್ದರು. ಸ್ನಾಯುಸೆಳೆತದಿಂದಾಗಿ ಪಂದ್ಯದ ಮೊದಲ ದಿನದಿಂದಲೇ ಕಣದಿಂದ ಹೊರಗುಳಿದಿದ್ದ ಪ್ರಸಿದ್ಧ ಇಲ್ಲಿ ಅನಿವಾರ್ಯವಾಗಿ ಬ್ಯಾಟಿಂಗ್‌ಗೆ ಬಂದಾಗ ತಂಡಕ್ಕೆ 18 ರನ್‌ಗಳ ಅವಶ್ಯಕತೆ ಇತ್ತು.

ಅವರು ಒಂದು ಸಿಕ್ಸರ್ ಸಿಡಿಸಿದಾಗ ಭರವಸೆಯ ಮಿಂಚು ಹರಿಯಿತು. ಇನ್ನೊಂದೆಡೆ ರಕ್ಷಣಾತ್ಮಕವಾಗಿ ಆಡಿದ ಕೌಶಿಕ್ ಕೂಡ ನಾಲ್ಕು ರನ್ ಗಳಿಸಿದರು. ಇದರಿಂದಾಗಿ ತಂಡವು 100ರ ಗಡಿ ದಾಟಿತು. ಪ್ರಸಿದ್ಧ ಕುಂಟುತ್ತಲೇ ಓಡಾಡಿದರು. ಆದರೆ 27ನೇ ಓವರ್‌ನಲ್ಲಿ ವಘೇಲಾ ಹಾಕಿದ ಎಸೆತಕ್ಕೆ ಪ್ರಸಿದ್ಧ ಕ್ಲೀನ್‌ಬೌಲ್ಡ್ ಆದರು.

ಪಂದ್ಯದ ಮೂರನೇ ದಿನದಾಟವಾದ ಭಾನುವಾರ ಮುಕ್ತಾಯಕ್ಕೆ ಗುಜರಾತ್ 7 ವಿಕೆಟ್‌ಗಳಿಗೆ 171 ರನ್ ಗಳಿಸಿತ್ತು. ಸೋಮವಾರ ಬೆಳಿಗ್ಗೆ ಈ ಮೊತ್ತಕ್ಕೆ 48 ರನ್‌ಗಳನ್ನು ಸೇರಿಸಿತು. ಉಮಂಗ್ ಕುಮಾರ್ ಅರ್ಧಶತಕ ಪೂರೈಸಿದರು. ತಂಡವು 219 ರನ್‌ಗಳಿಗೆ ಆಲೌಟ್ ಆಯಿತು.

ಗುಜರಾತ್ ತಂಡದ ಬೌಲರ್ ಸಿದ್ಧಾರ್ಥ್ ದೇಸಾಯಿ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಗುಜರಾತ್ 264 (88 ಓವರ್‌ಗಳಲ್ಲಿ) ಕರ್ನಾಟಕ 374 (106.2 ಓವರ್‌ಗಳಲ್ಲಿ) ಎರಡನೇ ಇನಿಂಗ್ಸ್: ಗುಜರಾತ್ 219 (80.2 ಓವರ್‌ಗಳಲ್ಲಿ)
ಉಮಂಗ್ ಸಿ ಪಡಿಕ್ಕಲ್ ಬಿ ರೋಹಿತ್ 57 (100ಎ, 4X5, 6X3)
ಚಿಂತನ್ ಸಿ ಸತೇರಿ ಬಿ ಶುಭಾಂಗ್ 23 (48ಎ, 4X2, 6X1)
ರಿಂಕೇಶ್ ರನ್‌ಔಟ್ (ಬದಲೀ ಫೀಲ್ಡರ್ ಕಿಶನ್ ಬೆದರೆ) 1 (16ಎ)
ಅರ್ಜನ್ ಔಟಾಗದೆ 0 (4ಎ)
ಇತರೆ: 19 (ಬೈ 13, ಲೆಗ್‌ಬೈ 1, ನೋಬಾಲ್ 4, ವೈಡ್ 1)
ವಿಕೆಟ್ ಪತನ: 7–145 (ರಿಪಲ್ ಪಟೇಲ್; 58.4), 8–192 (ಚಿಂತನ್ ಗಜ; 73.1), 9–217 (ರಿಂಕೇಶ್ ವಘೇಲಾ; 78.2), 10–219 (ಉಮಂಗ್ ಕುಮಾರ್; 80.2)
ಬೌಲಿಂಗ್: ವಿ. ಕೌಶಿಕ್ 15–10–16–3, ವೈಶಾಖ ವಿಜಯಕುಮಾರ್ 14–2–27–1, ಶುಭಾಂಗ್ ಹೆಗಡೆ 28–5–90–2, ರೋಹಿತ್ ಕುಮಾರ್ 19.2–3–61–3, ನಿಕಿನ್ ಜೋಸ್ 1–0–5–0, ಮಯಂಕ್ ಅಗರವಾಲ್ 2–1–4–0, ದೇವದತ್ತ ಪಡಿಕ್ಕಲ್ 1–0–2–0.
ಕರ್ನಾಟಕ: 103 (26.2 ಓವರ್‌ಗಳಲ್ಲಿ)
ಮಯಂಕ್ ಸಿ ಹಿಂಗರೇಜಾ ಬಿ ದೇಸಾಯಿ 19 (29ಎ, 4X4)
ಪಡಿಕ್ಕಲ್ ಸಿ ರಿಪಲ್ ಬಿ ದೇಸಾಯಿ 31 (29ಎ, 4X4, 6X1)
ನಿಕಿನ್ ಸಿ ಹೆಟ್ ಪಟೇಲ್ ಬಿ ದೇಸಾಯಿ 4 (13ಎ, 4X1)
ಶುಭಾಂಗ್ ಸಿ ಹೆಟ್ ಪಟೇಲ್ ಬಿ ವಘೇಲಾ 27 (37ಎ, 4X3, 6X1)
ಪಾಂಡೆ ಸಿ ಪಾಂಚಾಲ್ ಬಿ ದೇಸಾಯಿ 0 (9ಎ)
ಸುಜಯ್ ಬಿ ದೇಸಾಯಿ 2 (6ಎ)
ವೈಶಾಖ ಎಲ್‌ಬಿಡಬ್ಲ್ಯು ಬಿ ದೇಸಾಯಿ 0 (1ಎ)
ಸಮರ್ಥ್ ಸ್ಟಂಪ್ಡ್ ಹೆಟ್ ಪಟೇಲ್ ಬಿ ವಘೇಲಾ 2 (4ಎ)
ರೋಹಿತ್ ಸಿ ಬದಲೀ ಫೀಲ್ಡರ್ ಎಚ್ ಪಟೇಲ್ ಬಿ ದೇಸಾಯಿ 0 (10ಎ)
ಕೌಶಿಕ್ ಔಟಾಗದೆ 4 (10ಎ)
ಪ್ರಸಿದ್ಧ ಬಿ ವಘೇಲಾ 7 (10ಎ, 6X1)
ಇತರೆ: 7 (ಲೆಗ್‌ಬೈ 6, ವೈಡ್ 1)
ವಿಕೆಟ್ ಪತನ: 1–50 (ಮಯಂಕ್ ಅಗರವಾಲ್; 9.2), 2–55 (ದೇವದತ್ತ ಪಡಿಕ್ಕಲ್; 11.1), 3–56 (ನಿಕಿನ್ ಜೋಸ್; 11.6), 4–62 (ಮನೀಷ್ ಪಾಂಡೆ; 15.3), 5–74 (ಸುಜಯ್ ಸತೇರಿ; 17.2), 6–74 (ವೈಶಾಖ ವಿಜಯಕುಮಾರ್; 17.3), 7–77 (ಆರ್. ಸಮರ್ಥ್; 18.3), 8–92 (ಶುಭಾಂಗ್ ಹೆಗಡೆ; 22.5), 9–92 (ರೋಹಿತ್ ಕುಮಾರ್; 23.1), 10–103 (ಪ್ರಸಿದ್ಧ ಕೃಷ್ಣ; 26.2).
ಬೌಲಿಂಗ್: ಸಿದ್ಧಾರ್ಥ್ ದೇಸಾಯಿ 13–4–42–7, ಚಿಂತನ್ ಗಜ 2–0–12–0, ರಾಕೇಶ್ ವಘೇಲಾ 10.2–3–38–3, ಅರ್ಜನ್ ನಾಗವಸ್ವಾಲಾ 1–0–5–0.
ಪಂದ್ಯಶ್ರೇಷ್ಠ: ಸಿದ್ಧಾರ್ಥ್ ದೇಸಾಯಿ

ಫಲಿತಾಂಶ: ಗುಜರಾತ್ ತಂಡಕ್ಕೆ 6 ರನ್‌ಗಳ ಜಯ, 6 ಅಂಕ

'ಕ್ರಿಕೆಟಿಗನಾಗದಿದ್ದರೆ ಐಐಟಿಗೆ ಹೋಗುತ್ತಿದ್ದ'

ಬೆಂಗಳೂರು: 'ನನ್ನ ಮಗ ಓದಿನಲ್ಲಿ ತುಂಬಾ ಜಾಣ. ಶೇ 97ರಷ್ಟು ಅಂಕಗಳನ್ನು ಪಡೆಯುತ್ತಾನೆ. ಐಐಟಿಗೆ ಹೋಗುವ ಸಾಮರ್ಥ್ಯ ಮತ್ತು ಪ್ರತಿಭೆ ಇರುವ ಹುಡುಗ. ಆದರೆ ಕ್ರಿಕೆಟ್ ಆಟವನ್ನು ಆಯ್ಕೆ ಮಾಡಿಕೊಂಡು ದೊಡ್ಡ ಸಾಧನೆಯತ್ತ ಹೆಜ್ಜೆ ಇಟ್ಟಿದ್ದಾನೆ. ಆತನ ಬೆಳವಣಿಗೆಗೆ ಎಲ್ಲ ರೀತಿಯ ಪ್ರೋತ್ಸಾಹ ನೀಡಲು ನಾವು ಬದ್ಧ'–

ಶಿವಮೊಗ್ಗದಲ್ಲಿ ನಡೆದ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಅಜೇಯ 404 ರನ್ ಹೊಡೆದು ದಾಖಲೆ ಬರೆದ ಪ್ರಖರ್ ಚತುರ್ವೇದಿಯ ತಂದೆ ಸಂಜಯಕುಮಾರ್ ಅವರ ಹೆಮ್ಮೆಯ ನುಡಿಗಳು ಇವು. ಮೂಲತಃ ಮಧ್ಯಪ್ರದೇಶದವರಾದ ಸಂಜಯಕುಮಾರ್ ಎಂಜಿನಿಯರ್ ಆಗಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿ ಸಾಫ್ಟ್‌ವೇರ್ ಉದ್ಯಮ ನಡೆಸುತ್ತಿದ್ದಾರೆ. ಅವರ ಪತ್ನಿ ರೂಪಾ ಅವರು ಡಿ.ಆರ್‌.ಡಿ.ಒ (ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ)ದಲ್ಲಿ ತಾಂತ್ರಿಕ ಅಧಿಕಾರಿಯಾಗಿದ್ದಾರೆ.

ತಮ್ಮ ಪುತ್ರನ ಸಾಧನೆಯ ಕುರಿತು 'ಪ್ರಜಾವಾಣಿ' ಯೊಂದಿಗೆ ಮಾತನಾಡಿದ ಸಂಜಯಕುಮಾರ್, 'ಪ್ರಖರ್ ಎಂಟು ವರ್ಷದವನಿದ್ದಾಗಿನಿಂದಲೂ ಮನೆಯ ಹತ್ತಿರ ತನ್ನ ಗೆಳೆಯರೊಂದಿಗೆ ಕ್ರಿಕೆಟ್ ಆಡುತ್ತಿದ್ದ. ವಿಶ್ವವಿದ್ಯಾಲಯ ಮಟ್ಟದಲ್ಲಿ ಕ್ರಿಕೆಟ್ ಆಡಿದ್ದ ನನ್ನ ಸ್ನೇಹಿತರೊಬ್ಬರು ಪ್ರಖರ್ ಆಟವನ್ನು ನೋಡಿದ್ದರು. ಚೆಂಡಿನ ಚಲನೆಯನ್ನು ಚುರುಕಾಗಿ ಗುರುತಿಸಿ ಉತ್ತಮ ಹೊಡೆತಗಳನ್ನು ಪ್ರಯೋಗಿಸುವ ಕಲೆ ಇದೆ. ಉತ್ತಮ ಕೋಚ್ ಬಳಿ ತರಬೇತಿಗೆ ಹಾಕಿ ಎಂದು ಸಲಹೆ ನೀಡಿದ್ದರು. ನಾನು ಅದಕ್ಕೆ ಸ್ಪಂದಿಸಿದೆ' ಎಂದರು.

'ಪ್ರಕಾಶ್ ಪಡುಕೋಣೆ–ದ್ರಾವಿಡ್ ಸ್ಪೋರ್ಟ್ಸ್ ಎಕ್ಸಲೆನ್ಸಿಯಲ್ಲಿರುವ ಸಿಕ್ಸ್ ಕ್ರಿಕೆಟ್ ಅಕಾಡೆಮಿಯಲ್ಲಿ ಪ್ರಖರ್ ತರಬೇತಿ ಪಡೆಯುತ್ತಿದ್ದಾನೆ. ಅಲ್ಲಿ ಕಾರ್ತಿಕ್ ಜೆಶ್ವಂತ್ ಮಾರ್ಗದರ್ಶನ ನೀಡುತ್ತಿದ್ದಾರೆ. ಪ್ರಖರ್‌ಗೆ ರಂಜನ್ ಅವರು ವೈಯಕ್ತಿಕ ಕೋಚ್ ಆಗಿದ್ದಾರೆ' ಎಂದರು.

'19 ವರ್ಷದೊಳಗಿನವರ ಏಷ್ಯಾ ಕಪ್ ಮತ್ತು ವಿಶ್ವಕಪ್ ಟೂರ್ನಿಗಳಲ್ಲಿ ಆಡುವ ಭಾರತ ತಂಡಕ್ಕೆ ಆಯ್ಕೆಯಾಗಲಿಲ್ಲ. ಈ ಬಾರಿಯ ಟೂರ್ನಿಯಲ್ಲಿ ಎರಡು ಶತಕಗಳ ಸಹಿತ ಒಟ್ಟು 791 ರನ್ ಗಳಿಸಿದ್ದಾರೆ. ನಿತ್ಯ 5 ತಾಸು ಕ್ರಿಕೆಟ್‌ಗೆ ಮೀಸಲಿಟ್ಟಿದ್ದಾರೆ' ಎಂದರು.

ಆಸ್ಟ್ರೇಲಿಯಾ ಓಪನ್: ಮರ್‍ರೆ ನಿರ್ಗಮನ

ಮೆಲ್ಬರ್ನ್ (ಎಎಫ್‌ಪಿ): ಅರ್ಜೆಂಟೀನಾದ ಯುವ ಆಟಗಾರ ಥಾಮಸ್ ಮಾರ್ಟಿನ್ ಎಟ್ಚೆವೆರಿ ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಬ್ರಿಟನ್‌ನ ಅನುಭವಿ ಆಟಗಾರ ಆ್ಯಂಡಿ ಮರ್‍ರೆ ಅವರಿಗೆ ಸೋಲಿನ ಆಘಾತ ನೀಡಿದರು.

ಸೋಮವಾರ ನಡೆದ ಪಂದ್ಯದಲ್ಲಿ 30ನೇ ಶ್ರೇಯಾಂಕದ ಥಾಮಸ್ 6-4, 6-2, 6-2 ರಿಂದ ಐದು ಬಾರಿಯ ಫೈನಲಿಸ್ಟ್ ಆಟಗಾರ ಮರ್‍ರೆಯನ್ನು ಸೋಲಿಸಿದರು. 36 ವರ್ಷದ ಆ್ಯಂಡಿ ಅವರು ಮೊದಲ ಗೇಮ್‌ನಲ್ಲಿ ಪ್ರತಿರೋಧ ತೋರಿದರು.

ಆದರೆ, ಎರಡನೇ ಮತ್ತು ಮೂರನೇ ಗೇಮ್‌ನಲ್ಲಿ ಅರ್ಜೆಂಟೀನಾ ಆಟಗಾರ ಸಂಪೂರ್ಣ ಪಾರಮ್ಯ ಮೆರೆದರು.

'ಆ್ಯಂಡಿಯಂತಹ ದಿಗ್ಗಜ ಆಟಗಾರನೊಂದಿಗೆ ಆಡುವುದು ನನಗೆ ತುಂಬಾ ಸವಾಲಾಗಿತ್ತು. ನನ್ನ ಆದರ್ಶ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಅವರ ವಿರುದ್ಧ ಜಯ ಸಾಧಿಸಿರುವುದು ಖುಷಿ ತಂದಿದೆ' ಎಂದು 24 ವರ್ಷ ಥಾಮಸ್ ಪ್ರತಿಕ್ರಿಯಿಸಿದರು.

ಕಳೆದ ವರ್ಷ ಫ್ರೆಂಚ್ ಓಪನ್ ಟೆನಿಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ ಥಾಮಸ್, ಮುಂದಿನ ಸುತ್ತಿನಲ್ಲಿ ಫ್ರಾನ್ಸ್‌ನ ಗೇಲ್ ಮೊನ್ಫಿಲ್ಸ್ ಅವರನ್ನು ಎದುರಿಸಲಿದ್ದಾರೆ. ಅಲ್ಲಿ ಗೆದ್ದರೆ, ಮೂರನೇ ಸುತ್ತಿನಲ್ಲಿ ಸರ್ಬಿಯಾದ ಅಗ್ರಶ್ರೇಯಾಂಕದ ನೊವಾಕ್ ಜೊಕೊವಿಚ್ ಅವರು ಎದುರಾಗುವ ಸಾಧ್ಯತೆ ಇದೆ.

2023ರಲ್ಲೂ ನಿರಾಶಾದಾಯಕ ಪ್ರದರ್ಶನ ನೀಡಿದ್ದ ಆ್ಯಂಡಿ, ಲಯ ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಅವರು ಕಳೆದ ನಾಲ್ಕು ಟೂರ್ನಿಗಳಲ್ಲಿ ಕೇವಲ ಒಂದು ಪಂದ್ಯವನ್ನು ಮಾತ್ರ ಗೆದ್ದಿದ್ದಾರೆ. 2012ರಲ್ಲಿ ಅಮೆರಿಕ ಓಪನ್, 2013 ಮತ್ತು 2016ರಲ್ಲಿ ವಿಂಬಲ್ಡನ್ ಗೆದ್ದಿದ್ದರು. ಆಸ್ಟ್ರೇಲಿಯಾ ಓಪನ್‌ನಲ್ಲಿ ಐದು ಬಾರಿ ಫೈನಲ್ ಪ್ರವೇಶಿಸಿದ್ದರು.

ಒಸಾಕಾಗೆ ಆಘಾತ: ಎರಡು ಬಾರಿ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ನವೊಮಿ ಒಸಾಕಾ ಅವರು ಮಹಿಳೆಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ಆಘಾತ ಅನುಭವಿಸಿದರು. ನವೊಮಿ ಅವರು 4–6, 6–7 (2-7) ರಿಂದ ಫ್ರಾನ್ಸ್‌ನ ಕ್ಯಾರೊಲಿನ್ ಗಾರ್ಸಿಯಾ ಅವರಿಗೆ ಮಣಿದರು. ಅವರು 2019 ಮತ್ತು 2021ರಲ್ಲಿ ಇಲ್ಲಿ ಪ್ರಶಸ್ತಿ ಗೆದ್ದಿದ್ದರು.

ಮತ್ತೊಂದೆಡೆ 2023ರ ವಿಂಬಲ್ಡನ್ ಪ್ರಶಸ್ತಿ ವಿಜೇತೆ ಜೆಕ್ ಗಣರಾಜ್ಯದ ಮಾರ್ಕೆಟಾ ವೊಂಡ್ರೊಸೊವಾ ಅವರೂ ಮೊದಲ ಸುತ್ತಿನಲ್ಲಿ ನಿರ್ಗಮಿಸಿದರು. ಅವರು ಉಕ್ರೇನ್‌ನ ಡಯಾನಾ ಯಾಸ್ಟ್ರೆಮ್ಸ್ಕಾ ವಿರುದ್ಧ 6-1, 6-2ರಿಂದ ಪರಾಭವಗೊಂಡರು.

ಪುರುಷರ ಸಿಂಗಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೆವ್ ಅವರು ಎರಡನೇ ಸುತ್ತು ಪ್ರವೇಶಿಸಿದರು. ಅವರು 5-7, 6-2, 6-4, 1-0ರಿಂದ ಫ್ರಾನ್ಸಿನ ಟೆರೆನ್ಸ್ ಅಟ್ಮಾನೆ ಅವರನ್ನು ಮಣಿಸಿದರು.

2023ರ ಅಮೆರಿಕ ಓಪನ್ ವಿಜೇತೆ ಕೊಕೊ ಗಾಫ್ ಅವರು ಮಹಿಳೆಯರ ಸಿಂಗಲ್ಸ್‌ನ ಪಂದ್ಯದಲ್ಲಿ 6-3, 6-0ಯಿಂದ ಅನ್ನಾ ಕರೋಲಿನಾ ಅವರನ್ನು ಸೋಲಿಸಿ ಮುನ್ನಡೆದರು.

ಕೊಕೊ ಗಾಫ್ –ಎಎಫ್‌ಪಿ ಚಿತ್ರ

ಗೇಮಿಂಗ್ ಆ್ಯಪ್ ಪರ ಪ್ರಚಾರದ ವಿಡಿಯೊ ನಕಲಿ : ಸಚಿನ್ ಸ್ಪಷ್ಟನೆ

ನವದೆಹಲಿ (ಪಿಟಿಐ): 'ಬಳಕೆದಾರರು ಸುಲಭವಾಗಿ ಹಣ ಗಳಿಸಲು ಗೇಮಿಂಗ್ ಆ್ಯಪ್‌ವೊಂದನ್ನು ಬಳಸುವಂತೆ ನಾನು ಪ್ರಚಾರ ಮಾಡುತ್ತಿರುವಂತೆ ಹರಿದಾಡುತ್ತಿರುವ ವಿಡಿಯೊ ನಕಲಿ' ಎಂದು ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಸೋಮವಾರ ಸ್ಪಷ್ಟಪಡಿಸಿದ್ದಾರೆ.

ಸಚಿನ್

ಈ ಕುರಿತು ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿರುವ ತಮ್ಮ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ತಂತ್ರಜ್ಞಾನದ ದುರುಪಯೋಗದ ಬಗ್ಗೆ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ವಿಡಿಯೊದಲ್ಲಿ ಸಚಿನ್ ಆ್ಯಪ್‌ನ ಪ್ರಯೋಜನಗಳ ಬಗ್ಗೆ ಮಾತನಾಡುವುದು. ಹಣ ಸಂಪಾದಿಸುವುದು ತುಂಬಾ ಸುಲಭ ಮತ್ತು ನನ್ನ ಮಗಳು ಹಣ ಗಳಿಸಲು ಈ ಆ್ಯಪ್ ಸಹಕಾರಿಯಾಗಿದೆ ಎಂಬುದು ತನಗೆ ತಿಳಿದಿರಲಿಲ್ಲ ಎಂದು ಹೇಳಿರುವುದನ್ನು ತೋರಿಸಲಾಗಿದೆ.

'ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವಿಡಿಯೊ ನಕಲಿ. ತಂತ್ರಜ್ಞಾನವನ್ನು ವ್ಯಾಪಕವಾಗಿ ದುರ್ಬಳಕೆ ಮಾಡುತ್ತಿರುವುದು ಸರಿಯಲ್ಲ. ಇಂತಹ ವಿಡಿಯೊಗಳು, ಆ್ಯಪ್‌ಗಳು ಹಾಗೂ ಜಾಹೀರಾತುಗಳ ಬಗ್ಗೆ ಪ್ರತಿಯೊಬ್ಬರು ದೂರು ನೀಡಬೇಕು' ಎಂದೂ ಅವರು ಮನವಿ ಮಾಡಿದ್ದಾರೆ. ವಿಡಿಯೊದಲ್ಲಿ ಬಳಸಲಾದ ಆಡಿಯೊ ಸಹ ಸಚಿನ್ ಧ್ವನಿಗೆ ಹೊಂದಿಕೆ ಆಗಿದೆ.

'ಸಾಮಾಜಿಕ ಮಾಧ್ಯಮ ವೇದಿಕೆಗಳು ಜಾಗರೂಕರಾಗಿರಬೇಕು ಮತ್ತು ದೂರುಗಳಿಗೆ ಸ್ಪಂದಿಸಬೇಕು. ತಪ್ಪು ಮಾಹಿತಿ ಪ್ರಚಾರ ತಡೆಯಲು ಕಠಿಣ ಕ್ರಮ ಅಗತ್ಯ' ಎಂದು ಹೇಳಿದ್ದಾರೆ.

'ಕಠಿಣ ನಿಯಮ ಶೀಘ್ರ ಜಾರಿ'

ಸಚಿನ್ ತೆಂಡೂಲ್ಕರ್ ಅವರ ಪೋಸ್ಟ್‌ಗೆ ಪ್ರತಿಕ್ರಿಯಿಸಿದ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕಠಿಣ ನಿಯಮಗಳನ್ನು ಸರ್ಕಾರ ಶೀಘ್ರದಲ್ಲೇ ಜಾರಿಗೆ ತರಲಿದೆ ಎಂದು ಹೇಳಿದರು.

ನಟರಾದ ಟಾಮ್ ಹ್ಯಾಂಕ್ಸ್ ಮತ್ತು ರಶ್ಮಿಕಾ ಮಂದಣ್ಣ ಇತ್ತೀಚಿನ ದಿನಗಳಲ್ಲಿ ಡೀಪ್ ಫೇಕ್ ಗಳಿಗೆ ಒಳಗಾದ ಗಣ್ಯರ ಪಟ್ಟಿಗೆ ಸೇರಿದ್ದಾರೆ.

ಟೆನಿಸ್: ಪ್ರಧಾನ ಸುತ್ತಿಗೆ ವೈದೇಹಿ

ಬೆಂಗಳೂರು: ಭಾರತದ ವೈದೇಹಿ ಚೌಧರಿ ಅವರು ಇಲ್ಲಿನ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾಗಲಿರುವ ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೆನಿಸ್ ಟೂರ್ನಿಯ ಪ್ರಧಾನ ಸುತ್ತು ಪ್ರವೇಶಿಸಿದರು.

23 ವರ್ಷದ ವೈದೇಹಿ ಸೋಮವಾರ ನಡೆದ ಮಹಿಳಾ ಸಿಂಗಲ್ಸ್‌ನ ಕ್ವಾಲಿಫೈಯರ್‌ನ ಅಂತಿಮ ಸುತ್ತಿನಲ್ಲಿ 6-2, 6-2ರಿಂದ ಥಾಯ್ಲೆಂಡ್‌ನ ಥಾಸಪೋರ್ನ್ ನಕ್ಲೊ ಅವರನ್ನು ಮಣಿಸಿ ಮುನ್ನಡೆದರು. ಆದರೆ, ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ ಮತ್ತು ಝೀಲ್ ದೇಸಾಯಿ ಅವರು ಮುಖ್ಯಸುತ್ತು ಪ್ರವೇಶಿಸಲು ವಿಫಲವಾದರು.

ಕ್ವಾಲಿಫೈಯರ್‌ನಿಂದ ಎಂಟು ಮಂದಿ ಮುಖ್ಯಸುತ್ತಿಗೆ ಅರ್ಹತೆ ಪಡೆದಿದ್ದು, ಅದರಲ್ಲಿ ವೈದೇಹಿ ಮಾತ್ರ ಭಾರತದ ಆಟಗಾರ್ತಿಯಾಗಿದ್ದಾರೆ. ಈ ಮಧ್ಯೆ ಭಾರತದ ಅಂಕಿತಾ ರೈನಾ ಅವರು 8ನೇ ಶ್ರೇಯಾಂಕದೊಂದಿಗೆ ಪ್ರಧಾನ ಸುತ್ತಿನಲ್ಲಿ ಕಣಕ್ಕೆ ಇಳಿಯಲಿದ್ದಾರೆ. ಉಳಿದಂತೆ ಭಾರತದ ಸೋಹಾ ಸಾದಿಕ್, ಋತುಜಾ ಭೋಸ್ಲೆ, ಸಹಜಾ ಯಮಲಪಲ್ಲಿ ಮತ್ತು ಸುಹಿತಾ ಮರೂರಿ ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದಿದ್ದಾರೆ.

ಲಾಟ್ವಿಯಾದ ದರ್ಜಾ ಸೆಮೆನಿಸ್ಟಾಜಾ ಅವರಿಗೆ ಅಗ್ರ ಶ್ರೇಯಾಂಕ ದೊರಕಿದ್ದು, ಫ್ರಾನ್ಸ್‌ನ ಕ್ಲೋಯ್ ಪ್ಯಾಕ್ವೆಟ್ 2ನೇ ಶ್ರೇಯಾಂಕ ಪಡೆದಿದ್ದಾರೆ. ರಷ್ಯಾದ ಎಕಟೆರಿನಾ ಮಕರೋವಾ ಮತ್ತು ಮೊಯುಕಾ ಉಚಿಜಿಮಾ ಕ್ರಮವಾಗಿ ಮೂರು ಮತ್ತು ನಾಲ್ಕನೇ ಶ್ರೇಯಾಂಕವನ್ನು ಗಳಿಸಿದ್ದಾರೆ.

ಅರ್ಹತಾ ಪಂದ್ಯಗಳ ಫಲಿತಾಂಶ: ಜಪಾನ್‌ನ ಮೇ ಯಮಗುಚಿ 1-6, 6-2, 6-2ರಿಂದ ಲಾಕ್ವಿಯಾದ ಡಯಾನಾ ಮಾರ್ಸಿಂಕೆವಿಕಾ ವಿರುದ್ಧ; ಆಸ್ಟ್ರೇಲಿಯಾದ ಟೀನಾ ನಡಿನ್ ಸ್ಮಿತ್ 6-2, 7-5ರಿಂದ ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ ವಿರುದ್ಧ; ಜಪಾನ್‌ನ ನಹೋ ಸಾಟೊ 6-2, 6-2ರಿಂದ ಥಾಯ್ಲೆಂಡ್‌ನ ಪುನ್ನಿನ್ ಕೊವಾಪಿಟುಕ್ಟೆಡ್ ವಿರುದ್ಧ; ಜರ್ಮನಿಯ ಲೀನಾ ಪಪಡಕಿಸ್ 6-4, 6-1ರಿಂದ ಜಪಾನ್‌ನ ರಿನಾ ಸೈಗೊ ವಿರುದ್ಧ; ಜಪಾನ್‌ನ ಎರಿ ಶಿಮಿಜು 6-4, 6-0ಯಿಂದ ಸ್ವದೇಶದ ಮನ ಕವಾಮುರಾ ವಿರುದ್ಧ; ಭಾರತದ ವೈದೇಹಿ ಚೌಧರಿ 6-2, 6-2ರಿಂದ ಥಾಯ್ಲೆಂಡ್‌ನ ಥಾಸಪೋರ್ನ್ ನಕ್ಲೊ ವಿರುದ್ಧ; ಜೆಕ್ ಗಣರಾಜ್ಯದ ಅನ್ನಾ ಸಿಸ್ಕೋವಾ 6-1, 6-2ರಿಂದ ಝೀಲ್ ದೇಸಾಯಿ ವಿರುದ್ಧ ಗೆಲುವು ದಾಖಲಿಸಿದರು.

ಭಾರತದ ವೈದೇಹಿ ಚೌಧರಿ

ಶೂಟಿಂಗ್: ಯೋಗೇಶ್‌ಗೆ ಡಬಲ್ ಚಿನ್ನ

ಜಕರ್ತಾ (ಪಿಟಿಐ): ಭಾರತದ ಶೂಟರ್ ಯೋಗೇಶ್ ಸಿಂಗ್ ಅವರು ಏಷ್ಯನ್ ಒಲಿಂಪಿಕ್ಸ್ ಕ್ವಾಲಿಫೈಯರ್ಸ್‌ನಲ್ಲಿ ಸೋಮವಾರ ನಡೆದ ಪುರುಷರ 25 ಮೀಟರ್ ಸೆಂಟರ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ವೈಯಕ್ತಿಕ ಹಾಗೂ ತಂಡ ವಿಭಾಗದಲ್ಲಿ ಚಿನ್ನ ಗೆದ್ದಿದ್ದಾರೆ. ವೈಯಕ್ತಿಕ ವಿಭಾಗದ ಸ್ಪರ್ಧೆಯಲ್ಲಿ 573 ಅಂಕಗಳೊಂದಿಗೆ ಯೋಗೇಶ್ ಅಗ್ರಸ್ಥಾನಿಯಾದರೆ, ಒಮನ್‌ನ ಮುಅದ್ ಅಲ್ ಬಲೂಶಿ (570), ಇಂಡೊನೇಷ್ಯಾದ ಅನಂಗ್ ಯುಲಿಯಾಂಟೊ (567) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಭಾರತದ ಇನ್ನಿಬ್ಬರು ಸ್ಪರ್ಧಿಗಳಾದ ಪಂಕಜ್ ಯಾದವ್ (567) ಮತ್ತು ಅಕ್ಷಯ್ ಜೈನ್ (564) ಅವರು ಕ್ರಮವಾಗಿ ನಾಲ್ಕನೇ ಮತ್ತು ಆರನೇ ಸ್ಥಾನ ಪಡೆದರು.

ಮೂವರನ್ನು ಒಳಗೊಂಡ ತಂಡ ವಿಭಾಗದಲ್ಲೂ ಭಾರತದ ಈ ಆಟಗಾರರು ಒಮನ್ ಮತ್ತು ಇಂಡೊನೇಷ್ಯಾ ತಂಡವನ್ನು ಹಿಂದಿಕ್ಕಿ ಚಿನ್ನದ ಸಾಧನೆ ಮಾಡಿದರು.

ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ

ನವದೆಹಲಿ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಂಗಳವಾರ ಇಲ್ಲಿ ಆರಂಭವಾಗುವ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ಸಾಧನೆಯ ವಿಶ್ವಾಸದಲ್ಲಿದ್ದಾರೆ.

2022ರ ಆವೃತ್ತಿಯಲ್ಲಿ ಸಾತ್ವಿಕ್–ಚಿರಾಗ್ ಅವರು ಇಲ್ಲಿ ಪ್ರಶಸ್ತಿ ಗೆದ್ದಿದ್ದರು.

ಭಾರತ ಬ್ಯಾಡ್ಮಿಂಟನ್ ಸಂಸ್ಥೆ ಆಯೋಜನೆಯ ಟೂರ್ನಿಯನ್ನು ಕಳೆದ ವರ್ಷ 'ಸೂಪರ್ 500'ರಿಂದ 'ಸೂಪರ್ 750'ರ ಮೇಲ್ದರ್ಜೆಗೆ ಏರಿಸಲಾಗಿದೆ.

ಕಳೆದ ಆವೃತ್ತಿಯಲ್ಲಿ ಭಾರತದ ಆಟಗಾರರು ಯಾವುದೇ ವಿಭಾಗದಲ್ಲಿ ಎರಡನೇ ಸುತ್ತು ದಾಖಲು ಸಾಧ್ಯವಾಗದೆ ನಿರಾಸೆ ಅನುಭವಿ ಸಿದ್ದರು. ಕಳೆದ ಆವೃತ್ತಿಯಲ್ಲಿ ಗಾಯದ ಕಾರಣದಿಂದ ಎರಡನೇ ಸುತ್ತಿನಿಂದ ಹಿಂದೆ ಸರಿದಿದ್ದ ಜೋಡಿ, ಪ್ರಸ್ತುತ ಉತ್ತಮ ಲಯದಲ್ಲಿದೆ

ಡಬ್ಲ್ಯುಎಫ್‌ಐ ಕಾರ್ಯಕಾರಿ ಸಭೆ ಇಂದು

ನವದಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ)ನ ಅಮಾನತುಗೊಂಡಿರುವ ನೂತನ ಆಡಳಿತ ಮಂಡಳಿಯು ಮಂಗಳವಾರ ತನ್ನ ಕಾರ್ಯಕಾರಿ ಸಮಿತಿ ಸಭೆ ನಡೆಸಲಿದೆ. ಕ್ರೀಡಾ ಸಚಿವಾಲಯದ ಎಚ್ಚರಿಕೆ ನಡುವೆಯೂ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸುವ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ ಎಂದು ತಿಳಿಸಿದೆ.

ಕಾರ್ಯಕಾರಿ ಸಮಿತಿಗೆ ಡಿ.31ರಂದು ನೋಟಿಸ್ ನೀಡಲಾಗಿದ್ದು, ಹಲವು ರಾಜ್ಯ ಸಂಸ್ಥೆಗಳು ಭಾಗವಹಿಸುವ ನಿರೀಕ್ಷೆ ಇದೆ.

ಜನವರಿ 29 ರಿಂದ 31 ರವರೆಗೆ ಪುಣೆಯಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸುವುದಾಗಿ ಡಬ್ಲ್ಯುಎಫ್‌ಐ ಘೋಷಿಸಿತ್ತು. ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸಲು ಫೆಡರೇಷನ್‌ಗೆ ಯಾವುದೇ ಅಧಿಕಾರವಿಲ್ಲ ಮತ್ತು ಸಂಸ್ಥೆ ಆಯೋಜಿಸುವ ಯಾವುದೇ ಕಾರ್ಯಕ್ರಮವನ್ನು 'ಮಾನ್ಯತೆ ಇಲ್ಲ' ಎಂದು ಪರಿಗಣಿಸಲಾಗುವುದು ಎಂದು ಕ್ರೀಡಾ ಸಚಿವಾಲಯ ಹೇಳಿದೆ.

ಟಿ20: ಟಿಕೆಟ್ ಮಾರಾಟ ಇಂದು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ 17ರಂದು ನಡೆಯಲಿರುವ ಭಾರತ ಮತ್ತು ಅಫ್ಗಾನಿಸ್ತಾನ ನಡುವಣ ಟಿ20 ಕ್ರಿಕೆಟ್ ಪಂದ್ಯದ ಟಿಕೆಟ್ ಮಾರಾಟವು ಮಂಗಳವಾರ ಬೆಳಿಗ್ಗೆ 10 ರಿಂದ 3 ರವರೆಗೆ ಗೇಟ್ ಸಂಖ್ಯೆ 19ರ ಕೌಂಟರ್‌ನಲ್ಲಿ ನಡೆಯಲಿದೆ. ಸೀಮಿತ ಸಂಖ್ಯೆಯ ಟಿಕೆಟ್ ಗಳು ಮಾತ್ರ ಲಭ್ಯವಿದೆ. ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಅಥವಾ ಯುಪಿಐ ಬಳಸಿ ಪಾವತಿಸಬಹುದು. ನಗದು ಸ್ವೀಕರಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಪ್ರೊ ಕಬಡ್ಡಿ: ಎರಡನೇ ಪಂದ್ಯದಲ್ಲಿ ಗೆದ್ದ ಜೈಪುರ ಅಗ್ರಸ್ಥಾನಕ್ಕೆ

ಮೈಲಿಗಲ್ಲಿನ ಪಂದ್ಯದಲ್ಲಿ ಬುಲ್ಸ್‌ಗೆ ನಿರಾಸೆ

• ನಾಗೇಶ್ ಶೆಣೈ

ಜೈಪುರ: ಪ್ರೊ ಕಬಡ್ಡಿ ಲೀಗ್‌ನ ಸಾವಿರನೇ ಪಂದ್ಯ ಬೆಂಗಳೂರು ಬುಲ್ಸ್ ಪಾಲಿಗೆ ಸ್ಮರಣೀಯವಾಗಲಿಲ್ಲ. ವಿರಾಮಕ್ಕೆ ಮೊದಲು ಮತ್ತು ನಂತರ ಒಟ್ಟು ಎರಡು ಬಾರಿ ಮುನ್ನಡೆ ಪಡೆದರೂ ಬೆಂಗಳೂರು ತಂಡ ಸೋಮವಾರ ನಡೆದ ಈ ಮೈಲಿಗಲ್ಲು ಪಂದ್ಯದಲ್ಲಿ 29–35ರಲ್ಲಿ ಬೆಂಗಾಲ್ ವಾರಿಯರ್ಸ್ ತಂಡಕ್ಕೆ ಆರು ಪಾಯಿಂಟ್‌ಗಳಿಂದ ಮಣಿಯಿತು.

ಸವಾಯಿ ಮಾನ್‌ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಬೆಂಗಳೂರು ತಂಡ ಸ್ಥಿರತೆ ಕಾಯ್ದು ಕೊಳ್ಳಲಿಲ್ಲ. ರೈಡಿಂಗ್‌ನಲ್ಲಿ ನೆಚ್ಚಿಕೊಂಡಿದ್ದ ಭರತ್ (10 ಪಾಯಿಂಟ್) ಮೊದಲಾರ್ಧದಲ್ಲಿ ಮಿಂಚಿದರೂ, ನಂತರ ಮಂಕಾದರು. ಉಳಿದ ರೈಡರ್‌ಗಳೂ ನಿರೀಕ್ಷಿತ ಆಟ ಪ್ರದರ್ಶಿಸಲಿಲ್ಲ. ರಕ್ಷಣಾ ವಿಭಾಗದಲ್ಲಿ ಸುರ್ಜಿತ್ ಮೊದಲಾರ್ಧದಲ್ಲಿ ವಿಫಲರಾಗಿದ್ದರು.

ಒಟ್ಟಾರೆ ಸಾಂಘಿಕ ಪ್ರದರ್ಶನ ಕಂಡುಬರಲಿಲ್ಲ. ಬೆಂಗಳೂರಿನ ತಂಡ ಎರಡು ಬಾರಿ ಆಲೌಟ್ ಆಯಿತು. ವಾರಿಯರ್ಸ್ ದ್ವಿತೀಯಾರ್ಧದಲ್ಲಿ ಒಮ್ಮೆ ಆಲೌಟ್ ಆಯಿತು.

ಭರತ್ ಅವರ ಉತ್ತಮ ರೈಡಿಂಗ್ ನೆರವಿನಿಂದ ಬುಲ್ಸ್ ಆರಂಭದಲ್ಲಿ 9–5ರಿಂದ ಮುಂದಿತ್ತು. ಆದರೆ ಮಣಿಂದರ್ ಮತ್ತು ನಿತಿನ್ ಅವರ ರೈಡಿಂಗ್ ಮತ್ತು ರೈಟ್ ಕಾರ್ನರ್ ಡಿಫೆಂಡರ್ ಶುಭಂ ಶಿಂದೆ (8 ಪಾಯಿಂಟ್) ಅವರು ವಾರಿಯರ್ಸ್ ನೆರವಿಗೆ ಬಂದು ತಂಡ 11–10ರಲ್ಲಿ ಮುನ್ನಡೆಯಿತು. 16ನೇ ನಿಮಿಷ ಮೊದಲ ಬಾರಿ ಬುಲ್ಸ್ ಆಲೌಟ್ ಆಯಿತು. ಈ ಮುನ್ನಡೆಯನ್ನು ವಿರಾಮದ ವೇಳೆಗೆ ಬೆಂಗಾಲ್ ತಂಡ 19–12ಕ್ಕೆ ಹೆಚ್ಚಿಸಿತು.

ಉತ್ತರಾರ್ಧದಲ್ಲಿ ಸಬ್‌ಸ್ಟಿಟ್ಯೂಟ್ ವಿಕಾಸ್ ಕಂಡೊಲಾ ಮತ್ತು ನೀರಜ್ ರೈಡಿಂಗ್, ಸುರ್ಜಿತ್ ಅವರ ಮೂರು ಟ್ಯಾಕಲ್ ಬಲದಿಂದ ಬುಲ್ಸ್ ತಂಡ ಚೇತರಿಸಿತು. ಎಂಟನೇ ನಿಮಿಷ ಎದುರಾಳಿಯನ್ನು ಆಲೌಟ್ ಮಾಡಿ 21–19ರಲ್ಲಿ ಮುನ್ನಡೆಯಿತು. ಆದರೆ ನಂತರ ಅದೇ ತಪ್ಪುಗಳು. ರೈಡಿಂಗ್‌ನಲ್ಲಿ ಭರತ್, ಕಂಡೊಲಾ ಎಡವಿದರು. 16ನೇ ನಿಮಿಷ ಬೆಂಗಳೂರು ಆಲೌಟ್ ಆಯಿತು. ಬೆಂಗಾಲ್ ನಾಯಕ ಮಣಿಂದರ್ ಆರಂಭದಲ್ಲಿ ಎಡವಿದರೂ ನಂತರ ಒಟ್ಟು 9 ಪಾಯಿಂಟ್‌ಗಳಿಸಿದರು.

ಬುಲ್ಸ್ ತಂಡಕ್ಕೆ 13 ಪಂದ್ಯಗಳಲ್ಲಿ ಇದು ಎಂಟನೇ ಸೋಲು. ಐದು ಗೆದ್ದು 32 ಪಾಯಿಂಟ್‌ಗಳೊಂದಿಗೆ 9ನೇ ಸ್ಥಾನದಲ್ಲಿದೆ. ವಾರಿಯರ್ಸ್ 13 ಪಂದ್ಯದಲ್ಲಿ ಆರನೇ ಗೆಲುವಿನೊಡನೆ ಆರನೇ ಸ್ಥಾನಕ್ಕೇರಿತು. ಅದು ಎರಡು ಪಂದ್ಯ ಟೈ ಮಾಡಿಕೊಂಡಿದೆ.

ಜೈಪುರಕ್ಕೆ ಜಯ: ತೀವ್ರ ಹೋರಾಟದಿಂದ ಕೂಡಿದ್ದ ದಿನದ ಎರಡನೇ ಪಂದ್ಯದಲ್ಲಿ ಆತಿಥೇಯ ಜೈಪುರ ಪಿಂಕ್ ಪ್ಯಾಂಥರ್ಸ್ ಹಿನ್ನಡೆಯಿಂದ ಚೇತರಿಸಿ 31–29 ರಿಂದ ಯು ಮುಂಬಾ ತಂಡವನ್ನು ಸೋಲಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. 13 ಪಂದ್ಯಗಳಿಂದ ಅದು (9 ಜಯ, 2 ಸೋಲು, 2 ಟೈ) 53 ಪಾಯಿಂಟ್ಸ್ ಸಂಗ್ರಹಿಸಿ, ಪುಣೇರಿ ಪಲ್ಟನ್ ತಂಡವನ್ನು ಎರಡನೇ ಸ್ಥಾನಕ್ಕೆ ಸರಿಸಿತು.

ಸನ್ಮಾನ: ಪ್ರೊ ಕಬಡ್ಡಿ ಲೀಗ್‌ನ ಹಿರಿಯ ಆಟಗಾರರಾದ ಅನೂಪ್ ಕುಮಾರ್, ಮಂಜಿತ್ ಚಿಲ್ಲರ್, ಅಜಯ್ ಠಾಕೂರ್, ಧರ್ಮರಾಜ್ ಚೇರುಲತಾನ್ ಮತ್ತು ರಿಷಾಂಕ್ ದೇವಾಡಿಗ (ಕರ್ನಾಟಕದವರು) ಅವರಿಗೆ ಚಿನ್ನದ ನಾಣ್ಯದ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಮತ್ತು ಬೆಂಗಾಲ್ ವಾರಿಯರ್ಸ್ ನಡುವೆ ಹಣಾಹಣಿ